# ಕಾರ್ಮಿಕ ದೃಷ್ಟಿಕೋನ

SUCI(C) ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ–ಕಮ್ಯುನಿಸ್ಟ್
ಕರ್ನಾಟಕ ರಾಜ್ಯ ಸಮಿತಿಯ ಮಾಸಿಕ ಮುಖಪತ್ರಿಕೆ

ಸಂಪುಟ: 37 । ಸಂಚಿಕೆ: 01 । ಮಾರ್ಚ್ 2024 । ಬೆಲೆ: ರೂ. 7/-


## ಒಳಪುಟಗಳಲ್ಲಿ


370ನೇ ವಿಧಿಯನ್ನು ರದ್ದುಗೊಳಿಸಿದ ನಂತರದ ಕಾಶ್ಮೀರದ ಸ್ಥಿತಿಗತಿ.............................. 2

ಮಧ್ಯಂತರ ಬಜೆಟ್ 2024.................................... 3

ಆಶಾ ಕಾರ್ಯಕರ್ತೆಯರ ಅಹೋರಾತ್ರಿ ಹೋರಾಟ ........................... 6

ವಿಶ್ವದಾದ್ಯಂತ ಉಕ್ಕುತ್ತಿರುವ ಜನಾಂದೋಲನಗಳ ಮಹಾಪೂರ ........................ 8

ಒಕ್ಕೂಟದೊಳಗೊಂದು ಹಣಕಾಸಿನ ತಿಕ್ಕಾಟ .......... 10


# ಬದುಕನ್ನು ದುರ್ಭರವಾಗಿಸುತ್ತಿರುವ ಸರ್ಕಾರಗಳ ವಿರುದ್ಧ – ಎಸ್‌ಯುಸಿಐ(ಸಿ) ರಾಜ್ಯಮಟ್ಟದ ಪ್ರತಿಭಟನೆ

### "ಕೇಂದ್ರ ಸರ್ಕಾರವು ಎಲ್ಲರನ್ನು ಭ್ರಮೆಯಲ್ಲಿ ಮುಳುಗಿಸಿ ಫ್ಯಾಸೀವಾದಿ ಕ್ರಮಗಳ ಮೂಲಕ ಬಂಡವಾಳಗಾರರ ಸೇವೆಯಲ್ಲಿ ತೊಡಗಿದೆ"
### – ಕೆ. ರಾಧಾಕೃಷ್ಣ. ಪಾಲಿಟ್‌ಬ್ಯೂರೋ ಸದಸ್ಯರು, ಎಸ್‌ಯುಸಿಐ(ಸಿ)

ನಮ್ಮ ಪಕ್ಷ ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ(ಕಮ್ಯುನಿಸ್ಟ್) ರಾಜ್ಯ ಸಮಿತಿಯ ನೇತೃತ್ವದಲ್ಲಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನರ ಜ್ವಲಂತ ಸಮಸ್ಯೆಗಳ ವಿರುದ್ಧ ಮಾರ್ಚ್ 6ರಂದು ಬೃಹತ್ ಪ್ರತಿಭಟನಾ ಸಭೆ 'ಬೆಂಗಳೂರು ಚಲೋ'ವನ್ನು ನಡೆಸಲಾಯಿತು. 20ಕ್ಕೂ ಹೆಚ್ಚು ಜಿಲ್ಲೆಗಳಿಂದ ಆಗಮಿಸಿದ್ದ ಸಾವಿರಾರು ಜನ ಬಡ ಕೃಷಿಕೂಲಿ ಕಾರ್ಮಿಕರು, ಕಾರ್ಮಿಕರು, ರೈತರು, ಬಗರ್‌ಹುಕುಂ ರೈತರು, ಮಹಿಳೆಯರು, ವಿದ್ಯಾರ್ಥಿ–ಯುವಜನರು ತಮ್ಮ ಆಕ್ರೋಶವನ್ನು ದಾಖಲಿಸಿದರು. ಹೋರಾಟದ ಹುರುಪು ತುಂಬುವ ಕ್ರಾಂತಿ ಗೀತೆಗಳೊಂದಿಗೆ ಸಭೆಯು ಆರಂಭವಾಯಿತು. ಅನತಿ ದೂರದಲ್ಲೇ ಕುಳಿತಿರುವ ಆಳ್ವಿಕರಿಗೆ ಕಿವಿತಟ್ಟುವಂತೆ ಪ್ರತಿಭಟನಾಕಾರರು ಘೋಷಣೆಗಳನ್ನು ಹಾಕಿದರು. ಬೆಲೆ ಏರಿಕೆ ನಿಯಂತ್ರಿಸಬೇಕು, ಬಗರ್‌ಹುಕುಂ ರೈತರಿಗೆ ಹಕ್ಕುಪತ್ರ ನೀಡಬೇಕು, ನರೇಗಾ ಕೂಲಿಯನ್ನು ಹೆಚ್ಚಿಸಬೇಕು, ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು, ಮಹಿಳೆಯರಿಗೆ ಭದ್ರತೆಯನ್ನು ಒದಗಿಸಬೇಕು, ಶಿಕ್ಷಣದ ವ್ಯಾಪಾರ ನಿಲ್ಲಬೇಕು, ಬೆಳೆಗಳಿಗೆ ವೈಜ್ಞಾನಿಕ ಬೆಂಬಲ ಬೆಲೆಯನ್ನು ಖಾತ್ರಿಪಡಿಸಬೇಕು, ವಿದ್ಯುತ್ ಕಾಯ್ದೆ–2020 ಹಿಂಪಡೆಯಬೇಕು ಮುಂತಾದ ಘೋಷಣೆಗಳು ಮೊಳಗಿದವು.



ಪ್ರತಿಭಟನಾ ಸಭೆಯನ್ನುದ್ದೇಶಿಸಿ ಮುಖ್ಯಭಾಷಣಕಾರರಾಗಿ ಮಾತನಾಡಿದ ನಮ್ಮ ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯರಾದ ಕಾಮ್ರೇಡ್ ಕೆ. ರಾಧಾಕೃಷ್ಣ, ದೇಶದ ಕಾರ್ಮಿಕರು, ರೈತರು, ಕೃಷಿ ಕೂಲಿಕಾರರು, ವಿದ್ಯಾರ್ಥಿ – ಯುವಜನರು ಹಾಗೂ ಮಧ್ಯಮ ವರ್ಗದ ಜನರು ಸೇರಿದಂತೆ ಹಳ್ಳಿಗರು ಮತ್ತು ನಗರಗಳ ಜನರ ಜೀವನ ಪರಿಸ್ಥಿತಿಯು ಬಹಳ ಕೆಟ್ಟದಾಗಿದೆ. ದೇಶದಲ್ಲಿ ಬೆಲೆ ಏರಿಕೆ, ನಿರುದ್ಯೋಗ, ಶಿಕ್ಷಣ–ಆರೋಗ್ಯ ಕ್ಷೇತ್ರಗಳ ವ್ಯಾಪಾರೀಕರಣದಿಂದ ಜನರು ಬಸವಳಿದಿದ್ದಾರೆ. ಜನವಿರೋಧಿ ನೀತಿಗಳನ್ನು ಕಾಂಗ್ರೆಸ್ ಮೊದಲಿಗೆ ಜಾರಿಗೆ ತಂದಿತು. ಭ್ರಷ್ಟ, ಜನವಿರೋಧಿ ಕಾಂಗ್ರೆಸ್ ಪಕ್ಷಕ್ಕೆ ತಾನು ಪರ್ಯಾಯ ಎಂದು ಬಿಂಬಿಸಿಕೊಂಡು ಬಿಜೆಪಿ ಅಧಿಕಾರಕ್ಕೆ ಬಂದಿತು. ಆದರೆ, ಕಳೆದ 10 ವರ್ಷಗಳಲ್ಲಿ ಬಿಜೆಪಿ ಸರ್ಕಾರವು ಜನರಲ್ಲಿ ಭ್ರಮೆಯನ್ನು ಸೃಷ್ಟಿಸಿ, ಅವರನ್ನು ದಿಕ್ಕು ತಪ್ಪಿಸಿ ಅದೇ ಶ್ರೀಮಂತರ ಪರವಾದ ಖಾಸಗೀಕರಣ, ಜಾಗತೀಕರಣ, ಉದಾರೀಕರಣ ನೀತಿಗಳನ್ನು ವೇಗವಾಗಿ ಜಾರಿಗೊಳಿಸಿದೆಯೇ ವಿನ: ಇನ್ನಾವ ಜನಕಲ್ಯಾಣವನ್ನು ಮಾಡಿಲ್ಲ. ಇರುವ ಸಾರ್ವಜನಿಕ ಸಂಪತ್ತನ್ನು ಖಾಸಗಿ ಲಾಭಕ್ಕಾಗಿ ಖಾಸಗಿ ವಲಯಕ್ಕೆ ಪರಭಾರೆ ಮಾಡುತ್ತಿದೆ ಎಂದರು.

ಬಂಡವಾಳಗಾರರ ಲಾಭ ಹಾಗೂ ಗರಿಷ್ಠ ಲಾಭಕ್ಕಾಗಿ ದೇಶದ ಕಾರ್ಮಿಕರನ್ನು, ರೈತರನ್ನು ಪುಟ 7 ಕ್ಕೆ

## ಕೋಲ್ಕತ್ತಾ : ಮಹಾನ್ ಲೆನಿನ್‌ರಿಗೆ ಕ್ರಾಂತಿಕಾರಿ ಗೌರವ ಸಲ್ಲಿಸಿದ ಸಹಸ್ರ ಸಹಸ್ರ ಜನ

ರಷ್ಯಾದಲ್ಲಿ ಮೊದಲ ಬಾರಿಗೆ ಸಮಾಜವಾದಿ ವ್ಯವಸ್ಥೆ ಸ್ಥಾಪಿಸಿದ, ಜಗತ್ತಿನ ಕಾರ್ಮಿಕರ ವಿಮುಕ್ತಿಗಾಗಿ ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆಯಲು ಜೀವ ಮುಡಿಪಿಟ್ಟ ಲೆನಿನ್, ದುಡಿಯುವ ವರ್ಗದ ಹೃದಯ ಗೋಪುರದಲ್ಲಿ ಎಂತಹ ಉಚ್ಚ ಸ್ಥಾನ ಪಡೆದಿದ್ದಾರೆಂದು ಜನವರಿ 21, ಕಲ್ಕತ್ತಾದ ಶಹೀದ್ ಮಿನಾರ್ ಮೈದಾನದಲ್ಲಿ ಸೇರಿದ್ದ ಜನಸಾಗರವನ್ನು ಕಂಡವರು ಹೇಳಬಹುದು. ಅವರ ಜೀವನ ಸಂಘರ್ಷ ಜಗತ್ತಿನ ಹಾಗೂ ಭಾರತದ ಕಾರ್ಮಿಕ ವರ್ಗಕ್ಕೆ ಜೀವಂತ ಸ್ಫೂರ್ತಿಯ ಸೆಲೆಯಾಗಿದೆ. 21ನೇ ಶತಮಾನದ ಮಹಾನ್ ವ್ಯಕ್ತಿತ್ವ ಲೆನಿನ್‌ರ ಜೀವನ ಸಂಘರ್ಷ ಹಾಗೂ ಅಮೂಲ್ಯವಾದ ಪಾಠಗಳನ್ನು ಎಲ್ಲಾ ಹುಸಿ ಎಡ ಪಕ್ಷಗಳು ಮರೆತು ಅವಕಾಶವಾದಿಗಳಾಗಿವೆ. ಆದರೆ ಈ ಯುಗದ ಮಹಾನ್ ಮಾರ್ಕ್ಸ್‌ವಾದಿ ಚಿಂತಕರಾದ, ಮಾರ್ಕ್ಸ್–ಎಂಗೆಲ್ಸ್–ಲೆನಿನ್–ಸ್ಟಾಲಿನ್–ಮಾವೋರವರ ಯೋಗ್ಯ ಅನುಯಾಯಿಯಾದ ಕಾಮ್ರೇಡ್ ಶಿವದಾಸ್ ಘೋಷ್‌ರವರು ಕಟ್ಟಿದ, ಎಡವಾದದ ಪತಾಕೆಯನ್ನು ಬಾನೆತ್ತರಕ್ಕೆ ಹಾರಿಸುತ್ತಿರುವ ಎಸ್‌ಯುಸಿಐ (ಕಮ್ಯೂನಿಸ್ಟ್) ಪಕ್ಷವು ಲೆನಿನ್ ದಿನವನ್ನು ಸೂಕ್ತ ರೀತಿಯಲ್ಲಿ ಆಚರಿಸುವ ಜವಾಬ್ದಾರಿಯನ್ನು ತನ್ನ ಹೆಗಲಿಗೇರಿಸಿಕೊಂಡಿತ್ತು. ಈ ಮಹಾನ್ ವ್ಯಕ್ತಿತ್ವವನ್ನು ಸ್ಮರಿಸುತ್ತಾ ಹಾಗೂ ನಮ್ಮ ಜೀವನದಲ್ಲಿ ಅವರ ಚಿಂತನೆಗಳನ್ನು ಆಚರಣೆಗೆ ತರುವ ಉದ್ದೇಶದೊಂದಿಗೆ ನವೆಂಬರ್ 7 ರಿಂದ ಜನವರಿ 21ರ ವರೆಗೆ ಮಹಾನ್ ಲೆನಿನ್‌ರ ಮರಣ ಶತಾಬ್ದಿಯ ಪ್ರಚಾರ ಸಾಗಿತ್ತು. ಪಕ್ಷದ ಕಾರ್ಯಕರ್ತರು ದೇಶದಾದ್ಯಂತ ಸಾವಿರಾರು ಗೋಡೆಬರಹಗಳನ್ನು ಪುಟ 11 ಕ್ಕೆ



ಶಹೀದ್ ಮಿನಾರ್ ಮೈದಾನದಲ್ಲಿ ನೆರೆದಿದ್ದ ಬೃಹತ್ ಜನಸ್ತೋಮ

## ಮಹಾನ್ ಲೆನಿನ್ – ಒಂದು ಸಂಕ್ಷಿಪ್ತ ಯಶೋಗಾಥೆ – ಭಾಗ 2

[ಕಳೆದ ಸಂಚಿಕೆಯಲ್ಲಿ ಲೆನಿನ್‌ರ ಜೀವನದ ಸಂಕ್ಷಿಪ್ತ ಯಶೋಗಾಥೆಯ ಮೊದಲ ಭಾಗವನ್ನು ಪ್ರಕಟಿಸಲಾಗಿತ್ತು. ಇಲ್ಲಿ ಈಗ ಎರಡನೆಯ ಕಂತನ್ನು ಓದುಗರ ಮುಂದೆ ಇಡಲಾಗುತ್ತಿದೆ.]

### ಲೆನಿನ್‌ರ ಬೋಧನೆಗಳು – ಕ್ರಾಂತಿಕಾರಿ ಹೋರಾಟವನ್ನು ಮುನ್ನಡೆಸುವ ಮೂಲ ಶಕ್ತಿಯ ಸೆಲೆ

1905ರ ಕ್ರಾಂತಿಯ ಪ್ರಯತ್ನವು ವಿಫಲವಾದ ಹಿನ್ನೆಲೆಯಲ್ಲಿ ಝಾರ್ ಆಳ್ವಿಕೆಯು ಕ್ರಾಂತಿಕಾರಿಗಳನ್ನು ವಿಪರೀತ ದ್ವೇಷದಿಂದ ಹತ್ತಿಕ್ಕಿತು. ಅಂದು ಝಾರ್ ಆಡಳಿತದಲ್ಲಿ ಪ್ರಧಾನಿಯಾಗಿದ್ದ ಪ್ಯೋಟರ್ ಸ್ಟಾಲಿಪಿನ್‌ನ ತೀವ್ರವಾದ ದಮನಕಾರಿ ನೀತಿಯಿಂದಾಗಿ 1906 ಹಾಗೂ 1911ರ ನಡುವೆ 2500 ಜನರನ್ನು ಗಲ್ಲಿಗೇರಿಸಲಾಯಿತು. ಆದ್ದರಿಂದಲೇ, ಅಂದು ನೇಣುಹಗ್ಗವನ್ನು 'ಸ್ಟಾಲಿಪಿನ್ಸ್ ನೆಕ್ ಟೈ' ಎಂದು ಅಣಕಿಸಲಾಗುತ್ತಿತ್ತು. ಕಾರ್ಮಿಕರು ಹಾಗೂ ರೈತರ ಎಲ್ಲ ಜನತಾಂತ್ರಿಕ ಹಕ್ಕುಗಳನ್ನು ಕಸಿದುಕೊಂಡಿದ್ದ ಹಲವು ದಬ್ಬಾಳಿಕೆಯ ಕಾನೂನುಗಳು ಅಂದು ಜಾರಿಯಲ್ಲಿದ್ದವು.

ಇದಲ್ಲದೆ, ಕ್ರಾಂತಿಕಾರಿಗಳ ನಡುವೆಯೂ ತಿಳುವಳಿಕೆಯಲ್ಲಿ ಆಳವಾದ ಕಂದಕಗಳಿದ್ದವು. ಹಲವರು ಪಕ್ಷವನ್ನು ತೊರೆದು ಶತ್ರುಗಳ ಜೊತೆಯಲ್ಲಿ ಕೈಜೋಡಿಸಿದರು. ಇದೇ ಸಮಯದಲ್ಲಿ, ಮೆನ್ಷೆವಿಕ್‌ರು ಬೋಲ್ಷೆವಿಕ್‌ರ ಮೇಲೆ ಆಕ್ರಮಣಗಳನ್ನು ತೀವ್ರಗೊಳಿಸಿದರು. ಮೆನ್ಷೆವಿಕ್‌ರು, ಕ್ರಾಂತಿಯ ಅಲೆಯು ಮತ್ತೊಮ್ಮೆ ಮೇಲೇರುವುದಿಲ್ಲ, ಆದ್ದರಿಂದ, ಕ್ರಾಂತಿಯನ್ನು ಸಾಧಿಸುವ ಕಾರ್ಯಕ್ರಮವನ್ನು ಕೈ ಬಿಡಬೇಕು ಹಾಗೂ ಕಾರ್ಮಿಕ ವರ್ಗದ ಕ್ರಾಂತಿಕಾರಿ ಪಕ್ಷವನ್ನು ವಿಸರ್ಜಿಸಬೇಕು ಎಂದು ಒತ್ತಾಯಿಸಲು ಆರಂಭಿಸಿದರು. ಆದ್ದರಿಂದಲೇ, ಇತಿಹಾಸದಲ್ಲಿ ಮೆನ್ಷೆವಿಕ್‌ರನ್ನು ಪುಟ 5 ಕ್ಕೆ



ಲೆನಿನ್ (22 ಏಪ್ರಿಲ್ 1870 – 21 ಜನವರಿ 1924)

# 370ನೇ ವಿಧಿಯನ್ನು ರದ್ದುಗೊಳಿಸಿದ ನಂತರದ ಕಾಶ್ಮೀರದ ಸ್ಥಿತಿಗತಿ

2019ರ ಮೇ ತಿಂಗಳಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಸತತ ಎರಡನೇ ಬಾರಿಗೆ ಆಯ್ಕೆಯಾದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಒಂದಾದ ನಂತರ ಒಂದರಂತೆ ಕೋಮು ಭಾವನೆ ಕೆರಳಿಸುವ ತೀವ್ರ ಹಿಂದುತ್ವ ಹಾಗೂ ಅಲ್ಪಸಂಖ್ಯಾತ ವಿರೋಧಿ ದ್ವೇಷದ ಮನಸ್ಥಿತಿಯನ್ನು ಹರಡುವ ತನ್ನ ಕಾರ್ಯಸೂಚಿಯನ್ನು ಜಾರಿಗೆ ತರಲು ಪ್ರಾರಂಭಿಸಿತು. 2019ರ ಆಗಸ್ಟ್ 5ರಂದು ಸಂಸತ್ತಿನಲ್ಲಿ ಒಂದು ಮಸೂದೆಯನ್ನು ಅಂಗೀಕರಿಸಿ ಸಂವಿಧಾನದ 370ನೇ ವಿಧಿ ಹಾಗೂ ಪರಿಚ್ಛೇದ 35ಎ ಅನ್ನು ರದ್ದುಗೊಳಿಸುವ ಮೂಲಕ ಜಮ್ಮು ಮತ್ತು ಕಾಶ್ಮೀರ(ದೇಶದ ಏಕೈಕ ಮುಸ್ಲಿಂ ಬಾಹುಳ್ಯದ ಪ್ರಾಂತ್ಯ)ವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸಿತು. ಅವು ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಕ್. ಸ್ವಾತಂತ್ರ್ಯಾನಂತರದ ಭಾರತದಲ್ಲಿ ಒಂದು ಸ್ವಾಯತ್ತ ರಾಜ್ಯ ಅಥವಾ ಪ್ರಾಂತ್ಯವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ಒಡೆದಿದ್ದು ಇದೇ ಮೊದಲು. ಒಂದು ರಾಜ್ಯವು ಚುನಾಯಿತ ಸರ್ಕಾರವನ್ನು ಹೊಂದಿದ್ದರೆ ಕೇಂದ್ರಾಡಳಿತ ಪ್ರದೇಶಗಳ ಮೇಲೆ ಕೇಂದ್ರ ಸರ್ಕಾರವು ನೇರವಾಗಿ ಆಳ್ವಿಕೆ ನಡೆಸುತ್ತದೆ.

### 370ನೇ ವಿಧಿಯನ್ನು ರದ್ದು ಮಾಡುವಾಗ ಪ್ರಧಾನಿ ಹಾಗೂ ಗೃಹಸಚಿವರು ಹೇಳಿದ್ದೇನು?

2019ರ ಆಗಸ್ಟ್ 8ರಂದು, ಸಂಸತ್ತಿನಲ್ಲಿ ಪ್ರಧಾನಿ ಮೋದಿ, "ಕಣಿವೆ ರಾಜ್ಯದಲ್ಲಿ ಅಭಿವೃಧ್ಧಿಯ ವೇಗ ಕುಂಠಿತವಾಗಲು 370ನೇ ವಿಧಿಯೇ ಮುಖ್ಯ ಕಾರಣ"ವೆಂದು ಪ್ರತಿಪಾದಿಸಿದ್ದರು. ಅಲ್ಲದೆ, ಜಮ್ಮು–ಕಾಶ್ಮೀರವು ಕೇಂದ್ರಾಡಳಿತ ಪ್ರದೇಶವಾಗಿಯೇ ಮುಂದುವರೆಯಲಾರದು. ಒಂದೊಮ್ಮೆ, ಪರಿಸ್ಥಿತಿ ಮತ್ತೆ ಸಹಜತೆಗೆ ಮರಳಿದರೆ ಅದು ರಾಜ್ಯದ ಸ್ಥಾನಮಾನವನ್ನು ಗಳಿಸಿಕೊಳ್ಳುತ್ತದೆ. ಅಲ್ಲದೆ, ಜಮ್ಮು–ಕಾಶ್ಮೀರದ ಜನರು ತಮ್ಮದೇ ಪ್ರತಿನಿಧಿಗಳನ್ನು ಆರಿಸಿಕೊಳ್ಳುವರು, ಇತ್ಯಾದಿ ಇತ್ಯಾದಿ.. ಎಂದಿದ್ದರು.

ಗೃಹ ಸಚಿವ ಅಮಿತ್ ಶಾ, ". . . 370ನೇ ವಿಧಿಯು ಅಭಿವೃದ್ಧಿಗೆ ಹೇಗೆ ಅಡ್ಡಗಾಲಾಗಿದೆಯೆಂದು ಎಲ್ಲರಿಗೂ ಗೊತ್ತಿದೆ" ಎಂದು ಹೇಳುತ್ತಾ, ಈ ವಿಧಿಯ ರದ್ದತಿಯ ನಂತರ ಜಮ್ಮು–ಕಾಶ್ಮೀರದಲ್ಲಿ ಖಾಸಗಿ ಬಂಡವಾಳ ಹರಿದು ಬರಲು ಹಾದಿ ಸುಗಮವಾಗಲಿದೆ, ತನ್ಮೂಲಕ ಅಭಿವೃದ್ಧಿಗೆ ಉತ್ತೇಜನ ಸಿಗಲಿದೆ ಎಂದು ಹೇಳಿದ್ದರು. ಹೂಡಿಕೆಯ ಹೆಚ್ಚಳದಿಂದ ಉದ್ಯೋಗ ಸೃಷ್ಟಿಯಾಗಿ ರಾಜ್ಯದ ಸಾಮಾಜಿಕ, ಆರ್ಥಿಕ ಮೂಲ ಸೌಲಭ್ಯಗಳು ಉತ್ತಮಗೊಳ್ಳಲಿವೆ. ರಾಜ್ಯದ ಜನರಿಗಷ್ಟೇ ಸೀಮಿತವಾಗಿದ್ದ ಅಲ್ಲಿಯ ಜಮೀನು ಖರೀದಿಸುವ ಅವಕಾಶ, ಇನ್ನು ಮುಂದೆ ಎಲ್ಲರಿಗೂ ಮುಕ್ತವಾಗುತ್ತದೆ ಕಾರ್ಪೋರೇಟ್ ಮನೆತನಗಳು ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಆಗಮನದಿಂದಾಗಿ ಸ್ಥಳೀಯ ಆರ್ಥಿಕತೆ–ಯು ಸುಧಾರಣೆಗೊಳ್ಳುವುದು. ಇದುವರೆಗೆ ಅಲ್ಲಿ ಆರ್ಥಿಕವಾಗಿ ಸ್ಪರ್ಧೆ ಇಲ್ಲದುದರಿಂದ ಅಭಿವೃದ್ಧಿಯೇ ಕಂಠಿತಗೊಂಡಿದ್ದು, ಭ್ರಷ್ಟಾಚಾರ ಹೆಚ್ಚಾಗಿದೆ. ಭೂಮಿಯ ಬೆಲೆ ಪಾತಾಳ ಕಂಡಿದೆ. ಯಾವುದೇ ಉದ್ಯಮಗಳಿಲ್ಲದೆ ಪ್ರವಾಸೋದ್ಯಮವೂ ಸೊರಗಿದೆ... ... 370ನೇ ವಿಧಿಯನ್ನು ತೆಗೆದು ಹಾಕಿದ ಕೂಡಲೇ, ಪ್ರತಿ ಮಗುವು ಶಿಕ್ಷಣದ ಹಕ್ಕನ್ನು ಪಡೆಯುವುದು ಮತ್ತು ಆಯುಷ್ಮಾನ್ ಭಾರತ್ ಯೋಜನೆಯಡಿ ಪ್ರತಿ ರೋಗಿಯೂ ಉಚಿತ ಆರೋಗ್ಯ ಸೌಲಭ್ಯವನ್ನು ಹೊಂದುವನು. ನಾವು ಜಮ್ಮು–ಕಾಶ್ಮೀರದ ಯುವಕರನ್ನು ಹುರಿದುಂಬಿಸಿ ಅವರಿಗೆ ಉದ್ಯೋಗಾವಕಾಶಗಳನ್ನು ಕೊಡುವೆವು. ನಾನು ಖಾತ್ರಿ ನೀಡುತ್ತೇನೆ, ಕೇವಲ ಐದು ವರ್ಷಗಳಲ್ಲಿ ಇದು ರಾಷ್ಟ್ರದಲ್ಲಿಯೇ ಅತ್ಯಂತ ಪ್ರಗತಿ ಹೊಂದಿದ ಪ್ರದೇಶವಾಗಲಿದೆ" ಎಂದೆಲ್ಲಾ ಅಬ್ಬರಿಸಿದ್ದರು. (ಪ್ರೆಸ್ ಇನ್ಫಾರ್ಮೇಶನ್ ಬ್ಯೂರೋ, ಭಾರತ ಸರ್ಕಾರ, 05/08/2019)

### ವಾಸ್ತವ ಸಂಗತಿ ಏನು?

ಈಗ 370ನೇ ವಿಧಿ ರದ್ದಾಗಿ ಹೆಚ್ಚು ಕಡಿಮೆ ನಾಲ್ಕೂವರೆ ವರ್ಷಗಳು ಕಳೆದಿವೆ. ಪ್ರಧಾನಮಂತ್ರಿ ಹಾಗೂ ಗೃಹ ಮಂತ್ರಿಗಳ ಪ್ರಕಾರ ಅಭಿವೃದ್ದಿಗಿದ್ದ ಅಡ್ಡಿ, ಆತಂಕಗಳೆಲ್ಲಾ ನಿವಾರಣೆಯಾಗಿವೆ. ಅದು ಕಣಿವೆ ರಾಜ್ಯದಲ್ಲಿ ಅಭಿವೃದ್ಧಿ ಶಕೆಯನ್ನು ತಂದಿದೆಯೇ? ಎಂಬ ಪ್ರಶ್ನೆಯನ್ನು ಹಾಕಿಕೊಂಡಾಗ ಸತ್ಯಾಂಶಗಳು ಬೇರೆಯದೇ ಕಥೆಯನ್ನು ಹೇಳುತ್ತವೆ.

ಕಾಶ್ಮೀರದ ಸಾಮಾನ್ಯ ಜನರ ಬದುಕು ಭಯಾನಕವಾಗಿದೆ. 2019ರ ಆಗಸ್ಟ್ ಮೊದಲನೇ ವಾರದಿಂದ ಕೇಂದ್ರ ಸರ್ಕಾರವು, ಕಣಿವೆಯ 70 ಲಕ್ಷ ಜನಸಂಖ್ಯೆಗೆ 7 ಲಕ್ಷ ಸೇನಾ ಹಾಗೂ ಅರೆಸೇನಾ ಪಡೆಗಳನ್ನು ನಿಯೋಜಿಸಿದೆ. ಅಂ–ದರೆ ಪ್ರತಿ 10 ನಾಗರಿಕರಿಗೆ ಒಬ್ಬ ಸೈನಿಕನಂತೆ! ಈ ರಕ್ಷಣಾ ಪಡೆಗಳು ಅಲ್ಲಿ ಅಭಿವೃದ್ಧಿಯನ್ನು ಹೆಚ್ಚು ಮಾಡುತ್ತಿವೆಯೇ? ಪ್ರಧಾನಿ ಹಾಗೂ ಗೃಹಸಚಿವರೇ ಉತ್ತರಿಸಬೇಕು. ಅಲ್ಲಿ ಪ್ರೀಪೇಡ್ ಮೊಬೈಲುಗಳಿಗೆ ಅವಕಾಶವಿಲ್ಲ. ಬರೀ ಪೋಸ್ಟ್ ಪೇಡ್ ಮೊಬೈಲುಗಳಷ್ಟೇ ಕೆಲಸ ಮಾಡುತ್ತಿವೆ. ವಿಧಿ ರದ್ದಾದ ನಂತರ ಸುಮಾರು ಎರಡು ವರ್ಷಕ್ಕಿಂತ ಹೆಚ್ಚಿನ ಅವಧಿ ಇಂಟರ್‌ನೆಟ್ ಸಂಪರ್ಕವನ್ನು ಕಡಿತಗೊಳಿಸಲಾಗಿತ್ತು. ಕೆಲವೊಂದು ಪ್ರದೇಶಗಳಲ್ಲಿ ಮಾತ್ರ ಅತಿ ನಿಧಾನವಾದ 2ಜಿ ಸಂಪರ್ಕಕ್ಕೆ ಅವಕಾಶ ನೀಡಲಾಗಿತ್ತು. ಯಾವುದೇ ಸಮಯದಲ್ಲಿ ಪೊಲೀಸ್ ಅಥವಾ ಮಿಲಿಟರಿ ಯಾರದೇ ಸೆಲ್‌ಫೋನನ್ನು ತಪಾಸಣೆ ಮಾಡಬಹುದು! ಎಲ್ಲಿ ನೋಡಿದಲ್ಲಿ ಪೊಲೀಸ್ ಅಥವಾ ಮಿಲಿಟರಿ ಚೆಕ್‌ಪೋಸ್ಟ್‌ಗಳು! ಈ ಚೆಕ್‌ಪೋಸ್ಟುಗಳಲ್ಲಿ ಯಾರನ್ನು ಬೇಕಾದರೂ ನಿಲ್ಲಿಸಿ ಪ್ರಶ್ನೆ ಮಾಡಬಹುದು. ಕರಾಳ ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆ(ಆಫ್ಸಾ)ಯನ್ನು ಬೆನ್ನಿಗಿಟ್ಟುಕೊಂಡ ರಕ್ಷಣಾ ಪಡೆಗಳು ಯಾವುದೇ ವಾರೆಂಟ್ ಇಲ್ಲದೆ ಯಾರ ಮನೆಯನ್ನಾದರೂ ಶೋಧಿಸಬಹುದು ಹಾಗೂ ಯಾವುದೇ ಸಮಯದಲ್ಲಿ ತಮಗೆ ಬೇಕಾದವರನ್ನು ಬಂಧಿಸಿಕೊಂಡು ಹೋಗಬಹುದು. ಹೀಗಾಗಿ ಮಾಧ್ಯಮದಲ್ಲಿ ಯಾ–ರೋ ಒಬ್ಬರು ಉದ್ಗರಿಸಿದ್ದರು: "ನೀವೀಗ ಕಾಶ್ಮೀರನ್ನು ಸುಂದರವಾದ ಆದರೆ ಜಗತ್ತಿನ ಅತಿ ದೊಡ್ಡ ಬಯಲು ಬಂದೀಖಾನೆಯೆಂದು ಕರೆಯಬಹುದು!" ಎಂದು.

### ಮಿಲಿಟರಿಯ ಮರ್ಜಿಯಲ್ಲಿ ವಿಲಿವಿಲಿಗುಟ್ಟುವ ನಾಗರಿಕರು!

ಪೂಂಚ್‌ನ ಡೇರಾ ಕಿ ಗೋಲಿ ಪ್ರದೇಶದಲ್ಲಿ ಡಿಸೆಂಬರ್ 21ರಂದು ಕಡೆಯದಾಗಿ ಸೇನಾಪಡೆಗಳು ಹಾಗೂ ಉಗ್ರರ ನಡುವೆ ಗುಂಡಿನ ಚಕಮಕಿ ನಡೆದಿತ್ತು., ಅದರಲ್ಲಿ 4 ಜನ ಸೈನಿಕರು ಬಲಿಯಾದರು. ಪ್ರತಿಕಾರವಾಗಿ ಸೇನಾಪಡೆಯು ಇಡೀ ಪ್ರದೇಶವನ್ನು ಸುತ್ತುವರೆದು 8 ಜನ ಗ್ರಾಮಸ್ಥರನ್ನು ವಿಚಾರಣೆಗಾಗಿ ಬಂಧಿಸಿತು. ಮರುದಿನವೇ ಅವರಲ್ಲಿ 3 ಜನ ಹೆಣವಾಗಿದ್ದರು. ಉಳಿದ 5 ಜನರು ಗಂಭೀರ ಗಾಯಗಳೊಂದಿಗೆ ಆಸ್ಪತ್ರೆಗೆ ದಾಖಲಾದರು. ಈ ಘಟನೆಯಿಂದಾಗಿ ಭದ್ರತಾ ಪಡೆಗಳು ಸಾಮಾನ್ಯ ಜನರ ಮೇಲೆ ದೌರ್ಜನ್ಯ ಎಸಗುತ್ತಿವೆ ಎಂಬ ಆರೋಪ ಕೇಳಿ ಬಂದು ಸದರಿ ಪ್ರದೇಶದಲ್ಲಿ ಉದ್ವಿಗ್ನ ಸ್ಥಿತಿ ಉಂಟಾಯಿತು. ಸ್ಥಳೀಯ ಮಾಧ್ಯಮಗಳು ಮತ್ತು ಸಾಮಾಜಿಕ ಜಾಲತಾಣಗಳ ಪೋಸ್ಟ್‌ಗಳ ಪ್ರಕಾರ, ಬಂಧಿತರನ್ನು ಇಡೀ ದಿನ ಅಮಾನುಷವಾಗಿ ಥಳಿಸಲಾಗಿತ್ತು. "ವಿವಿಧ ರೀತಿಯ ಹಿಂಸೆಗಳ ನಂತರ, ನಾವು ಪ್ರಜ್ಞೆ ತಪ್ಪುವವರೆಗೆ ಸೈನಿಕರು ನಮ್ಮ ಗಾಯಗಳ ಮೇಲೆ ಉಪ್ಪು ಹಾಗೂ ಖಾರದ ಪುಡಿಯನ್ನು ಸವರಿದರು" ಎಂದು ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿರುವ ಒಬ್ಬ ಆರೋಪಿ ಫಾರೂಕ್ ಹೇಳಿದ. ಆತ ದಿ ಹಿಂದೂ ಪತ್ರಿಕೆಗೆ ಹೇಳಿದ್ದು: "ಇಡೀ ದೇಹದ ತುಂಬ ಉಂಟಾದ ಗಾಯಗಳಿಂದಾಗಿ ನನಗೆ ನಡೆಯಲೂ ಆಗುತ್ತಿಲ್ಲ. ಜೀವನ್ಮರಣದ ನಡುವೆ ಹೋರಾಡುತ್ತಿರುವ ನಾನು ಬದುಕುವುದು ಖಾತ್ರಿಯಿಲ್ಲ." ಹೀಗೆ ಭದ್ರತಾ ಪಡೆಗಳು ಅಮಾಯಕ ಜನರ ಮೇಲೆ ಎಸಗುತ್ತಿರುವ ದೌರ್ಜನ್ಯಕ್ಕೆ ಎಲ್ಲೆಯೇ ಇಲ್ಲವಾಗಿದೆ!

ಎರಡನೆಯದಾಗಿ, ಅಭಿವೃದ್ಧಿ ಕಥನವು ಜಮ್ಮು–ಕಾಶ್ಮೀರದಲ್ಲಿ ತೀವ್ರ ವಿದ್ಯುತ್ ಬಿಕ್ಕಟ್ಟಿನೊಂದಿಗೆ ಪ್ರಾರಂಭವಾಗುತ್ತದೆ. ಈ ಕೇಂದ್ರಾಡಳಿತ ಪ್ರದೇಶದಲ್ಲಿ 370ನೇ ವಿಧಿ ರದ್ದಾಗುವ ಮುಂಚಿನ ಅವಧಿಯಲ್ಲಿದ್ದ 200–250 ಮೆಗಾವ್ಯಾಟ್ ಉತ್ಪಾದನೆಗೆ ಹೋಲಿಸಿದರೆ 50–100 ಮೆಗಾವ್ಯಾಟ್‌ನಷ್ಟು ಮಾತ್ರ ವಿದ್ಯುತ್ ಉತ್ಪಾದನೆಯಾಗುತ್ತಿದೆ. ಚಳಿಗಾಲದಲ್ಲಿ ಉಷ್ಣಾಂಶ 5–8 °Cಗೆ ಇಳಿದಾಗ ಕಾಶ್ಮೀರ ಕಣಿವೆಯ ವಿದ್ಯುತ್ ಅವಶ್ಯಕತೆ ದಿನಕ್ಕೆ 2200–2300 ಮೆಗಾವ್ಯಾಟ್‌ನಷ್ಟು ಆಗುತ್ತದೆ. ಆದರೆ ವಿದ್ಯುತ್ ಉತ್ಪಾದನೆಯ ಕುಸಿತದಿಂದ ನಿರಂತರ ಆಮ್ಲಜನಕ ಅಗತ್ಯವಿರುವ ರೋಗಿಗಳ ಪರದಾಟ ಹೇಳತೀರದಾಗಿದೆ ಒಂದಿಷ್ಟು ಅನುಕೂಲವಿದ್ದವರು ಸ್ವಂತ ಜೆನರೇಟರ್ ಕೊಂಡುಕೊಳ್ಳುವ ಪರಿಸ್ಥಿತಿ ಉಂಟಾಗಿದೆ. ಬಡ ರೋಗಿಗಳಿಗೆ ಸಾವೇ ಕೊನೆಯ ಗತಿಯಾಗಿದೆ.


ಮೋದಿ ಮತ್ತು ಅಮಿತ್ ಶಾ ಇಬ್ಬರೂ ಐದು ವರ್ಷಗಳ ಅವಧಿಯಲ್ಲಿ ಕಾಶ್ಮೀರವು ಬಹಳ ವೇಗವಾಗಿ ಅಭಿವೃದ್ಧಿ ಹೊಂದುವುದೆಂದೂ, ಎಲ್ಲ ಯುವಕರಿಗೆ ಉದ್ಯೋಗ ದೊರೆಯುತ್ತದೆಯೆಂದು ಎಲ್ಲರನ್ನೂ ಏಣಿ ಹತ್ತಿಸಿದ್ದರು. ಮೋದಿಯವರಂತೂ ಭಾರತೀಯ ಉದ್ಯಮಿಗಳಷ್ಟೇ ಅಲ್ಲದೇ ವಿದೇಶಿ ಬಂಡವಾಳವೂ ಹರಿದು ಬಂದು ಕಾಶ್ಮೀರ ಸುಭಿಕ್ಷವಾಗುವುದೆಂಬ ಹಗಲುಗನಸು ಬಿತ್ತಿದ್ದರು. ಅಲ್ಲದೆ ವಿದೇಶದಿಂದ 44,000 ಕೋಟಿ ರೂಪಾಯಿಗಳಷ್ಟು ಬಂಡವಾಳ ಹೂಡಲು ಕಂಪನಿಗಳು ತಯಾರಾಗಿವೆಯೆಂದೂ, ಅದರಿಂದ ದೊಡ್ಡಸಂಖ್ಯೆಯ ಉದ್ಯೋಗಗಳು ಸೃಷ್ಟಿಯಾಗುತ್ತವೆಯೆಂದೂ ಹೇಳಿದ್ದರು. ಆದ–ರೆ ಇತ್ತೀಚಿನ ಅಂಕಿಅಂಶಗಳ ಪ್ರಕಾರ ಅಲ್ಲಿ ಹೂಡಿಕೆಯಾದದ್ದು ಕೇವಲ ರೂ. 58 ಕೋಟಿಯಷ್ಟು; ವಿದೇಶಿ ನೇರ ಹೂಡಿಕೆಯೂ ಸೇರಿ ರೂ. 2,844 ಕೋಟಿ ಮಾತ್ರ. ಎರಡು ವರ್ಷಗಳ ಹಿಂದೆ 8000 'ಡಿ' ಗ್ರುಪ್ ಹುದ್ದೆಗಳಿಗೆ 5.4 ಲಕ್ಷ ಅರ್ಜಿಗಳು ಬಂದಿದ್ದವು! ಎಂದರೆ ನಿರುದ್ಯೋಗದ ಪ್ರಮಾಣವನ್ನು ಊಹಿಸಲೂ ಸಾಧ್ಯವಿಲ್ಲ! ಹಿರಿಯ ಸರಕಾರಿ ಅಧಿಕಾರಿಯೊಬ್ಬರು 'ಕಳೆದ ಕೆಲ ವರ್ಷಗಳಿಂದ ಪ್ರವಾಸೋದ್ಯಮವು ಕಳೆಗುಂದಿದೆ. 2019ರ ಮೊದಲು ಚೆನ್ನಾಗಿತ್ತು' ಎನ್ನುತ್ತಾರೆ.

ಹೀಗೆ ಹಲವಾರು ಸಮಸ್ಯೆಗಳ ಸರಮಾಲೆಯಿಂದ ರೋಸಿ ಹೋಗಿರುವ ಜಮ್ಮು–ಕಾಶ್ಮೀರದ ಜನರು ಭಾರತ ಸರ್ಕಾರದ ಬಗ್ಗೆ ಭ್ರಮನಿರಸನಗೊಂಡಿದ್ದಾರೆ. ಕಡುಕೋಮುವಾದಿಯಾಗಿರುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು, ಈಗ 370ನೇ ವಿಧಿಯ ರದ್ದತಿಗೆ ಐತಿಹಾಸಿಕತೆಯ ಕವಚವನ್ನು ತೊಡಿಸಲು ಪ್ರಯತ್ನಿಸುತ್ತಿದೆ. ಅದನ್ನು ರದ್ದು ಮಾಡುವಾಗ ನೀಡಿದ್ದ ಭರವಸೆಗಳನ್ನು ಉದ್ದೇಶಪೂರ್ವಕವಾಗಿ ಮರೆಮಾಚುತ್ತ, ಜಮ್ಮು–ಕಾಶ್ಮೀರವೂ ಸಹ ದೇಶದ ಇತರೆ ರಾಜ್ಯಗಳಂತೆ ಒಂದು ಎಂದು ಭಾರತೀಯರನ್ನು ದಾರಿ ತಪ್ಪಿಸುವ ಕೆಲಸ ಮಾಡುತ್ತಿದೆ. ಕಣಿವೆ ರಾಜ್ಯದಲ್ಲಿ ಏಳುವ ದಂಗೆ, ಆಕ್ರೋಶಗಳು ಭಾರತ ವಿರೋಧಿ ಉಗ್ರಗಾಮಿಗಳಿಂದ ಪ್ರಚೋದಿತವಾಗಿವೆಯೆಂದೂ ಮತ್ತು ಅವು ಒಳ್ಳೆಯ ಉದ್ದೇಶದಿಂದ ಕೂಡಿಲ್ಲವೆಂದು ಪ್ರಚಾರ ಮಾಡುತ್ತಿದೆ. ಮುಂದೆ ಇದು ಕಣಿವೆಯ ಜನರ ಮನಸಿನಲ್ಲಿ ದ್ರೋಹಕ್ಕೊಳಕ್ಕೊಳಗಾದ ಎಂಬ ಭಾವನೆಯನ್ನು ಬಡಿದೆಬ್ಬಿಸುವುದಿಲ್ಲವೇ?

ಇಲ್ಲದಿದ್ದರೆ, ವಿಶೇಷಾಧಿಕಾರವನ್ನು ಹೊಂದಿರುವ ಸಶಸ್ತ್ರ ಪಡೆಗಳು ಅವರನ್ನು ಕಾಡುವ, ಪೀಡಿಸುವ ಅಗತ್ಯವೇನಿದೆ? ಅಲ್ಲದೆ, ಆರ್ಥಿಕತೆಯು ಪಾತಾಳ ಸೇರಿ, ಅಭಿವೃದ್ಧಿ ರೋದನವಾಗಿ, ನೀಡಿದ್ದ ದೊಡ್ಡ ದೊಡ್ಡ ಭರವಸೆಗಳು ಹುಸಿಯಾಗಿ ಹೋದಾಗ ಅವರ ಹೃದಯದಲ್ಲಿ ಮೋಸಹೋದ ಪ್ರಜ್ಞೆ ಆಳವಾಗಿ ಬೇರೂರುತ್ತದೆಯಲ್ಲವೇ? ಸಾಮಾನ್ಯ ಕಾಶ್ಮೀರಿ ಜನರನ್ನು ಹೀಗೆ ನಡೆಸಿಕೊಳ್ಳುವುದು ನ್ಯಾಯವೇ? ಧಾರ್ಮಿಕ ಕಾರಣಗಳಿಗಾಗಿ ಆಕ್ರಮಿಸಿಕೊಂಡಿದ್ದ ಪಾಕಿಸ್ತಾನವನ್ನು ತಿರಸ್ಕರಿಸಿ, ಭಾರತವನ್ನು ತಮ್ಮ ದೇಶವೆಂದು ಒಪ್ಪಿಕೊಂಡಿದ್ದು ಅವರ ತಪ್ಪಾ?

ಈ ಪ್ರಶ್ನೆಗಳ ಕುರಿತು ದೇಶದ ಎಲ್ಲ ಪ್ರಜ್ಞಾವಂತ ಜನತೆ ಗಂಭೀರವಾಗಿ ಆಲೋಚಿಸಬೇಕು ಮತ್ತು ಬಂಡವಾಳಶಾಹಿಗಳ ಮೋಸದ ಸಂಚಿನಿಂದ ಹರಣವಾಗುತ್ತಿರುವ ಕಾಶ್ಮೀರಿ ಜನರ ಪ್ರಾಣ ಹಾಗೂ ಬದುಕಿನ ಎಲ್ಲ ಹಕ್ಕುಗಳನ್ನು ರಕ್ಷಿಸಲು ಮುಂದಾಗಬೇಕು. ■

## ಯುವಜನರ ವೃತ್ತಿ ಆಯ್ಕೆ : ಕಾರ್ಲ್ ಮಾರ್ಕ್ಸ್



### ಸಂಸ್ಮರಣ ದಿನ: 14 .03.1883

ಕಾರ್ಲ್ ಮಾರ್ಕ್ಸ್ ಚಿಕ್ಕವಯಸ್ಸಿನಿಂದಲೂ ವಿಚಾರಶೀಲ ಹಾಗೂ ತಾತ್ವಿಕ ಮನೋಭಾವವನ್ನು ಹೊಂದಿದ್ದರು. 17ನೇ ವಯಸ್ಸಿನಲ್ಲಿ, ಅವರು ತಮ್ಮ ಶಾಲೆಯಲ್ಲಿ ಬರೆದ 'ವೃತ್ತಿಯ ಆಯ್ಕೆಗೆ ಸಂಬಂಧಪಟ್ಟಂತೆ ಪರಿಗಣಿಸಬೇಕಾದ ಅಂಶಗಳು' ಎಂಬ ಪ್ರಬಂಧವು ಅವರಲ್ಲಿದ್ದ ವೈಚಾರಿಕ ಸ್ಪಷ್ಟತೆಗೆ ಉತ್ತಮ ನಿದರ್ಶನವಾಗಿದೆ.

**"....ಮನುಕುಲದ ಏಳಿಗೆ ಹಾಗೂ ನಮ್ಮದೇ ಪರಿಪೂರ್ಣತೆಯು ವೃತ್ತಿಯ ಆಯ್ಕೆಯಲ್ಲಿ ನಮಗೆ ದಾರಿದೀಪವಾಗಬೇಕು. ಮನುಕುಲದ ಏಳಿಗೆಗಾಗಿ ದುಡಿಯುವುದು ಹಾಗೂ ನಮ್ಮ ಪರಿಪೂರ್ಣತೆ, ಇವರೆಡೂ ಒಂದಕ್ಕೊಂದು ಪೂರಕವಲ್ಲ ಎಂದು ನಾವು ಭಾವಿಸಬಾರದು. ಒಂದು ಇನ್ನೊಂದನ್ನು ನಾಶಗೊಳಿಸುವುದಿಲ್ಲ; ಬದಲಿಗೆ ತನ್ನ ಸಹಜೀವಿಗಳ ಪರಿಪೂರ್ಣತೆಗಾಗಿ, ಅವರ ಏಳಿಗೆಗಾಗಿ ಶ್ರಮಿಸಿದಾಗ ಮಾತ್ರ ವ್ಯಕ್ತಿಯೊಬ್ಬನು ಪರಿಪೂರ್ಣನಾಗಬಲ್ಲ ಎಂಬುದು ಮಾನವನ ಸ್ವಭಾವದಲ್ಲಿಯೇ ಇದೆ. ಅವನು ಕೇವಲ ತನಗಾಗಿ ದುಡಿದರೆ ಒಬ್ಬ ಪ್ರಗಾಢ ಪಂಡಿತನೋ, ಒಬ್ಬ ಮಹಾನ್ ಸಂತನೋ ಅಥವಾ ಒಬ್ಬ ಶ್ರೇಷ್ಠ ಕವಿಯೋ ಆಗಬಹುದು. ಆದರೆ ಅವನು ಪರಿಪೂರ್ಣ ಮಾನವನಾಗಲಾರ, ನಿಜವಾಗಿಯೂ ಮಹಾನ್ ವ್ಯಕ್ತಿ ಆಗಲಾರ!**

**ಎಲ್ಲರ ಒಳಿತಿಗಾಗಿ ಶ್ರಮಿಸುತ್ತಾ ಉದಾತ್ತತೆ ತೋರುವವರನ್ನು ಇತಿಹಾಸ ಸರ್ವಶ್ರೇಷ್ಠರೆಂದು ಪರಿಗಣಿಸುತ್ತದೆ; ಹೆಚ್ಚು ಜನರಿಗೆ ಖುಷಿಯನ್ನು ಹಂಚುವ ವ್ಯಕ್ತಿಯು ಅತಿ ಹೆಚ್ಚಿನ ನೆಮ್ಮದಿಯನ್ನು ಗಳಿಸುತ್ತಾನೆ ಎಂದು ಮಾನವನ ಅನುಭವವು ಹೇಳುತ್ತದೆ. ಧರ್ಮವೇ ಬೋಧಿಸಿರುವ ಆದರ್ಶದಂತೆ, ಎಲ್ಲರೂ ಯಾರನ್ನು (ಯೇಸು) ಅನುಸರಿಸಲು ಶ್ರಮಿಸುತ್ತಾರೋ, ಆತ ಮನುಕುಲಕ್ಕಾಗಿ ತನ್ನನ್ನೇ ಬಲಿಕೊಟ್ಟಾತ. ಎಷ್ಟು ಜನಕ್ಕೆ ಅಂತಹ ನಿರ್ಧಾರಕ್ಕೆ ಬರುವ ಧೈರ್ಯವಿದೆ?**

**ಎಲ್ಲಕ್ಕಿಂತ ಹೆಚ್ಚಾಗಿ, ಜೀವನದಲ್ಲಿ ಮನುಕುಲಕ್ಕಾಗಿ ದುಡಿಯುವ ಸ್ಥಾನವನ್ನು ನಾವು ಆಯ್ದುಕೊಂಡರೆ, ಯಾವ ಭಾರವೂ ನಮ್ಮನ್ನು ಕುಗ್ಗಿಸುವುದಿಲ್ಲ. ಏಕೆಂದರೆ ಅವು ಎಲ್ಲರ ಒಳಿತಿಗಾಗಿ ಮಾಡಿದ ತ್ಯಾಗಗಳಾಗಿರುತ್ತವೆ; ಆಗ ಯಾವುದೇ ಅಲ್ಪ, ಸೀಮಿತ ಅಥವಾ ಸ್ವಾರ್ಥದ ಆನಂದವನ್ನು ನಾವು ಅನುಭವಿಸುವುದಿಲ್ಲ. ಬದಲಿಗೆ, ನಮ್ಮ ಸಂತೋಷ ಲಕ್ಷಾಂತರ ಜನರಿಗೆ ಸೇರುತ್ತದೆ. ನಮ್ಮ ಕಾರ್ಯಗಳು ಯಾವುದೇ ಸದ್ದಿಲ್ಲದೆ ಚಿರಸ್ಥಾಯಿಯಾಗಿ ಬದುಕುಳಿಯುತ್ತವೆ. ನಮ್ಮ ಬೂದಿಯ ಮೇಲೆ ಉದಾತ್ತ ಮಾನವರ ಬೆಚ್ಚಗಿನ ಕಂಬನಿಗಳು ಉದುರುತ್ತವೆ."**

# ಮಧ್ಯಂತರ ಬಜೆಟ್ 2024: ಚುನಾವಣೆಗಾಗಿ ಒಂದು ಪ್ರಹಸನ

"ನಮ್ಮ ಸರ್ಕಾರ ಕೈಗೊಂಡ ಉತ್ತಮ ಕೆಲಸಗಳನ್ನು ಆಧರಿಸಿ ಜನರು ನಮ್ಮನ್ನು ಮತ್ತೆ ಆರಿಸಿ ತರುತ್ತಾರೆ ಎಂಬ ಅಪೇಕ್ಷೆ ನಮಗಿದೆ." ಇದು ಚುನಾವಣಾ ಸಂದರ್ಭದ ಭಾಷಣದ ತುಣುಕಲ್ಲ ಅಥವಾ ಚುನಾವಣಾ ಪ್ರಣಾಳಿಕೆಯಲ್ಲ, ಬದಲಿಗೆ ಇತ್ತೀಚೆಗೆ ಮಧ್ಯಂತರ ಬಜೆಟ್ ಮಂಡನೆಯ ಸಂದರ್ಭದಲ್ಲಿ ವಿತ್ತ ಸಚಿವೆ ಆಡಿದ ಮಾತುಗಳು ಅವು. ಪ್ರತಿಯೊಂದು ವೇದಿಕೆಯನ್ನು ಬಿಜೆಪಿಯು ಚುನಾವಣಾ ವೇದಿಕೆಯಾಗಿ ಬಳಸಿಕೊಳ್ಳುತ್ತಿದೆ. ತಾನು ಕೈಗೊಂಡ ಕೆಲಸಗಳ ಬಗ್ಗೆಯಾಗಲೀ ಅಥವಾ ಚುನಾವಣಾ ಪೂರ್ವದ ತನ್ನ ಭರವಸೆಗಳ ಬಗ್ಗೆಯಾಗಲೀ ಯಾವುದೇ ದತ್ತಾಂಶಗಳನ್ನು ನೀಡದೆ ಅಥವಾ ಸಮರ್ಪಕವಾದ ತರ್ಕಗಳನ್ನು ನೀಡದೆ, ತನ್ನ ಬೆನ್ನನ್ನು ತಾನು ತಟ್ಟಿಕೊಳ್ಳುವ ಅವಕಾಶವನ್ನು ಬಿಜೆಪಿಯು ಎಂದೂ ಕಳೆದುಕೊಳ್ಳುವುದಿಲ್ಲ. 2014ರಿಂದಾಚೆ ಮೋದಿ ಸರ್ಕಾರದ 'ಅತ್ಯದ್ಭುತ' ಆರ್ಥಿಕ ಸಾಧನೆಗಳು ಕೇವಲ ಪೊಳ್ಳು ಮಾತುಗಳಿಗೆ ಸೀಮಿತವಾಗಿವೆ. ವಾಸ್ತಾವಂಶಗಳನ್ನು ಗಮನಿಸಿ.

### ಮೋದಿಯವರ 'ವಿಕಸಿತ ಭಾರತ' ದಲ್ಲಿ ಜನರ ವಿಕಸನವಾಗಿದೆಯೇ?

'ಸಾಮಾನ್ಯ ಜನರ ಸರಾಸರಿ ನೈಜ ಆದಾಯ ಹೆಚ್ಚಾಗಿದೆ ಮತ್ತು ಕಳೆದ ಹತ್ತು ವರ್ಷಗಳಲ್ಲಿ ದ್ವಿಗುಣಗೊಂಡಿದೆ' ಎಂದು ಹಣಕಾಸು ಸಚಿವರು ಘೋಷಿಸಿದ್ದಾರೆ. ಆದರೆ ಇತ್ತೀಚೆಗೆ ಆಕ್ಸ್ ಫಾಮ್ ಪ್ರಕಟಿಸಿದ ವರದಿಯ ಪ್ರಕಾರ, ಕೇವಲ ಶೇ. 5ಕ್ಕಿಂತ ಕಡಿಮೆ ಭಾರತೀಯರು 2012 ರಿಂದ 2021ರ ನಡುವೆ ಉತ್ಪಾದಿಸಿದ ದೇಶದ ಸಂಪತ್ತಿನ ಶೇ. 60ಕ್ಕಿಂತ ಹೆಚ್ಚಿನದನ್ನು ತಮ್ಮದಾಗಿಸಿಕೊಂಡಿದ್ದಾರೆ. ಆದರೆ ಕೆಳಗಿನ ಶೇ. 50 ಜನರು ರಾಷ್ಟ್ರೀಯ ಸಂಪತ್ತಿನ ಶೇ. 3ರಷ್ಟು ಮಾತ್ರ ಹೊಂದಿದ್ದಾರೆ. ಕಾರ್ಪೊರೇಟ್ ತೆರಿಗೆ ಕಡಿತದ ಮೂಲಕ 2021–22ರಲ್ಲಿ ಭಾರತ ಸರ್ಕಾರವು 1 ಲಕ್ಷ ಕೋಟಿಗೂ ಹೆಚ್ಚು ಆದಾಯವನ್ನು ಅಧಿಕೃತವಾಗಿ ಬಿಟ್ಟುಕೊಟ್ಟಿದೆ (ಯೂನಿಯನ್ ಬಜೆಟ್ 2022 ಅನುಬಂಧ 7). ಒಂದು ಅಂದಾಜಿನ ಪ್ರಕಾರ ಕಳೆದ 10 ವರ್ಷಗಳಲ್ಲಿ ಕಾರ್ಪೊರೇಟ್ ವಲಯಕ್ಕೆ ಸುಮಾರು 55 ಲಕ್ಷ ಕೋಟಿ ಮೊತ್ತದ ತೆರಿಗೆ ರಿಯಾಯಿತಿಗಳು, ಮನ್ನಾ ಮತ್ತು SEZ ಮುಂತಾದ ಸೌಲಭ್ಯಗಳನ್ನು ನೀಡಲಾಗಿದೆ. ಮತ್ತೊಂದೆಡೆ, ಪ್ರತಿದಿನವೂ 20 ಕೋಟಿ ಭಾರತೀಯರು ಖಾಲಿ ಹೊಟ್ಟೆಯಲ್ಲಿ ಮಲಗುತ್ತಾರೆ ಮತ್ತು 25 ಲಕ್ಷ ಜನರು ಹಸಿವಿನಿಂದ ಪ್ರತಿ ವರ್ಷ ಸಾಯುತ್ತಾರೆ. ಭಾರತದ ಸುಮಾರು 140 ಕೋಟಿ ಜನರಲ್ಲಿ, ಸುಮಾರು ಶೇ. 60 ರಷ್ಟು ಜನರು ದಿನಕ್ಕೆ 250 ರೂ.ಗಿಂತ ಕಡಿಮೆ ಆದಾಯದಲ್ಲಿ ಬದುಕುತ್ತಿದ್ದಾರೆ. ವಿಶ್ವ ಬ್ಯಾಂಕ್‌ನ ಮಾನದಂಡದಂತೆ ಇದು ಮಧ್ಯಮ ಬಡತನ ರೇಖೆಯಾಗಿದೆ. ಮತ್ತು ಶೇ. 21 ರಷ್ಟು, ಅಂದರೆ 25 ಕೋಟಿಗೂ ಹೆಚ್ಚು ಜನರು ದಿನಕ್ಕೆ ರೂ. 166ಗಿಂತ ಕಡಿಮೆ ಆದಾಯದಲ್ಲಿ ಬದುಕುತ್ತಿದ್ದಾರೆ. UNO ಪ್ರಕಾರ ಭಾರತದಲ್ಲಿ ಸುಮಾರು 100 ಕೋಟಿ ಬಡವರು, ಬದುಕಲು ಬೇಕಾಗುವ ಮೂಲಭೂತ ಅವಶ್ಯಕತೆಗಳನ್ನು ಸಹ ಪಡೆಯಲು ಸಾಧ್ಯವಾಗುತ್ತಿಲ್ಲ. ವೈಯಕ್ತಿಕ ಅಗತ್ಯಕ್ಕಾಗಿ ವಸ್ತುಗಳನ್ನು ಖರೀದಿಸುವ ಬೇಡಿಕೆಯು ಸುಮಾರು ಶೇ. 100 ರಷ್ಟು ಕಡಿಮೆಯಾಗಿದೆ. ಒಟ್ಟಾರೆ ಗೃಹ ವೆಚ್ಚವೂ ಕುಸಿಯುತ್ತಿದೆ. ಇದಲ್ಲದೆ, ನಿರುದ್ಯೋಗ ಹೆಚ್ಚುತ್ತಿದೆ. ದೇಶದಲ್ಲಿ 32.06 ಕೋಟಿ ಜನರಿಗೆ ಉದ್ಯೋಗವಿಲ್ಲ. 20–24 ವಯಸ್ಸಿನವರಲ್ಲಿ ನಿರುದ್ಯೋಗವು ಶೇ. 44.49ರಷ್ಟು ಇದೆ. ಮತ್ತೊಂದೆಡೆ, 25–29 ವಯಸ್ಸಿನವರಲ್ಲಿ ಶೇ. 14.33 ರಷ್ಟಿದೆ. ಕಳೆದ ಮೂರು ವರ್ಷಗಳಲ್ಲಿ 31 ಲಕ್ಷ ಮಂದಿ ಅಧಿಕೃತವಾಗಿ ಉದ್ಯೋಗವನ್ನು ಕಳೆದುಕೊಂಡಿದ್ದಾರೆ. ಮಧ್ಯಮ ವರ್ಗದ ಕುಟುಂಬಗಳ ಸಂಖ್ಯೆ 9.9 ಕೋಟಿಯಿಂದ 6.6 ಕೋಟಿಗೆ ಕುಸಿದಿದೆ. ಅಂದರೆ 3.2 ಕೋಟಿ ಜನರು ಕಡು ಬಡತನಕ್ಕೆ ತಳ್ಳಲ್ಪಟ್ಟಿದ್ದಾರೆ. ಎನ್‌ಸಿಆರ್‌ಬಿ ವರದಿಯ ಪ್ರಕಾರ ಪ್ರತಿ ದಿನವೂ 154 ಬಡ ರೈತರು ಮತ್ತು ದಿನಗೂಲಿದಾರರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಬಿಜೆಪಿ ಆಡಳಿತದಲ್ಲಿ ದಿನಕ್ಕೆ ಸರಾಸರಿ 30 ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಒಟ್ಟಾರೆ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ 4 ಲಕ್ಷ ದಾಟಿದೆ. 2018 ಮತ್ತು 2020 ರ ನಡುವೆ ನಿರುದ್ಯೋಗ ಅಥವಾ ಆರ್ಥಿಕ ದಿವಾಳಿತನದಿಂದ 25,000 ಕ್ಕೂ ಹೆಚ್ಚು ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಮಾಹಿತಿ ಸಂಸತ್ತಿನ ಮುಂದಿದೆ. ಭಾರತದ ರಾಷ್ಟ್ರೀಯ ಸಾಲವು ಮಾರ್ಚ್ 31, 2023 ರಂತೆ 155 ಲಕ್ಷ ಕೋಟಿ ರೂಪಾಯಿಗಳಷ್ಟಿದೆ. ಅಂದರೆ ಹಣಕಾಸು ಸಚಿವಾಲಯದ ಮಾಹಿತಿಯ ಪ್ರಕಾರ, ಪ್ರಧಾನಿ ಮೋದಿ ಅವರ 10 ವರ್ಷಗಳಲ್ಲಿ ದೇಶದ ಸಾಲ 3 ಪಟ್ಟು ಹೆಚ್ಚಾಗಿದೆ. ಮೋದಿ ಆಡಳಿತದಲ್ಲಿ ಭಾರತ ಪ್ರತಿ ಸೆಕೆಂಡಿಗೆ 4 ಲಕ್ಷ ರೂಪಾಯಿ ಸಾಲ ಮಾಡಿದೆ. ಆದಾಯದ ಶೇ. 40 ರಷ್ಟು ಭಾಗ ಸಾಲಗಳ ಮೇಲಿನ ಬಡ್ಡಿ ಪಾವತಿಗೆ ಹೋಗುತ್ತದೆ. ಪ್ರತಿಯೊಬ್ಬ ಭಾರತೀಯನೂ 1.2 ಲಕ್ಷ ರೂಪಾಯಿಗಳ ಸಾಲದ ಹೊರೆ ಹೊತ್ತಿದ್ದಾನೆ. ಮೋದಿ ಸರ್ಕಾರ ಅಧಿಕಾರಕ್ಕೆ ಬಂದಾಗ ವಿತ್ತೀಯ ಕೊರತೆಯು ಜಿಡಿಪಿಯ ಶೇ. 4.8 ಇತ್ತು. ಈಗ ಅದು ಶೇ. 5.8 ಆಗಿದೆ. ಮಕ್ಕಳ ಅಪೌಷ್ಟಿಕತೆಯಲ್ಲಿ, ಭಾರತವು ಅತ್ಯಂತ ಬಡ ದೇಶಗಳಿಗಿಂತಲೂ ಹಿಂದುಳಿದಿದೆ. ದೇಶದಲ್ಲಿ ಐದು ವರ್ಷದೊಳಗಿನ ಸುಮಾರು 4,500 ಮಕ್ಕಳು ಹಸಿವು ಮತ್ತು ಅಪೌಷ್ಟಿಕತೆಯಿಂದ ಪ್ರತಿದಿನವೂ ಸಾಯುತ್ತಿದ್ದಾರೆ. ಗ್ಲೋಬಲ್ ಹಂಗರ್ ಇಂಡೆಕ್ಸ್ (GHI) ಸೂಚಿಸುವಂತೆ 2023 ರಲ್ಲಿ ಭಾರತವು ಒಟ್ಟು 125 ದೇಶಗಳ ಪಟ್ಟಿಯಲ್ಲಿ 111 ನೇ ಸ್ಥಾನದಲ್ಲಿದೆ.

ಬಡತನ ನಿರಂತವಾಗಿ ಏರುತ್ತಿದ್ದರೂ, ಅದು ಕಡಿಮೆಯಾಗಿದೆ ಎಂದು ಮೋದಿ ಸರ್ಕಾರ ಸಂಭ್ರಮಿಸುತ್ತಿದೆ. ಇದಕ್ಕೆ ವ್ಯತಿರಿಕ್ತವಾಗಿ ಅತ್ಯಂತ ಶ್ರೀಮಂತ ಭಾರತೀಯ ಮುಖೇಶ್ ಅಂಬಾನಿ ದಿನಕ್ಕೆ ರೂ. 163 ಕೋಟಿಯಂತೆ ಸಂಪಾದಿಸುತ್ತಿದ್ದು, ಅವರ ನಿವ್ವಳ ಸಂಪತ್ತು ರೂ. 7.63 ಲಕ್ಷ ಕೋಟಿಗಳಷ್ಟು ಆಗಿದೆ. ಗೌತಮ್ ಅದಾನಿ 2022 ರಲ್ಲಿ ದಿನವೊಂದಕ್ಕೆ ರೂ. 1,600 ಕೋಟಿಗಳನ್ನು ಗಳಿಸಿದ್ದರು. ಅವರ ಹಿಡಿತದಲ್ಲಿರುವ ಸಂಪತ್ತು ರೂ. 6.54 ಲಕ್ಷ ಕೋಟಿಗಳಷ್ಟು. 2020ರಲ್ಲಿ 102 ಶತಕೋಟ್ಯಾಧಿಪತಿಗಳ ಸಂಖ್ಯೆ ಇದ್ದಿದ್ದು, 2022 ರಲ್ಲಿ 166 ಕ್ಕೆ ಏರಿದೆ. ಭಾರತದ 100 ಮಂದಿ ಶ್ರೀಮಂತರ ಒಟ್ಟು ಸಂಪತ್ತು ರೂ. 54.12 ಲಕ್ಷ ಕೋಟಿ ಮುಟ್ಟಿದೆ. ಈ ಮೊತ್ತದಲ್ಲಿ 18 ತಿಂಗಳುಗಳಿಗಿಂತ ಹೆಚ್ಚು ಕಾಲ ಸಂಪೂರ್ಣವಾಗಿ ಕೇಂದ್ರ ಬಜೆಟ್‌ಗೆ ಹಣವನ್ನು ನೀಡಬಹುದಾಗಿದೆ (ಆಕ್ಸ್‌ಫಾಮ್ ವರದಿ).

### ಮುಂದಿದೆ ಕರಾಳ ಭವಿಷ್ಯ!

5 ಟ್ರಿಲಿಯನ್ (1 ಲಕ್ಷ ಕೋಟಿ) ಡಾಲರ್ ಆರ್ಥಿಕತೆಯ ಬಗ್ಗೆ ಕೊಚ್ಚಿಕೊಳ್ಳುವ ಕೇಂದ್ರ ಸರ್ಕಾರ, ದೇಶವಾಸಿಗಳ 'ಶಾಂತಿ ಮತ್ತು ಸಮೃದ್ಧಿ'ಗಾಗಿ ಏನನ್ನು ಯೋಜಿಸಿದೆ ಎಂಬುದನ್ನು ನೋಡೋಣ. ಬೂರ್ಜ್ವಾ ಅರ್ಥಶಾಸ್ತ್ರಜ್ಞರು ಕೂಡ ಹೇಳುವಂತೆ ಭಾರತವು 3 ವರ್ಷಗಳೊಳಗೆ ನಿಜವಾಗಿ 5–ಟ್ರಿಲಿಯನ್ ಆರ್ಥಿಕತೆಯಾಗಿ ಬೆಳೆಯಬೇಕಾದರೆ, ಶೇ. 9.55ರಷ್ಟು ಪ್ರಮಾಣದಲ್ಲಿ ಅಭಿವೃದ್ಧಿ ದರವೂ ಬೆಳೆಯುವ ಅಗತ್ಯವಿದೆ. ಪ್ರಸ್ತುತ ಕಳೆದ 10 ವರ್ಷಗಳಲ್ಲಿ ಸರಾಸರಿ ಅಭಿವೃದ್ಧಿ ದರವು ಶೇ. 6ಕ್ಕಿಂತ ಕಡಿಮೆಯಾಗಿದೆ. 'ವಿಕಸಿತ ಭಾರತ' ಎಂಬುದು ಆಡಳಿತಾರೂಢ ಬಂಡವಾಳಶಾಹಿ ವರ್ಗದ ಆಶಯಗಳಿಗೆ ಅನುಗುಣವಾಗಿದೆ ಅಷ್ಟೇ. ಆದರೆ ಅದಕ್ಕೂ ಜನರ ಕಷ್ಟ ನಿವಾರಣೆಗೂ ಯಾವುದೇ ಸಂಬಂಧವಿಲ್ಲ. ಕೇವಲ ಬಂಡವಾಳಶಾಹಿ ಆರ್ಥಿಕತೆಯ ಅಭಿವೃದ್ಧಿಯಿಂದಲೇ, ಜನರ ಜೀವನದಲ್ಲಿ ಸಮೃದ್ಧಿಯಿದೆ ಎಂದು ಅರ್ಥೈಸಲು ಆಗುವುದಿಲ್ಲ. ಏಕೆಂದರೆ ಕೆಲವೇ ಶ್ರೀಮಂತರ ಕೈಯಲ್ಲಿ ಸಂಪತ್ತು ಹೆಚ್ಚೆಚ್ಚು ಸಂಗ್ರಹವಾಗುತ್ತಿದ್ದು, ಸಾಮಾನ್ಯ ಜನರು ದೊಡ್ಡ ಪ್ರಮಾಣದಲ್ಲಿ ನಿರ್ಗತಿಕರಾಗುತ್ತಿದ್ದಾರೆ.

ಬಜೆಟ್‌ಗೂ ಅವರ 'ವಿಕಸಿತ ಭಾರತ', 'ಅಚ್ಛೇ ದಿನ್' ಘೋಷಣೆಗಳಿಗೂ ಏನೂ ಸಂಬಂಧವಿಲ್ಲ. 2024–25ರ ಬಜೆಟ್‌ನಲ್ಲಿ ಆಹಾರ, ರಸಗೊಬ್ಬರಗಳು ಮತ್ತು ಇಂಧನದ ಮೇಲಿನ ಸಬ್ಸಿಡಿಗಳನ್ನು ಶೇ. 7.8 ರಷ್ಟು ಕಡಿತಗೊಳಿಸಲಾಗಿದೆ. ಕೃಷಿಗೆ ಕಳೆದ ವರ್ಷದ ಬಜೆಟ್ ನಲ್ಲಿ ರೂ. 1.44 ಲಕ್ಷ ಕೋಟಿ ಮೀಸಲಿಟ್ಟಿದ್ದರೂ ಖರ್ಚು ಮಾಡಿರುವುದು ರೂ.1.4 ಲಕ್ಷ ಕೋಟಿಯಷ್ಟು ಮಾತ್ರ. ಶಿಕ್ಷಣ ಕ್ಷೇತ್ರಕ್ಕೆ ಕಳೆದ ವರ್ಷ ರೂ. 1.16 ಲಕ್ಷ ಕೋಟಿ ಮೀಸಲಿಟ್ಟಿದ್ದು, ಅದನ್ನು ರೂ. 1.09 ಲಕ್ಷ ಕೋಟಿಗೆ ಇಳಿಸಲಾಗಿದೆ. ಮುಂದಿನ ವರ್ಷ ರೂ. 1.25 ಲಕ್ಷ ಕೋಟಿಯಷ್ಟು ನೀಡಲಾಗುವುದಂತೆ. ಆರೋಗ್ಯಕ್ಕಾಗಿ, ಕಳೆದ ವರ್ಷ ರೂ. 89,000 ಕೋಟಿ ನೀಡಿದ್ದರೂ, ಆದರೆ ವಾಸ್ತವವಾಗಿ ರೂ. 79,000 ಕೋಟಿ ಮಾತ್ರ ಖರ್ಚಾಗಿದೆ. ಮುಂದಿನ ವರ್ಷಕ್ಕೆ ರೂ.90,000 ಸಾವಿರ ಕೋಟಿ ನೀಡಲಾಗುವುದಂತೆ. ಶೇಕಡಾವಾರು ಪ್ರಮಾಣದಲ್ಲಿ ನೋಡಿದರೆ ಆರೋಗ್ಯ ಮತ್ತು ಶಿಕ್ಷಣಕ್ಕೆ ನೀಡಲಾದ ಬಜೆಟ್ ಹಣವು ಶೇ. 1.8 ಮತ್ತು ಶೇ.2.5 ರಷ್ಟು ಮಾತ್ರ.

2023–24ರ ಬಜೆಟ್‌ನಲ್ಲಿ ದಲಿತರ ಏಳಿಗೆಗಾಗಿ ರೂ. 9,400 ಕೋಟಿ ನೀಡಿದ್ದರೂ, ಆದರೆ ಖರ್ಚು ಮಾಡಿರುವುದು ಕೇವಲ ರೂ. 2600 ಕೋಟಿ ಮಾತ್ರ. ಅಂತೆಯೇ, ಆದಿವಾಸಿಗಳ ಅಭಿವೃದ್ಧಿಗೆ ಬಜೆಟ್‌ನಲ್ಲಿ ರೂ. 4300 ಕೋಟಿ ನೀಡಿದ್ದರೂ, ಖರ್ಚು ಮಾಡಿದ್ದು ಕೇವಲ ರೂ. 3,300 ಕೋಟಿ ಮಾತ್ರ. ಸಮಾಜ ಕಲ್ಯಾಣಕ್ಕಾಗಿ ನೀಡಿದ್ದ ರೂ. 55,000 ಕೋಟಿಗಳಲ್ಲಿ ರೂ. 47,000 ಕೋಟಿಯನ್ನೂ ವ್ಯಯಿಸಿಲ್ಲ. ಕೃಷಿಗೆ ಸಂಬಂಧಿಸಿದಂತೆ ಬಜೆಟ್‌ನಲ್ಲಿ ಸುಮಾರು 4000 ಕೋಟಿ ರೂ. ಗಳಷ್ಟು ಕಡಿಮೆಯಾಗಿದೆ. ಹೀಗಿರುವಾಗ, ಹಿಂದುಳಿದ ವರ್ಗಗಳ ಬದುಕುನ್ನು ಉತ್ತಮಗೊಳಿಸುವ ಇರಾದೆ ಈ ಸರ್ಕಾರಕ್ಕೆ ಇದೆಯೇ?

### ಎಲ್ಲಾ ರೂಢಿ–ಆಚರಣೆಗಳನ್ನು ಗಾಳಿಗೆ ತೂರಲಾಗಿದೆ

ಮುಂಬರುವ ಚುನಾವಣೆಯಲ್ಲಿ ಆಡಳಿತ ಪಕ್ಷಕ್ಕೆ ಮರಳಿ ಅಧಿಕಾರ ನೀಡುವಂತೆ, ಬಜೆಟ್ ಭಾಷಣದಲ್ಲಿ ಮತದಾರರನ್ನು ಕೋರಲಾಗಿದೆ. ಇದು ದೇಶದ ಇತಿಹಾಸದಲ್ಲಿ ಎಂದೂ ನಡೆಯದ ವಿದ್ಯಮಾನ. ಅಲ್ಲದೆ, ರೂಢಿಗತ ಆಚರಣೆಗಳಂತೆ ಚುನಾವಣಾ ವರ್ಷದಲ್ಲಿ ಸರ್ಕಾರವು ಪೂರ್ಣ ಬಜೆಟ್ ಅನ್ನು ಮಂಡಿಸುವುದಿಲ್ಲ. ಉಳಿದ ಅವಧಿಗೆ ಮಾತ್ರ ಮಧ್ಯಂತರ ಬಜೆಟ್ ಅನ್ನು ಸಿದ್ಧಪಡಿಸುತ್ತದೆ. ಪೂರ್ಣ ಬಜೆಟ್ ಅನ್ನು ರೂಪಿಸುವ ಕೆಲಸವನ್ನು ಮುಂಬರುವ ಸರ್ಕಾರಕ್ಕೆ ಬಿಡುತ್ತದೆ. ಮಧ್ಯಂತರ ಬಜೆಟ್‌ನಲ್ಲಿ ಸಾಮಾನ್ಯವಾಗಿ ವೆಚ್ಚ, ಆದಾಯ, ವಿತ್ತೀಯ ಕೊರತೆ, ಹಣಕಾಸಿನ ಕಾರ್ಯಕ್ಷಮತೆ ಮತ್ತು ಪ್ರಸ್ತುತ ಸರ್ಕಾರದ ಮುಂಬರುವ ಹಣಕಾಸು ವರ್ಷದ ಯೋಜನೆಗಳ ಅಂದಾಜುಗಳನ್ನು ಒಳಗೊಂಡಿರುತ್ತದೆ. ಆದಾಗ್ಯೂ, ಇದರಲ್ಲಿ ಯಾವುದೇ ಪ್ರಮುಖ ನೀತಿ ಪ್ರಕಟಣೆಗಳನ್ನು ಒಳಗೊಂಡಿರಬಾರದು ಮತ್ತು ಸೇರಿಸಬಾರದು. ಚುನಾವಣೆಯಲ್ಲಿ ಮತಗಳಿಸುವ ಭರದಲ್ಲಿ ಕೇಂದ್ರ ಸರ್ಕಾರ ಎಲ್ಲ ಎಲ್ಲೆಯನ್ನೂ ಮೀರಿ ನಡೆದುಕೊಂಡಿದೆ. ತಾನು ನೀಡದೆ ಇರುವುದನ್ನೆಲ್ಲ ಕೊಟ್ಟಿದ್ದೇವೆ ಎಂದು ಸಂಭ್ರಮದಿಂದ ಹೇಳಿಕೊಂಡಿದೆ.

ಒಂದು ವಿಷಯ ಖಚಿತ. ಬಿಜೆಪಿಯು ಮತ್ತೆ ಅಧಿಕಾರಕ್ಕೆ ಬಂದರೆ, ನಿರ್ದಯಿ ಬಂಡವಾಳಶಾಹಿ ಶೋಷಣೆಯಿಂದ ತತ್ತರಿಸಿರುವ ಜನ ಜೀವನವನ್ನು ಅದು ಮತ್ತಷ್ಟು ನರಕವನ್ನಾಗಿಸುತ್ತದೆ. ■

## ಬಿಲ್ಕಿಸ್ ಬಾನು ಪ್ರಕರಣ

# ನ್ಯಾಯಕ್ಕೆ ಸಿಕ್ಕ ಜಯ

ಭಾರತದ ಕಾನೂನಿನ ಇತಿಹಾಸದಲ್ಲಿಯೇ ಇತ್ತೀಚೆಗಿನ ತೀರ್ಪೊಂದು ಮಹತ್ವದ್ದಾಗಿದೆ. ಇದರಲ್ಲಿ ನ್ಯಾಯಮೂರ್ತಿಗಳಾದ ಬಿ. ವಿ. ನಾಗರತ್ನ ಮತ್ತು ಉಜ್ಜಲ್ ಭುಯಾನ್ ಅವರನ್ನು ಒಳಗೊಂಡ ಸುಪ್ರೀಂ ಕೋರ್ಟ್ ವಿಭಾಗಿಯ ಪೀಠವು ಬಿಲ್ಕಿಸ್ ಬಾನು ಪ್ರಕರಣದಲ್ಲಿ ಗುಜರಾತ್ ಸರ್ಕಾರವು ಅಪರಾಧಿಗಳನ್ನು ಬಿಡುಗಡೆ ಮಾಡಿದ ನಿರ್ಧಾರವನ್ನು ರದ್ದುಗೊಳಿಸಿ, ಅಪರಾಧಿಗಳು ಶರಣಾಗಿ ಎರಡು ವಾರಗಳ ಒಳಗೆ ಜೈಲಿಗೆ ಮರಳುವಂತೆ ಆದೇಶಿಸಿತು. ಬಿಲ್ಕಿಸ್ ಬಾನು ಪ್ರಕರಣವು 2002ರ ಮಾರ್ಚ್ 3 ರಂದು ಗುಜರಾತ್ ನಲ್ಲಿ ನಡೆದ ಅಲ್ಪಸಂಖ್ಯಾತರ ವಿರೋಧಿ ಹತ್ಯಾಕಾಂಡದ ಸಂದರ್ಭದಲ್ಲಿ ನಡೆದಿದ್ದು, ಆಕೆಯ ಮೇಲೆ ಕ್ರೂರ ಸಾಮೂಹಿಕ ಅತ್ಯಾಚಾರ ಹಾಗೂ ಆಕೆಯ ಕುಟುಂಬದ 14 ಸದಸ್ಯರ ಸಾಮೂಹಿಕ ಮಾರಣಹೋಮ ನಡೆದಿತ್ತು. ದೋಷಿಗಳಾಗಿದ್ದ 11 ಜನ ಅಪರಾಧಿಗಳನ್ನು ಗುಜರಾತ್ ಬಿಜೆಪಿ ಸರ್ಕಾರವು ಸನ್ನಡತೆಯ ಆಧಾರದ ಮೇಲೆ ಬಿಡುಗಡೆ ಮಾಡಿತು. ಬಿಡುಗಡೆಯ ವಿರುದ್ಧ ಸಲ್ಲಿಸಿದ ಅರ್ಜಿಯ ತೀರ್ಪು ಜನವರಿ 8, 2024 ರಂದು ಹೊರಬಿದ್ದಿತ್ತು. ಸರ್ವೋಚ್ಚ ನ್ಯಾಯಾಲಯದ ಈ ತೀರ್ಪು ಬಿಜೆಪಿ ನೇತೃತ್ವದ ಗುಜರಾತ್ ಸರ್ಕಾರದ ಕ್ರಮದೊಂದಿಗೆ ರಾಜಿಯಾಗದೆ ಆಶಾಕಿರಣವನ್ನು ಮೂಡಿಸಿತು. ಈ ತೀರ್ಪಿನ ನಂತರ ನ್ಯಾಯಮೂರ್ತಿ ಬಿ.ವಿ.ನಾಗರತ್ನ ಅವರು ಪ್ರಜಾಪ್ರಭುತ್ವದ ಚೌಕಟ್ಟಿನೊಳಗೆ ಅಪರಾಧಿಗಳ ಹಕ್ಕುಗಳಿಗಿಂತ ಸಂತ್ರಸ್ತರ ಹಕ್ಕುಗಳಿಗೆ ಅವಕಾಶ ನೀಡಿ ಕಾನೂನಿನ ಪಾವಿತ್ರ್ಯತೆಯನ್ನು ಎತ್ತಿ ಹಿಡಿದುದ್ದಕ್ಕಾಗಿ ಸಾರ್ವಜನಿಕವಾಗಿ ಸಾಕಷ್ಟು ಪ್ರಶಂಸೆ ವ್ಯಕ್ತವಾಯಿತು. ಸಾಮಾಜಿಕ ಮಾಧ್ಯಮಗಳು ಕೂಡ ಬೆಂಬಲದ ಮಾರ್ಗಗಳಾಗಿ ಮಾರ್ಪಟ್ಟವು. ಇಲ್ಲಿ ಗಮನಾರ್ಹ ವಿಷಯವೆಂದರೆ ಆಡಳಿತ ವರ್ಗದಿಂದಲೇ ಕಾನೂನು ಪ್ರಕ್ರಿಯೆಗಳನ್ನು ತಿರುಚುವ ಪ್ರಯತ್ನಗಳು ನಡೆದಾಗಲೂ ಕಾನೂನಿನ ಪಾವಿತ್ರ್ಯತೆಯನ್ನು ಕಾಪಾಡಿದ್ದು!!

### ಬಿಲ್ಕಿಸ್ ಬಾನು ದಿಟ್ಟ ಹೋರಾಟಕ್ಕೆ ಒಂದು ಸಲಾಂ

ಕೋಮುವಾದಿಗಳು ಎಸಗಿದ ಘೋರ ಅಪರಾಧಕ್ಕೆ ಬಲಿಯಾದ ಒಬ್ಬ ಸಾಮಾನ್ಯ ಗೃಹಿಣಿ ಬಿಲ್ಕಿಸ್ ಬಾನು ನ್ಯಾಯಾಲಯದ ಕದತಟ್ಟಿ ವಾಸ್ತವವಾಗಿ ಸ್ಥಾಪಿತ ಪ್ರಬಲ ಆಡಳಿತದ ವಿರುದ್ಧ ನ್ಯಾಯಕ್ಕಾಗಿ ಸಮರ ಸಾರಿದ್ದು ಸಾಮಾನ್ಯ ಸಂಗತಿಯಲ್ಲ. ಆಕೆಯ ದೃಢತೆ, ಬುದ್ಧಿಜೀವಿಗಳ ಮತ್ತು ಕೆಲವು ಮಾನವ ಹಕ್ಕುಗಳ ಹೋರಾಟಗಾರರ ಬೆಂಬಲ ಆಕೆ ದಿಟ್ಟ ಹೆಜ್ಜೆ ಇಡುವಂತೆ ಮಾಡಿದವು. ಈ ಪ್ರಕರಣದ ಬಗ್ಗೆ ಗುಜರಾತ್ ಸರ್ಕಾರದಿಂದ ನ್ಯಾಯಯುತ ತನಿಖೆಯನ್ನು ಅಪೇಕ್ಷಿಸಲು ಸಾಧ್ಯವಿಲ್ಲ ಮತ್ತು ಅಂದಿನ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಯವರು ಸ್ವತಃ ಅಪರಾಧಿಗಳನ್ನು ರಕ್ಷಿಸುತ್ತಿದ್ದಾರೆ; ಹಾಗಾಗಿ ಪ್ರಕರಣವನ್ನು ಬೇರೆಡೆ ವರ್ಗಾಯಿಸಬೇಕು ಎಂಬ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ(NHRC) ದ ಮನವಿಯ ಮೇರೆಗೆ ಸುಪ್ರೀಂಕೋರ್ಟ್ ಸಿಬಿಐಗೆ ತನಿಖೆಯನ್ನು ಒಪ್ಪಿಸಿ ಪ್ರಕರಣವನ್ನು ಪುಟ 6 ಕ್ಕೆ

# ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನವಿರೋಧಿ ನೀತಿಗಳ ವಿರುದ್ಧ ಎಸ್‌ಯುಸಿಐ(ಸಿ) ಪ್ರತಿಭಟನೆ




ವರ್ಷಗಳು ಉರುಳುತ್ತಿವೆ, ಚುನಾವಣೆಗಳು ನಡೆಯುತ್ತಿವೆ, ಮತ್ತೆ ಬರುತ್ತಿವೆ, ವಿವಿಧ ರಾಜಕೀಯ ಪಕ್ಷಗಳ ಪ್ರಣಾಳಿಕೆಗಳ ಪದಪುಂಜಗಳು ಬದಲಾಗುತ್ತಿವೆ, ಆದರೆ ಜನರು ಸಕಾರಾತ್ಮಕ ಬದಲಾವಣೆಗಳನ್ನು ತಮ್ಮ ದಿನನಿತ್ಯ ಜೀವನದಲ್ಲಿ ಕಾಣುತ್ತಿಲ್ಲ.

ಶಿಕ್ಷಣ, ಆರೋಗ್ಯ ಕ್ಷೇತ್ರಗಳು ಖಾಸಗೀಕರಣಗೊಂಡು ಜನರ ಕೈಗೆಟುಕದಂತಾಗಿವೆ. ಖಾಸಗೀಕರಣದ ನೀತಿಗಳಿಂದಾಗಿ ಲಕ್ಷಾಂತರ ಕಾರ್ಮಿಕರು ಖಾಯಂ ಉದ್ಯೋಗಗಳಿಂದ ವಂಚಿತರಾಗುತ್ತಿದ್ದಾರೆ. ಇನ್ನೊಂದೆಡೆ, ರೈತರ ಬದುಕು ಕೂಡ ಸಂಕಷ್ಟಮಯವಾಗಿದೆ. ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನೀಡಲಾಗುವುದು ಎಂದಿದ್ದ ಕೇಂದ್ರ ಸರ್ಕಾರವು ಎರಡು ವರ್ಷಗಳ ನಂತರವೂ ಯಾವುದೇ ಕ್ರಮ ಕೈಗೊಂಡಿಲ್ಲ. ಆದ್ದರಿಂದಲೇ, ಇದೀಗ ಮತ್ತೊಮ್ಮೆ ದೆಹಲಿಯಲ್ಲಿ ರೈತರು ಹೋರಾಟ ನಿರತರಾಗಿದ್ದಾರೆ, ಹರಿಯಾಣಾದ 24 ವರ್ಷದ ರೈತ ಯುವಕನೊಬ್ಬ ಪೊಲೀಸರ ದಾಳಿಗೆ ಬಲಿಯಾಗಿ ಹುತಾತ್ಮನಾಗಿದ್ದಾನೆ!

ಸದಾಕಾಲ 'ವಿಕಸನ', 'ಅಭಿವೃದ್ಧಿ'ಯ ಮಾತುಗಳನ್ನೇ ಆಡುವ ಕೇಂದ್ರ ಸರ್ಕಾರ ಯಾರ ಅಭಿವೃದ್ಧಿ ಮಾಡುತ್ತಿದೆ?

ರಾಜ್ಯದಲ್ಲಿಯೂ ಅಧಿಕಾರದಲ್ಲಿ ಬಂದಿರುವ ಕಾಂಗ್ರೆಸ್ ಸರ್ಕಾರವು ತಾನು ಜಾರಿಗೊಳಿಸಿರುವ ಕೆಲವು ಗ್ಯಾರಂಟಿಗಳನ್ನೇ ಬಂಡವಾಳವಾಗಿಟ್ಟುಕೊಂಡು ಅಳ್ವಿಕೆ ನಡೆಸುತ್ತಿದೆ. ರಾಜ್ಯದಲ್ಲಿ ಬರ ಪರಿಸ್ಥಿತಿ ತಲೆದೋರಿದೆ. ಗ್ರಾಮೀಣ ಜನತೆಗೆ ಅಷ್ಟಿಷ್ಟು ನೆರವಾಗುವ ನರೇಗಾ ಯೋಜನೆಯ ಅನುಷ್ಠಾನ ಸಮರ್ಪಕವಾಗಿಲ್ಲ. ಕೇಂದ್ರ ಬಿಜೆಪಿ ಸರ್ಕಾರವು ಅಗತ್ಯ ಅನುದಾನ ನೀಡುತ್ತಿಲ್ಲ. ಶಿಕ್ಷಣ, ಆರೋಗ್ಯ ಕ್ಷೇತ್ರಗಳನ್ನು ಕಾಡುತ್ತಿರುವ ಸಮಸ್ಯೆಗಳು ಅನೇಕ. ಕೇಂದ್ರ ಬಿಜೆಪಿ ಸರ್ಕಾರ ಜಾರಿಗೆ ತಂದಿರುವ ರಾಷ್ಟ್ರೀಯ ಶಿಕ್ಷಣ ನೀತಿ ಅವೈಜ್ಞಾನಿಕವಾಗಿ ಪದವಿ ಶಿಕ್ಷಣವನ್ನು 4 ವರ್ಷಗಳಿಗೆ ವಿಸ್ತರಿಸುವುದರ ಮೂಲಕ ಹಾಗೂ ಶಿಕ್ಷಣದ ವ್ಯಾಪಾರೀಕರಣಕ್ಕೆ ಅನುವು ಮಾಡಿಕೊಡುವುದರ ಮೂಲಕ ಬಡ ವಿದ್ಯಾರ್ಥಿಗಳೊಂದಿಗೆ ಚೆಲ್ಲಾಟವಾಡುತ್ತಿದೆ. ಸರ್ಕಾರಿ ಶಾಲೆಗಳಲ್ಲಿ ಶೌಚಾಲಯ, ಕುಡಿಯುವ ನೀರು ಮುಂತಾದ ಮೂಲಭೂತ ಸೌಕರ್ಯಗಳೇ ಇಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲಿ ಎಂಆರ್‌ಐ, ಸಿಟಿ, ಅಲ್ಟ್ರಾಸೌಂಡ್ ಸ್ಕ್ಯಾನಿಂಗ್, ಕನಿಷ್ಠ ಎಕ್ಸ್‌ರೇ, ಔಷಧಿಗಳು, ವೈದ್ಯರು ಮತ್ತಿತರ ಸಿಬ್ಬಂದಿ ಸಿಗದೇ ಬಡಜನರು ಸಂಕಷ್ಟದಲ್ಲಿದ್ದಾರೆ. ಕೇಂದ್ರದ ಭಾರಿ ಪ್ರಚಾರದ ಆಯುಷ್ಮಾನ್ ಭಾರತ ಯೋಜನೆ ಜನರ ಪಾಲಿಗೆ ಕ್ರೂರ ವಿಡಂಬನೆಯಾಗಿದೆ.

ಇನ್ನು ನೇಮಕಾತಿಯೇ ನಡೆಯದೆ ಇರುವುದರಿಂದಾಗಿ ಉದ್ಯೋಗ ದೊರಕುವ ಯಾವುದೇ ಆಸೆಯನ್ನು ಯುವಜನರು ಹೊಂದಿಲ್ಲ. ಪ್ರತಿಯೊಂದು ನೇಮಕಾತಿ ಪರೀಕ್ಷೆಗಳಲ್ಲೂ ಅಕ್ರಮ, ಹಗರಣಗಳು ಸರ್ವೇಸಾಮಾನ್ಯವಾಗಿದ್ದು, ಅರ್ಹರು ವಂಚಿತರಾಗುತ್ತಲೇ ಇದ್ದಾರೆ. ಈ ಸಮಸ್ಯೆಗಳಿಗೆ 'ಯುವನಿಧಿ' ಯಾವುದೇ ರೀತಿಯಲ್ಲೂ ಪರಿಹಾರದ ಗ್ಯಾರಂಟಿ ನೀಡದಾಗಿದೆ. ಇನ್ನು ಆಶಾ, ಅಂಗನವಾಡಿ, ಬಿಸಿಯೂಟ, ಎನ್‌ಆರ್‌ಎಚ್‌ಎಂ ಮೊದಲಾದ ವಿವಿಧ ಯೋಜನೆಗಳಲ್ಲಿ ದಿನನಿತ್ಯ ದುಡಿಯುತ್ತಿರುವ ಅಸಂಘಟಿತ ಕಾರ್ಮಿಕರು ವೇತನ ಹೆಚ್ಚಳಕ್ಕಾಗಿ, ಸೇವಾ ಭದ್ರತೆಗಾಗಿ ಹೋರಾಟ ನಿರತರಾಗಿದ್ದಾರೆ. ರಾಜ್ಯದಲ್ಲಿ ಹೆಚ್ಚುತ್ತಿರುವ ಮರ್ಯಾದೆಗೇಡು ಹತ್ಯೆಗಳು, ಸ್ತ್ರೀ ಭ್ರೂಣ ಹತ್ಯೆ, ಮಹಿಳೆಯರ ಮೇಲಿನ ದೌರ್ಜನ್ಯದ ಪ್ರಕರಣಗಳು ಕಲುಷಿತ ಸಾಮಾಜಿಕ ವಾತಾವರಣಕ್ಕೆ ಹಿಡಿದ ಕನ್ನಡಿಯಾಗಿವೆ. ಅಪರಾಧಿಗಳಿಗೆ ಶಿಕ್ಷೆ ಎಂದೋ?

ಇಂದು ಯಾವ ಪಕ್ಷಗಳೂ ಜನರ ಸಮಸ್ಯೆಗಳ ವಿರುದ್ಧ ಜನಹೋರಾಟಗಳನ್ನು ಕಟ್ಟುತ್ತಿಲ್ಲ. ವೈಯಕ್ತಿಕ ನಿಂದನೆ, ಕೆಸರೆರಚಾಟದಲ್ಲಿ ನಿರತವಾಗಿವೆ. ಹಾಗೆಯೇ ಇಂದು ಆಡಳಿತಾರೂಢ ಪಕ್ಷಗಳು ಜನರ ನೈಜ ಸಮಸ್ಯೆಗಳನ್ನು ಬಗೆಹರಿಸುವ ಬದಲು ಅವರ ಗಮನವನ್ನು ಬೇರೆಡೆ ಸೆಳೆಯಲು, ಅವರನ್ನು ಭಾವನಾತ್ಮಕ ವಿಷಯಗಳಾದ ಧರ್ಮ, ಜಾತಿ, ಭಾಷೆ, ನೆಲ, ಜಲ ಮುಂತಾದ ವಿಷಯಗಳಲ್ಲಿ ಮುಳುಗಿಸುತ್ತಿವೆ. ಬದುಕಿನ ಪ್ರಶ್ನೆಗಳಿಗಿಂತ ಮಂದಿರ, ಮಸೀದಿ, ಬಾವುಟಗಳೇ ಮುಖ್ಯ ಎನ್ನುವಂತಾಗಿದೆ. ವ್ಯತಿರಿಕ್ತವಾಗಿ ಎಸ್‌ಯುಸಿಐ(ಸಿ) ದಿನಂಪ್ರತಿ ಜನಹೋರಾಟಗಳಲ್ಲಿ ನಿರತವಾಗಿದೆ. ಜನರ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಚುನಾವಣೆಯಲ್ಲ, ಸರ್ಕಾರಗಳ ಅಥವಾ ವ್ಯಕ್ತಿಗಳ ಬದಲಾವಣೆ ಅಲ್ಲ, ಬದಲಿಗೆ ಬಂಡವಾಳಶಾಹಿ ಪರ ನೀತಿಗಳನ್ನು ಜಾರಿಗೊಳಿಸಿ, ಶೋಷಕ ವ್ಯವಸ್ಥೆಯನ್ನು ಪೋಷಿಸಿಕೊಂಡು ತನ್ಮೂಲಕ ಜನಸಾಮಾನ್ಯರ ಹಿತಾಸಕ್ತಿಯನ್ನು ಬಲಿಕೊಡುತ್ತಿರುವ ಸರ್ಕಾರಗಳ ಜನವಿರೋಧಿ ನೀತಿಗಳ ವಿರುದ್ಧ, ಶೋಷಕ ವ್ಯವಸ್ಥೆಯ ವಿರುದ್ಧ ಪ್ರಬಲ ಹೋರಾಟಗಳನ್ನು ಕಟ್ಟುವುದರಲ್ಲಿದೆ ಎಂಬುದನ್ನು ಎಸ್‌ಯುಸಿಐ(ಸಿ) ದೃಢವಾಗಿ ನಂಬಿದೆ. ಅದಕ್ಕಾಗಿ ಜಾತಿ, ಧರ್ಮ, ಭಾಷೆ, ಲಿಂಗ ಇತ್ಯಾದಿ ತಾರತಮ್ಯವಿಲ್ಲದೆ ಎಲ್ಲಾ ದಮನಿತರನ್ನು ಅವರ ಜ್ವಲಂತ ಸಮಸ್ಯೆಗಳ ವಿರುದ್ಧ ಹೋರಾಡಲು ದಶಕಗಳಿಂದ ಸಂಘಟಿಸುತ್ತಿದೆ. ಇಂದು ಎಲ್ಲಾ ಶೋಷಿತರು ಒಂದಾಗಿ, ಸರ್ಕಾರಗಳು ಕಾರ್ಪೊರೇಟ್ ಮನೆತನಗಳ ಪರವಾದ ನೀತಿಗಳನ್ನು ಕೈಬಿಟ್ಟು ಜನಪರ ನೀತಿಗಳನ್ನು ರೂಪಿಸುವಂತೆ ಒತ್ತಾಯಿಸಲು ಮುಂಬರಬೇಕಾಗಿದೆ. ಈ ನಿಟ್ಟಿನಲ್ಲಿ ಎಸ್‌ಯುಸಿಐ(ಸಿ) ಕರ್ನಾಟಕ ರಾಜ್ಯ ಸಮಿತಿಯು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಜನಾಗ್ರಹದ ಮೂಲಕ ಮನವಿ ಸಲ್ಲಿಸಲು ಮಾರ್ಚ್ 6 ರಂದು 'ಬೆಂಗಳೂರು ಚಲೋ' ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

ಇದಕ್ಕೆ ಪೂರಕವಾಗಿ ವಿವಿಧ ಜಿಲ್ಲೆಗಳಲ್ಲಿಯೂ ಸಹ ಜಿಲ್ಲೆಯ ವಿಶಿಷ್ಟ ಸಮಸ್ಯೆಗಳನ್ನೂ ಒಳಗೊಂಡು ಪ್ರತಿಭಟನೆಗಳು ನಡೆದವು.















## ಮಹಾನ್ ಲೆನಿನ್ ಯಶೋಗಾಥೆ...

ಪುಟ 1ರಿಂದ

'ಲಿಕ್ವಿಡೇಟರ್ಸ್'(ಬರಖಾಸ್ತು ಮಾಡುವವರು) ಎಂದು ಹೆಸರಿಸಲಾಗಿದೆ. ಮೆನ್ಷೆವಿಕ್‌ರ ನಿಜವಾದ ಪೆಟಿಬೂರ್ಜ್ವಾ ಸ್ವರೂಪವನ್ನು ಎತ್ತಿತೋರಿಸಲು ಸೆಪ್ಟೆಂಬರ್ 1909ರಲ್ಲಿ ಲೆನಿನ್, 'ದಿ ಲಿಕ್ವಿಡೇಟರ್ಸ್ ಎಕ್ಸ್‌ಪೋಸ್ಡ್' ಎಂಬ ಕೃತಿಯನ್ನು ರಚಿಸಿ, ಪ್ಲೆಖನೋವ್ ಮತ್ತು ಮೆನ್ಷೆವಿಕ್ ಬಣದ ದುಷ್ಕೃತ್ಯಗಳನ್ನು ಬಯಲಿಗೆಳೆದರು.

ಇನ್ನೊಂದು ದಿಕ್ಕಿನಿಂದಲೂ ಸಹ ದಾಳಿಯು ಎರಗಿ ಬಂತು. ಬೊಗ್ಡನೋವ್, ವ್ಯಾಲೆಂಟಿನ್ ಎಂಬ ಮಾರ್ಕ್ಸ್‌ವಾದಿಗಳು, 'ನಾವು ಮಾರ್ಕ್ಸ್‌ವಾದವನ್ನು ಅದರ ಕೊರತೆಗಳಿಂದ ವಿಮುಕ್ತಿಗೊಳಿಸಿ ಬೆಳೆಸಬೇಕು' ಎಂಬ ಮಾತನ್ನು ಆಡಲಾರಂಭಿಸಿದರು. 'ನಿಜವಾದ ಜ್ಞಾನವು ಅಥವಾ ಅದರ ನಿಜವಾದ ಸಮರ್ಥನೆಯು ಮೂಲದಲ್ಲಿ ಅಥವಾ ಪ್ರಾಥಮಿಕವಾಗಿ ಇಂದ್ರಿಯ ಅನುಭವದಿಂದ ಹೊರಹೊಮ್ಮುತ್ತದೆ' ಎನ್ನುತ್ತಾ ಮಾರ್ಕ್ಸ್‌ವಾದದ ಮೂಲತತ್ವವನ್ನೇ ಧಿಕ್ಕರಿಸುವ ಅಂದರೆ ಐತಿಹಾಸಿಕ ವಸ್ತುವಾದವನ್ನೇ ತಿರಸ್ಕರಿಸುವ ಆಲೋಚನೆಯನ್ನು ಹೊಂದಿದ್ದ ಮ್ಯಾಕ್, ಅವೆರ್ನೆಸ್ ಮತ್ತಿತರಂತಹ 'ಎಂಪೆರಿಸಿಸ್ಟ್'ರು ಅವರನ್ನು ಸೇರಿಕೊಂಡರು. ಪಾತಪತ್ಯದ ಪದಪುಂಜಗಳ ಹೊದಿಕೆಹೊದ್ದು ತತ್ವಜ್ಞಾನ ಪ್ರಪಂಚದ ಮೇಲೆ ಎರಗಿದ ಈ ಆಕ್ರಮಣವನ್ನು ಹಿಮ್ಮೆಟ್ಟಿಸುವ ಅಗತ್ಯವಿತ್ತು. 1909ರಲ್ಲಿ ಲೆನಿನ್ ಬರೆದ ಅತ್ಯುತ್ಕೃಷ್ಟ ತರ್ಕ ಮತ್ತು ಆಧಾರಗಳನ್ನು ಒಳಗೊಂಡ ಮಹೋನ್ನತ ಕೃತಿ, 'ಮೆಟೀರಿಯಲಿಸಂ ಅಂಡ್ ಎಂಪಿರಿಕೋ ಕ್ರಿಟಿಸಿಸಂ'; ಈ ಮಹತ್ವದ ವಿಷಯವನ್ನು ಸಮಗ್ರವಾಗಿ ಚರ್ಚಿಸಿ ಎಲ್ಲ ರೀತಿಯ ದಿಕ್ಚ್ಯುತಿಗಳನ್ನಷ್ಟೇ ಅಲ್ಲದೆ ಎಂಪೆರಿಸಿಸ್ಟ್‌ರು, ಮತ್ತಿತರರನ್ನು ಸೋಲಿಸಿದ ಇದು ಅತ್ಯಂತ ಜ್ಞಾನಪೂರಿತ ಕೃತಿಯಾಗಿದೆ. ಈ ಅಮೂಲ್ಯ ತತ್ವಶಾಸ್ತ್ರದ ಕೃತಿಯ ಮೂಲಕ ರಾಜಕೀಯ ಮತ್ತು ಸಂಘಟನೆಯ ರಂಗಗಳಲ್ಲಿ ಹುಟ್ಟಿ ಬಂದ ಎಲ್ಲ ರೀತಿಯ ಪ್ರಶ್ನೆಗಳನ್ನು ಸ್ಪಷ್ಟವಾಗಿ ಉತ್ತರಿಸಿದ ಲೆನಿನ್, ಎಲ್ಲ ರೀತಿಯ ಮಾರ್ಕ್ಸ್‌ವಾದಿ ವಿರೋಧಿ ಪ್ರತಿಕ್ರಾಂತಿಯ ಚಿಂತನೆಗಳನ್ನು ಸಮಗ್ರವಾಗಿ ಸೋಲಿಸಿದರು.

ಲೆನಿನ್‌ರ ನೈಜ ಶಿಷ್ಯ ಹಾಗೂ ಅವರ ಯೋಗ್ಯ ಅನುಯಾಯಿಯಾದ ಮಹಾನ್ ಸ್ಟಾಲಿನ್ ಲೆನಿನ್‌ರವರ ಐತಿಹಾಸಿಕ ಪಾತ್ರದ ಬಗ್ಗೆ ವಿವರಿಸುತ್ತಾ, "ಪ್ರತಿಕ್ರಾಂತಿಯ ಹೊಡೆತಕ್ಕೆ ಸಿಕ್ಕಿ, ಪಕ್ಷವು ಸಂಪೂರ್ಣ ವಿಘಟನೆಯ ದಿಕ್ಕಿನಲ್ಲಿ ನಡೆಯುತ್ತಿದ್ದ 1909ರಿಂದ 1911ರ ಅವಧಿಯಲ್ಲಿ ಈ ಕೃತಿಯು ರಚಿತವಾದದ್ದು. ಆ ಕಾಲದಲ್ಲಿ, ಪಕ್ಷದ ಒಳಗೆ ಅಪನಂಬಿಕೆಯ ಗಾಳಿ ಬೀಸುತ್ತಿತ್ತು, ಪಕ್ಷವನ್ನು ತೊರೆದವರ ಸಂಖ್ಯೆ ಎಷ್ಟೋ, ಅವರಲ್ಲಿ ಬುದ್ಧಿಜೀವಿಗಳಿದ್ದರು, ಕೆಲವು ಕಾರ್ಮಿಕರೂ ಇದ್ದರು. ಅಕಾನೂನಾತ್ಮಕ ಸಂಘಟನೆಯ ಅಗತ್ಯವನ್ನು ನಿರಾಕರಿಸಿದ ಕಾಲವದು. ಸಂಪೂರ್ಣ ಕುಸಿತದ ಮತ್ತು ವಿಸರ್ಜನೆಯ ಹತಾಶ ಕಾಲವದು. ಆಗ ಮೆನ್ಷೆವಿಕ್‌ರು ಮಾತ್ರವಲ್ಲದೆ, ಬೋಲ್ಷೆವಿಕ್‌ರ ನಡುವೆಯೂ ಸಹ ಕಾರ್ಮಿಕ ವರ್ಗ ಚಳುವಳಿಯಿಂದಲೇ ಬಹುಪಾಲು ವಿಚ್ಛೇದಗೊಂಡಿದ್ದ ಹಲವಾರು ಬಣಗಳು ಮತ್ತು ಹರಿವುಗಳು ಇದ್ದವು. ನಿಮಗೆ ತಿಳಿದಂತೆ, ಆ ಅವಧಿಯಲ್ಲಿ, ಅಕಾನೂನಾತ್ಮಕ ಸಂಘಟನೆಯನ್ನು ಸಂಪೂರ್ಣವಾಗಿ ವಿಸರ್ಜಿಸಿ ಕಾನೂನಾತ್ಮಕವಾದ ಮತ್ತು ಉದಾರವಾದಿ 'ಸ್ಟಾಲಿಪಿನ್ ಪಕ್ಷ'ದ ಮಾದರಿಯಲ್ಲಿ ಕಾರ್ಮಿಕರನ್ನು ಸಂಘಟಿಸಬೇಕು ಎನ್ನುವ ಆಲೋಚನೆಯೂ ಸಹ ಹುಟ್ಟಿತು (ಆಯ್ದ ಕೃತಿಗಳು, ಸಂಪುಟ 4)." ಎಲ್ಲ ರೀತಿಯಲ್ಲೂ ಕಾಣಿಸಿಕೊಂಡ ದಿಕ್ಚ್ಯುತಿಗಳ ಸಾಂಕ್ರಾಮಿಕಕ್ಕೆ ಬಲಿಯಾಗದೆ ಮತ್ತು ಪಕ್ಷತತ್ವದ ಬ್ಯಾನರನ್ನು ಬಲವಾಗಿ ಮೇಲೆತ್ತಿ ಹಿಡಿದು, ಆಶ್ಚರ್ಯಜನಕ ತಾಳ್ಮೆ ಮತ್ತು ಅಸಾಧಾರಣ ದೃಢತೆಯಿಂದ ಚದುರಿ ಹೋಗಿದ್ದ ಪಕ್ಷವನ್ನು ಒಗ್ಗೂಡಿಸಿ, ಎಲ್ಲ ರೀತಿಯ ಪಕ್ಷ ವಿರೋಧಿ ಹರಿವುಗಳನ್ನು ಮೆಟ್ಟಿನಿಂತು ಪಕ್ಷವನ್ನು ಅಸಾಧಾರಣ ಧೈರ್ಯ ಮತ್ತು ಅದ್ವಿತೀಯ ಸಂಯಮದಿಂದ ಲೆನಿನ್ ಮುನ್ನಡೆಸಿದರು.

### ಮೊದಲ ವಿಶ್ವ ಯುದ್ಧ ಮತ್ತು ಲೆನಿನ್‌ರ ಅದ್ಭುತ ವಿಶ್ಲೇಷಣೆ

ವಿಶ್ವ ಮಾರುಕಟ್ಟೆಯನ್ನು ಕಬಳಿಸಲು 1914ರ ಆಗಸ್ಟ್ 1ರಂದು ರಷ್ಯಾ, ಬ್ರಿಟನ್ ಮತ್ತು ಫ್ರಾನ್ಸ್‌ಗಳನ್ನು ಒಳಗೊಂಡ ಒಂದು ಬಂಡವಾಳಶಾಹಿ ಯುದ್ಧಕೋರ ಗುಂಪಿನ ಜೊತೆಯಲ್ಲಿ ಜರ್ಮನಿ, ಆಸ್ಟ್ರಿಯಾ ಮತ್ತು ಹಂಗೇರಿ ಸೇರಿದ್ದ ಇನ್ನೊಂದು ಗುಂಪಿನ ನಡುವೆ ಮೊದಲ ವಿಶ್ವ ಮಹಾಯುದ್ಧವು ಆರಂಭವಾಯಿತು. ಅಂದು ಎರಡನೇ ಅಂತರರಾಷ್ಟ್ರೀಯ(1889ರಲ್ಲಿ ಆರಂಭವಾದದ್ದು)ದ ಮುಂಚೂಣಿ ನಾಯಕರಾಗಿದ್ದ ಪ್ಲೆಖನೋವ್ ಮತ್ತು ಜರ್ಮನಿಯ ಕಾರ್ಲ್ ಕೌಟ್ಸ್ಕಿಯಂತಹ ಮುಖಂಡರು ಈ ಯುದ್ಧದಲ್ಲಿ ಕಾರ್ಮಿಕ ವರ್ಗದ ಪಾತ್ರವನ್ನು ಕುರಿತಂತೆ ಸಂಕುಚಿತ ರಾಷ್ಟ್ರೀಯತಾ ಮನೋಭಾವದಿಂದ ಕೊಚ್ಚಿಕೊಂಡು ಹೋದರು. ಕಾರ್ಮಿಕ ವರ್ಗದ ಅಂತರರಾಷ್ಟ್ರೀಯವಾದ ಎಂಬ ಮಾರ್ಕ್ಸ್‌ವಾದಿ ನಿಲುವಿನಿಂದ ವಿಮುಖರಾಗಿ ಅವರು, ಯುದ್ಧನಿರತ ದೇಶಗಳ ಕಾರ್ಮಿಕ ವರ್ಗವು ಆಯಾ ದೇಶಗಳಲ್ಲಿ ರಾಜ್ಯಾಧಿಕಾರದಲ್ಲಿರುವವರು ಹಾಗೂ ಬಂಡವಾಳಶಾಹಿ ಆಳ್ವಿಕರ ಜೊತೆಯಲ್ಲಿ ಹೆಗಲು ಕೊಟ್ಟು ನಿಲ್ಲಬೇಕು ಎಂಬ ಅಭಿಪ್ರಾಯವನ್ನು ಹೊಂದಿದ್ದರು. ಇಂತಹ ಆತ್ಮಘಾತಕ ನಿಲುವಿನಿಂದ ಲೆನಿನ್ ತೀವ್ರ ಕ್ಷೋಭೆಗೆ ಒಳಗಾದರು. ಆಗ ಸ್ಟಟ್‌ಗರ್ಟ್ ನಗರದಲ್ಲಿ ನಡೆದ ಅಂತರರಾಷ್ಟ್ರೀಯ ಸಮಾಜವಾದಿ ಮಹಾಧಿವೇಶನದಲ್ಲಿ, ಎರಡನೇ ಅಂತರರಾಷ್ಟ್ರೀಯದ ನಾಯಕರು ಮಾರ್ಕ್ಸ್‌ವಾದದಿಂದ ಸಂಪೂರ್ಣವಾಗಿ ವಿಮುಖರಾಗಿರುವುದನ್ನು ವಿವರಿಸುತ್ತಾ, "...... ಯುದ್ಧವು ಬಂಡವಾಳವಾದದ ಅತ್ಯಂತ ಅನಿವಾರ್ಯ ಉತ್ಪತ್ತಿಯಾಗಿದೆ ಮತ್ತು ಕಾರ್ಮಿಕ ವರ್ಗವು ಕ್ರಾಂತಿಕಾರಿ ಯುದ್ಧಗಳಲ್ಲಿ ಭಾಗವಹಿಸುವುದಿಲ್ಲ ಎಂದು ವೈರಾಗ್ಯ ತಳೆಯುವಂತಿಲ್ಲ....... ಆದರೆ, ಒಂದು ಯುದ್ಧಕ್ಕೆ 'ಪ್ರತಿಕ್ರಿಯಿಸುವ' ಸಾಧ್ಯತೆಯು ಆ ಯುದ್ಧದಿಂದ ಉಂಟಾಗಿರುವ ಬಿಕ್ಕಟ್ಟಿನ ಸ್ವರೂಪವನ್ನು ಅವಲಂಬಿಸಿದೆ. ಅದರ ಮೇಲೆಯೇ ಯಾವ ಹೋರಾಟದ ಮಾರ್ಗವನ್ನು ಹಿಡಿಯಬೇಕು ಎನ್ನುವ ಆಯ್ಕೆಯೂ ನಿಂತಿದೆ. ಅದಕ್ಕಿಂತ ಹೆಚ್ಚಾಗಿ, ಹೋರಾಟವು ಬಂಡವಾಳವಾದವನ್ನು ಸಮಾಜವಾದದಿಂದ ಬದಲಾಯಿಸಲು ನಡೆಸಬೇಕೇ ವಿನ: ಯುದ್ಧವನ್ನು ಶಾಂತಿಯಿಂದ ಬದಲಾಯಿಸಲು ಅಷ್ಟೇ ಅಲ್ಲ. ಯುದ್ಧವನ್ನು ತಪ್ಪಿಸುವುದಷ್ಟೇ ಬಹುಮುಖ್ಯ ಸಂಗತಿಯಲ್ಲ. ಯುದ್ಧದಿಂದ ಲಭ್ಯವಾಗಿರುವ ಬಿಕ್ಕಟ್ಟನ್ನು ಬಳಸಿಕೊಂಡು ಬಂಡವಾಳಶಾಹಿಯನ್ನು ಅಧಿಕಾರದಿಂದ ಕಿತ್ತೊಗೆಯುವ ಪ್ರಕ್ರಿಯೆಗೆ ವೇಗವನ್ನು ಒದಗಿಸುವುದೇ ಅತಿ ಮುಖ್ಯ........(ಸಂಗ್ರಹ ಕೃತಿ, ಸಂಪುಟ 13)" ಎಂದು ತೋರಿಸಿಕೊಟ್ಟರು.

### ಕೌಟ್‌ಸ್ಕಿ ಮತ್ತಿತರರ ಸುಧಾರಣಾವಾದಿ – ಪರಿಷ್ಕರಣವಾದಿ ಮಾರ್ಗವನ್ನು ಬಹಿರಂಗಗೊಳಿಸುತ್ತಾ....

ತನ್ನ ಸುಧಾರಣಾವಾದಿ–ಪರಿಷ್ಕರಣವಾದಿ ಮಾರ್ಗಕ್ಕೆ ಸರಿಹೊಂದುವಂತಹ 'ಡಿಕ್ಟೇಟರ್‌ಶಿಪ್ ಆಫ್ ದ ಪ್ರಾಲಿಟೇರಿಯೇಟ್' (ಕಾರ್ಮಿಕವರ್ಗದ ಸರ್ವಾಧಿಕಾರ) ಎಂಬ ಲೇಖನವನ್ನು ಕೌಟ್‌ಸ್ಕಿ 1918ರಲ್ಲಿ ಪ್ರಕಟಿಸಿದಾಗ, ಅದನ್ನು ಟೀಕಿಸುತ್ತಾ, ಲೆನಿನ್, "....ಕೌಟ್‌ಸ್ಕಿವಾದದ ಹುಟ್ಟು ಆಕಸ್ಮಿಕವಲ್ಲ, ಎರಡನೇ ಅಂತರರಾಷ್ಟ್ರೀಯದ ಒಳಗಿನ ದ್ವಂದ್ವಗಳಿಂದ ಹುಟ್ಟಿದ ಸಾಮಾಜಿಕ ಉತ್ಪತ್ತಿ ಅದು. ಮಾತಿನಲ್ಲಿ ಮಾರ್ಕ್ಸ್‌ವಾದದಲ್ಲಿ ನಿಷ್ಠೆ ಮತ್ತು ಕೃತಿಯಲ್ಲಿ ಅವಕಾಶವಾದಕ್ಕೆ ಅಧೀನ ಎಂಬುವಂತಹ ಮಿಶ್ರಣ ಅದು"(ಸಮಾಜವಾದ ಮತ್ತು ಯುದ್ಧ, ಸಂಗ್ರಹ ಕೃತಿ ಸಂಪುಟ 21) ಎಂದು ಹೇಳಿದರು.

ಬಂಡವಾಳವಾದ ಮತ್ತು ಕಮ್ಯುನಿಸಂನ ನಡುವಿನ ಒಂದು ಸ್ಥಿತ್ಯಂತರ ಘಟ್ಟವಾದ ಸಮಾಜವಾದದ ಕಾಲಘಟ್ಟದಲ್ಲಿ 'ಕಾರ್ಮಿಕ ವರ್ಗದ ಸರ್ವಾಧಿಕಾರವು ಅನಿವಾರ್ಯ' ಎಂಬ ಮಾರ್ಕ್ಸ್‌ವಾದದ ಮೂಲ ಚಿಂತನೆಯನ್ನು ವಿರೂಪಗೊಳಿಸಿದ ಕೌಟ್‌ಸ್ಕಿ ಮತ್ತು ಇತರರನ್ನು ಬಯಲಿಗೆಳೆಯಲು ಅವರು 'ಪ್ರಾಲಿಟೇರಿಯನ್ ರೆವೊಲ್ಯೂಷನ್ ಅಂಡ್ ರೆನೆಗೇಡ್ ಕೌಟ್‌ಸ್ಕಿ' (ಕಾರ್ಮಿಕವರ್ಗ ಕ್ರಾಂತಿ ಮತ್ತು ತತ್ವಭ್ರಷ್ಟ ಕೌಟ್‌ಸ್ಕಿ) ಎಂಬ ಇನ್ನೊಂದು ಮಹತ್ವದ ಕೃತಿಯನ್ನು ರಚಿಸಿದರು. ಹಿಂದೆ ಮಾರ್ಕ್ಸ್ ತಮ್ಮ ಕೃತಿ, 'ಎ ಕ್ರಿಟಿಕ್ ಆಫ್ ದಿ ಗೋಥಾ ಪ್ರೋಗ್ರಾಮ್'(ಸಂಗ್ರಹ ಕೃತಿಗಳು ಸಂಪುಟ 1)ದಲ್ಲಿ, "ಬಂಡವಾಳಶಾಹಿ ವ್ಯವಸ್ಥೆಯಿಂದ ಕಮ್ಯುನಿಸ್ಟ್ ಸಮಾಜದ ಕಡೆಗೆ ಸಮಾಜವು ಬದಲಾಗುವಾಗ ನಡುವೆ ಕ್ರಾಂತಿಕಾರಿ ಬದಲಾವಣೆಯ ಕಾಲಘಟ್ಟವೊಂದಿರುತ್ತದೆ. ಆ ಸಂದರ್ಭ, ರಾಜಕೀಯ ಬದಲಾವಣೆಯ ಕಾಲದಲ್ಲಿ ಹುಟ್ಟುವ 'ರಾಜ್ಯವು' ಕಾರ್ಮಿಕ ವರ್ಗದ ಕ್ರಾಂತಿಕಾರಿ ಸರ್ವಾಧಿಕಾರದ ರಾಜ್ಯವಲ್ಲದೇ ಬೇರೇನೂ ಆಗಿರಲು ಸಾಧ್ಯವಿಲ್ಲ" ಎಂದು ಸ್ಪಷ್ಟವಾಗಿ ಹೇಳಿರುವುದನ್ನು ಇಲ್ಲಿ ಸ್ಮರಿಸಬಹುದು. ಇದೇ ಪರಿಕಲ್ಪನೆಯನ್ನು ಲೆನಿನ್, ತಮ್ಮ, 'ಪ್ರಾಲಿಟೇರಿಯನ್ ರೆವೊಲ್ಯೂಷನ್ ಅಂಡ್ ರೆನೆಗೇಡ್ ಕೌಟ್‌ಸ್ಕಿ'ಕೃತಿಯಲ್ಲಿ ಇನ್ನೂ ವಿಷದವಾಗಿ ವಿಸ್ತರಿಸಿದರು.

### ಸಾಮ್ರಾಜ್ಯವಾದವನ್ನು ಬಹಿರಂಗಗೊಳಿಸುತ್ತಾ.....

ಸಾಮ್ರಾಜ್ಯವಾದವನ್ನು ವಿಶ್ಲೇಷಿಸುತ್ತಾ, ಲೆನಿನ್, 'ಬ್ಯಾಂಕಿಂಗ್ ಬಂಡವಾಳ ಮತ್ತು ಕೈಗಾರಿಕಾ ಬಂಡವಾಳಗಳು ಪರಸ್ಪರ ಮೇಳೈಸಿಕೊಂಡು ವಿತ್ತೀಯ ಬಂಡವಾಳವು ಹುಟ್ಟಿ ವಿತ್ತೀಯ ಪ್ರಾಬಲ್ಯ (Financial Oligarchy)ಗೆ ಜನ್ಮ ನೀಡುತ್ತದೆ, ಆಗ ವಿತ್ತೀಯ ಬಂಡವಾಳವನ್ನು ರಫ್ತು ಮಾಡಿ ಇತರ ದೇಶಗಳಲ್ಲಿನ ಅಗ್ಗದ ಮೂಲ ವಸ್ತುಗಳು ಮತ್ತು ಅಗ್ಗದ ಶ್ರಮಶಕ್ತಿಯನ್ನು ಶೋಷಿಸಲು ಬಳಸಲಾಗುತ್ತದೆ, ಇದೇ ಉದ್ದೇಶದಿಂದ ದೊಡ್ಡ ಸಾಮ್ರಾಜ್ಯಶಾಹಿ ಶಕ್ತಿಗಳು ವಿಶ್ವ ಮಾರುಕಟ್ಟೆಯನ್ನು ತಮ್ಮತಮ್ಮ ಮಧ್ಯದಲ್ಲಿಯೇ ಹಂಚಿಕೊಳ್ಳುವ ಹತಾಶ ಯತ್ನದಲ್ಲಿವೆ, ಅಗತ್ಯವಿದ್ದಲ್ಲಿ, ಇದಕ್ಕಾಗಿ ಅವು ಪರಸ್ಪರರ ನಡುವೆ ಯುದ್ಧ ನಡೆಸಲೂ ಹಿಂತೆಗೆಯುವುದಿಲ್ಲ ಎಂದು ವಿವರಿಸಿದರು. ಈ ಚಿಂತನಾ ಲಹರಿಯ ಅಂತಿಮ ನಿರ್ಣಯವೇ, 'ಸಾಮ್ರಾಜ್ಯವಾದವು ಯುದ್ಧವನ್ನು ಹುಟ್ಟುಹಾಕುತ್ತದೆ' ಎಂಬುದು. ಇಂತಹ ಯುದ್ಧಗಳ ಮೂಲಕವೇ ಸಾಮ್ರಾಜ್ಯಶಾಹಿಗಳು ದುರ್ಬಲರಾಗಿದ್ದಾರೆ ಮತ್ತು ಕ್ರಾಂತಿಕಾರಿ ಕಾರ್ಮಿಕರು ಲಭ್ಯವಾಗಿರುವ ಅವಕಾಶವನ್ನು ಬಳಸಿಕೊಂಡು ಸಾಮ್ರಾಜ್ಯವಾದ–ಬಂಡವಾಳವಾದವನ್ನು ಕಿತ್ತೊಗೆಯಬೇಕು.

ಮಾರ್ಕ್ಸ್‌ವಾದವು ಒಂದು ಅಂಧ ತತ್ವವಲ್ಲ ಬದಲಿಗೆ ಅದು ಕ್ರಿಯೆಗೆ ಮಾರ್ಗದರ್ಶಿ, ಸೃಷ್ಟಿಶೀಲ ಮತ್ತು ಬೆಳೆಯುವ ವಿಜ್ಞಾನ ಎಂದು ಲೆನಿನ್ ಒತ್ತಿ ಹೇಳಿದ್ದಾರೆ. "ಮಾರ್ಕ್ಸ್‌ವಾದಿ ಸಿದ್ಧಾಂತವು ಸಂಪೂರ್ಣಗೊಂಡಿರುವುದು ಮತ್ತು ಮೀರಲಾಗದ್ದು ಎಂದು ನಾವು ಭಾವಿಸುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಅದು ವಿಜ್ಞಾನದ ಆಧಾರಸ್ತಂಭಗಳನ್ನು ಹಾಕಿ ಕೊಟ್ಟಿದೆ. ಬದುಕಿನ ಜೊತೆಯಲ್ಲಿ ಸಮಸಮವಾಗಿ ನಡೆಯಬೇಕಾದರೆ ಸಮಾಜವಾದಿಗಳು ಅವನ್ನು ಬಳಸಿಕೊಂಡು, ಅವನ್ನು ಎಲ್ಲ ದಿಕ್ಕುಗಳಲ್ಲೂ ಇನ್ನಷ್ಟು ಬೆಳೆಸಬೇಕು ಎಂದು ನಮಗೆ ಮನವರಿಕೆ ಆಗಿದೆ. ರಷ್ಯಾದ ಸಮಾಜವಾದಿಗಳಿಗೆ ವಿಶಿಷ್ಟವಾಗಿ, ಮಾರ್ಕ್ಸ್‌ವಾದಿ ಸಿದ್ಧಾಂತದ ಒಂದು ಸ್ವತಂತ್ರ ವಿಸ್ತರಣೆಯು ಬೇಕಾಗಿದೆ. ಏಕೆಂದರೆ ಮಾರ್ಕ್ಸ್‌ವಾದವು ಸಾರ್ವತ್ರಿಕ ಮಾರ್ಗದರ್ಶಿ ತತ್ವಗಳನ್ನು ಮಾತ್ರ ನೀಡುತ್ತವೆ. ಅವನ್ನು ಇಂಗ್ಲೆಂಡ್‌ಗಿಂತ ಭಿನ್ನವಾಗಿ ಫ್ರಾನ್ಸ್‌ನಲ್ಲಿ, ಫ್ರಾನ್ಸ್‌ಗಿಂತ ಭಿನ್ನವಾಗಿ ಜರ್ಮನಿಯಲ್ಲಿ ಮತ್ತು ಜರ್ಮನಿಗಿಂತ ಭಿನ್ನವಾಗಿ ರಷ್ಯಾದಲ್ಲಿ ನಿರ್ದಿಷ್ಟವಾಗಿ ಅಳವಡಿಸಬೇಕಾಗುತ್ತದೆ ಎಂದು ನಮಗನ್ನಿಸುತ್ತದೆ."(ಅವರ್ ಪ್ರೋಗ್ರಾಮ್, ಸಂಗ್ರಹ ಕೃತಿಗಳು ಸಂಪುಟ 2).

### ರಷ್ಯಾದ ಬಂಡವಾಳಶಾಹಿಗಳಿಂದ ರಾಜ್ಯಾಧಿಕಾರದ ಗ್ರಹಣ

1916ರ ಅಂತ್ಯದಿಂದ ಯುದ್ಧದ ವೈಫಲ್ಯದಿಂದ ಜ್ಞಾರ್ ಆಳ್ವಿಕೆಯು ಕಳೆಗುಂದಲು ಆರಂಭವಾಯಿತು. 1917ರ ವರ್ಷ ಜನವರಿ 9ರಂದು ಮುಷ್ಕರವೊಂದು ಶುರುವಾಯಿತು. ಮೆನ್ಷೆವಿಕರು ಮತ್ತು ಸೋಷಲಿಸ್ಟ್ ಕ್ರಾಂತಿಕಾರಿಗಳು ಕ್ರಾಂತಿಕಾರಿ ಚಳುವಳಿಯ ತೀವ್ರತೆಯನ್ನು ತಗ್ಗಿಸಲು ಯತ್ನಿಸಿದರು. ಪೆಟ್ರೋಗ್ರಾಡ್ ನಗರದ ಪ್ಯುಟಿಲೋವ್ ಕಾರ್ಖಾನೆಯಲ್ಲಿ ಫೆಬ್ರವರಿ 18ರಂದು ಮುಷ್ಕರವು ಆಸ್ಫೋಟಿಸಿತು. ಫೆಬ್ರವರಿ 25ರಂದು ಪೆಟ್ರೋಗ್ರಾಡ್‌ನ ಇಡೀ ಕಾರ್ಮಿಕ ವರ್ಗವು ಕ್ರಾಂತಿಕಾರಿ ಹೋರಾಟದ ಒಳಗೆ ಸೇರಿಕೊಂಡಿತು. ರಾಜಕೀಯ ಮುಷ್ಕರ ಮತ್ತು ಪ್ರದರ್ಶನಗಳು ಮರುದಿನ ಬೃಹತ್ ಬಂಡಾಯದ ಸ್ವರೂಪವನ್ನು ಪಡೆದುಕೊಂಡವು. ಜ್ಞಾರ್ ದೊರೆಯ ಸೈನ್ಯವು ಪೆಟ್ರೋಗ್ರಾಡ್‌ನಲ್ಲಿ ಕಾರ್ಮಿಕರ ಮೇಲೆ ಗುಂಡು ಹಾರಿಸಲು ಒಪ್ಪಲಿಲ್ಲ ಮತ್ತು ಅವರ ಜೊತೆಯಲ್ಲಿಯೇ ಸೇರಿಕೊಂಡು ಫೆಬ್ರವರಿ ವಿಪ್ಲವಕ್ಕೆ ದಾರಿ ಮಾಡಿಕೊಟ್ಟಿತು. ಯಾವಾಗ ಬೋಲ್ಷೆವಿಕರು ಬೀದಿಗಳಲ್ಲಿ ನಿಂತು ಹೋರಾಟದಲ್ಲಿ ತೊಡಗಿದ್ದರೋ, ಅದೇ ಸಮಯದಲ್ಲಿ ಮೆನ್ಷೆವಿಕರು ಸೋವಿಯತ್‌ಗಳ ಒಳನುಸುಳಿ ತಮ್ಮ ಬಹುಮತವನ್ನು ಒಟ್ಟುಗೂಡಿಸಿಕೊಳ್ಳಲು ಆರಂಭಿಸಿದ್ದರು. ಆಗ ಬೋಲ್ಷೆವಿಕರು ಅಪಾರ ಸಂಖ್ಯೆಯಲ್ಲಿ ಜೈಲುಗಳನ್ನು ತುಂಬಿದ್ದರು. ಲೆನಿನ್ ಆಗ ದೇಶಭ್ರಷ್ಟರಾಗಿ ವಿದೇಶದಲ್ಲಿದ್ದರೆ, ಸ್ಟಾಲಿನ್ ಸೈಬೀರಿಯಾದಲ್ಲಿ ಗಡಿಪಾರು ಶಿಕ್ಷೆಯನ್ನು ಅನುಭವಿಸುತ್ತಿದ್ದರು. ಇಂತಹ ಸಂದರ್ಭದಲ್ಲಿ ಒದಗಿದ ಅವಕಾಶವನ್ನು ಕಬಳಿಸಿಕೊಂಡು ಮೆನ್ಷೆವಿಕರು ಬಂಡವಾಳಿಗರ ಜೊತೆಯಲ್ಲಿ ಒಂದು ರಹಸ್ಯ ಒಪ್ಪಂದವನ್ನು ಮಾಡಿಕೊಂಡು ಲವ್ರೋವ್ ಎಂಬ ಒಬ್ಬ ರಾಜಕುಮಾರನ ಬಂಡವಾಳಶಾಹಿ ಸರ್ಕಾರವನ್ನು ಸ್ಥಾಪಿಸಿದರು. ಮೆನ್ಷೆವಿಕರು ಮತ್ತು ಸೋಷಲಿಸ್ಟ್ ಕ್ರಾಂತಿಕಾರಿಗಳಿಬ್ಬರೂ ಆ ಸರ್ಕಾರವನ್ನು ಸೇರಿದರು. ರಾಜ್ಯಾಧಿಕಾರವು ಜ್ಞಾರ್ ದೊರೆಯ ರಾಜಪ್ರಭುತ್ವದಿಂದ ರಷ್ಯನ್ ಬಂಡವಾಳಶಾಹಿಗೆ ಹಸ್ತಾಂತರವಾಗಿತ್ತು. ಹೀಗೆ, ಲೆನಿನ್ ವಿವರಿಸಿದಂತೆ ಹೊಸದಾಗಿ ಬಂಡವಾಳಶಾಹಿ ರಾಜ್ಯ ಶಕ್ತಿಯು ರಷ್ಯಾದಲ್ಲಿ ಉದಯಿಸಿತು.

(ಮುಂದುವರೆಯುವುದು...)

## ಮಹಾನ್ ಸ್ಟಾಲಿನ್ ಲಾಲ್ ಸಲಾಮ್!

**ಸಂಸ್ಮರಣ ದಿನ: 05.03.1953**

**"ಒಂದು ಸರಿಯಾದ ರಾಜಕೀಯ ನಿಲುವು ಖಂಡಿತವಾಗಿಯೂ ಪ್ರಾಥಮಿಕವಾದದ್ದು, ಅತ್ಯಂತ ಪ್ರಮುಖವಾದದ್ದು. ಆದರೆ, ಅಷ್ಟು ಮಾತ್ರವೇ ಸಾಕಾಗುವುದಿಲ್ಲ. ಒಂದು ಸರಿಯಾದ ರಾಜಕೀಯ ನಿಲುವಿನ ಅವಶ್ಯಕತೆಯು ಕೇವಲ ಒಂದು ಘೋಷಣೆಯಂತೆ ಇರದೆ ಪರಿಣಾಮವನ್ನು ನೀಡುವ ಆಚರಣೆಗೆ ತರುವಂತೆ ಇರಬೇಕಾಗುತ್ತದೆ.**



**ಆದರೆ, ಒಂದು ಸರಿಯಾದ ರಾಜಕೀಯ ನಿಲುವನ್ನು ಅನುಷ್ಠಾನಕ್ಕೆ ತರಬೇಕಾದರೆ, ಪಕ್ಷದ ರಾಜಕೀಯ ನಿಲುವನ್ನು ತಿಳಿದುಕೊಂಡಿರುವ, ಉತ್ತರಿಸಲು, ಅದನ್ನು ಸಮರ್ಥಿಸಿಕೊಳ್ಳಲು ಹಾಗೂ ಅದಕ್ಕಾಗಿ ಹೋರಾಡಲು ಸಿದ್ಧರಾಗಿರುವ ಅನುಯಾಯಿಗಳು ಅತ್ಯಗತ್ಯ. ಇದು ಸಾಧ್ಯವಾಗದಿದ್ದಲ್ಲಿ, ಒಂದು ಸರಿಯಾದ ಅದನ್ನು ತಮ್ಮದೇ ನಿಲುವಾಗಿ ಒಪ್ಪಿಕೊಂಡಿರುವ, ಅದನ್ನು ಅನುಷ್ಠಾನಕ್ಕೆ ತರಲು ಸಿದ್ಧರಿರುವ, ಅದನ್ನು ಅನುಷ್ಠಾನದಲ್ಲಿ ತರಲು ಸಾಧ್ಯವಿರುವ ಮತ್ತು ಅದರ ಬಗ್ಗೆ ರಾಜಕೀಯ ನಿಲುವು ಕೇವಲ ಹೆಸರಿಗೆ ಮಾತ್ರ ಉಳಿಯುವ ಅಪಾಯಕ್ಕೆ ಸಿಲುಕುತ್ತದೆ."** (ಮೂಲ: ಸಿಪಿಎಸ್‌ಯು(ಬಿ)–ಕಮ್ಯುನಿಸ್ಟ್ ಪಾರ್ಟಿ ಆಫ್ ಸೋವಿಯತ್ ಯೂನಿಯನ್(ಬೊಲ್ಶೆವಿಕ್)ನ 18ನೇ ಮಹಾಧಿವೇಶನದ ವರದಿಯಲ್ಲಿ)

ಆರ್‌ಸಿಹೆಚ್ ಪೋರ್ಟಲ್ ಜೋಡಣೆ ಕೈ ಬಿಟ್ಟು, ಮಾಸಿಕ ರೂ.15,000 ಗೌರವಧನ ನಿಗದಿ ಮಾಡಿ!

# ಆಶಾ ಕಾರ್ಯಕರ್ತೆಯರ ರಾಜ್ಯ ಮಟ್ಟದ ಅಹೋರಾತ್ರಿ ಹೋರಾಟ



ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಸಂಖ್ಯೆಯಲ್ಲಿ ನೆರೆದಿದ್ದ ಆಶಾ ಕಾರ್ಯಕರ್ತೆಯರು

ಎಐಯುಟಿಯುಸಿ ಸಂಯೋಜಿತ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘವು 2024ರ ಫೆಬ್ರುವರಿ 13, 14ರಂದು ಎರಡು ದಿನಗಳ ರಾಜ್ಯಮಟ್ಟದ ಆಹೋರಾತ್ರಿ ಬೃಹತ್ ಪ್ರತಿಭಟನೆಯನ್ನು ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಹಮ್ಮಿಕೊಂಡಿತ್ತು. ರಾಜ್ಯದ ಮೂಲೆಮೂಲೆಗಳಿಂದ 20,000ಕ್ಕೂ ಅಧಿಕ ಆಶಾ ಕಾರ್ಯಕರ್ತೆಯರು ಈ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಆಶಾಗಳನ್ನು ವಂಚಿಸುತ್ತಿರುವ ಆರ್‌ಸಿಎಚ್ ಪೋರ್ಟಲ್‌ನ್ನು ವೇತನ ಪಾವತಿ ಪ್ರಕ್ರಿಯೆಯಿಂದ ಡೀಲಿಂಕ್ ಮಾಡಬೇಕು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಮಾಸಿಕ ಕನಿಷ್ಠ ರೂ.15,000 ನಿಗದಿ ಮಾಡಬೇಕು, ಪ್ರೋತ್ಸಾಹ ಧನವಿಲ್ಲದ ಹೆಚ್ಚುವರಿ ಕೆಲಸಗಳನ್ನು ಹಾಗೂ ಮೊಬೈಲ್ ಆಧಾರಿತ ಕೆಲಸಗಳನ್ನು ಒತ್ತಾಯಪೂರ್ವಕವಾಗಿ ನೀಡಬಾರದು, ಆಶಾ ಕಾರ್ಯಕರ್ತೆರ್ಯರನ್ನು ಕಾರ್ಮಿಕರೆಂದು ಪರಿಗಣಿಸಿ ಕನಿಷ್ಠ ವೇತನ, ಪಿ.ಎಫ್, ಇಎಸ್‌ಐ, ಗ್ರಾಚ್ಯುಟಿ ಮುಂತಾದ ಸೌಲಭ್ಯಗಳನ್ನು ನೀಡಬೇಕು, ಅನಾರೋಗ್ಯ ಪೀಡಿತ ಆಶಾಗಳಿಗೆ 3 ತಿಂಗಳು ಪ್ರೋತ್ಸಾಹ ಧನ ಸಹಿತ ರಜೆ, ನಗರ ಆಶಾಗಳಿಗೆ ರೂ.2000 ಹೆಚ್ಚಿಸಬೇಕು, ಆಶಾ ಫೆಸಿಲಿಟೇಟರ್‌ಗಳಿಗೆ ಹುದ್ದೆಗೆ ತಕ್ಕ ಮಾಸಿಕ ವೇತನ, ಪ್ರಯಾಣ ಭತ್ಯೆ ಇತ್ಯಾದಿಗಳನ್ನು ಹೆಚ್ಚಿಸಬೇಕು ಮುಂತಾದ ಬೇಡಿಕೆಗಳಿಗಾಗಿ ಆಗ್ರಹಿಸಿ ಈ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.



ಕಾ. ಕೆ. ರಾಧಾಕೃಷ್ಣ , ಎಐಯುಟಿಯುಸಿ ರಾಷ್ಟ್ರಾಧ್ಯಕ್ಷರು

ಈ ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಎಐಯುಟಿಯುಸಿ ರಾಷ್ಟ್ರಾಧ್ಯಕ್ಷರಾದ ಕಾಮ್ರೇಡ್ ಕೆ.ರಾಧಾಕೃಷ್ಣ, "ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಾರ್ಮಿಕ ವಿರೋಧಿ ನೀತಿಗಳೇ ಅಪಾರ ಸಂಖ್ಯೆಯ ಸ್ಕೀಮ್ ಕಾರ್ಯಕರ್ತೆಯರ ಸಮಸ್ಯೆಗಳಿಗೆ ಕಾರಣ. ಬುಡಮಟ್ಟದಿಂದ ಸಂಘಟಿತರಾಗಿ ಇತರ ದುಡಿಯುವ ಜನರ ಜೊತೆ ಸೇರಿ ನೀವು ಬಲಿಷ್ಠ ಚಳುವಳಿ ಬೆಳೆಸಬೇಕು" ಎಂದರು. ಬರಹಗಾರ್ತಿ ಶ್ರೀಮತಿ ರೂಪ ಹಾಸನ, "ಬಡವರಿಗೆ ಸಾಕಷ್ಟು ಗ್ಯಾರೆಂಟಿಗಳನ್ನು ಕೊಡುತ್ತಿರುವ ಸರ್ಕಾರ ಬಡಪಾಯಿ ಮಹಿಳಾ ಕಾರ್ಮಿಕರ ಸಂಕಷ್ಟಗಳನ್ನು ಪರಿಹರಿಸದಿರುವುದು ವಿಷಾದಕರ" ಎಂದರು.



ಕಾ. ಕೆ. ಉಮಾ, ರಾಜ್ಯ ಕಾರ್ಯದರ್ಶಿಗಳು, ಎಸ್‌ಯುಸಿಐ(ಸಿ)

ಎಸ್‌ಯುಸಿಐ(ಸಿ) ರಾಜ್ಯ ಕಾರ್ಯದರ್ಶಿಗಳಾದ ಕಾಮ್ರೇಡ್ ಕೆ.ಉಮಾ ಮಾತನಾಡುತ್ತ "ನೀವು ಅಬಲೆಯರಲ್ಲ, ದೇಶಕ್ಕೆ ಮಾದರಿಯಾಗುವ ಹೋರಾಟಗಳನ್ನು ಬೆಳೆಸುತ್ತಿರುವ ದಿಟ್ಟ ಹೋರಾಟಗಾರ್ತಿಯರು ನೀವು. ಇಡೀ ಶೋಷಿತ ಜನರ ಹೋರಾಟಕ್ಕೆ ಸ್ಫೂರ್ತಿ ನೀವು" ಎಂದರು. ಡಾ.ಸುಧಾ ಕಾಮತ್, ರಾಷ್ಟ್ರೀಯ ಉಪಾಧ್ಯಕ್ಷರು, ಮೆಡಿಕಲ್ ಸರ್ವಿಸ್ ಸೆಂಟರ್, ಸಾಹಿತಿಗಳು, ರೈತ ಪರ ಹೋರಾಟಗಾರರಾದ ಉಗ್ರನರಸಿಂಹೇಗೌಡ, ಹಂಪಿ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ಟಿ.ಆರ್. ಚಂದ್ರಶೇಖರ್ ಸಭೆಯಲ್ಲಿ ಭಾಗವಹಿಸಿದ್ದರು.

ಆರೋಗ್ಯ ಸಚಿವರು ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಕೆಲವು ಭರವಸೆಗಳು ನೀಡಿದ್ದರೂ, ಪ್ರಮುಖ ಬೇಡಿಕೆಗಳು ಈಡೇರಿರಲಿಲ್ಲ. ಹಾಗಾಗಿ ಎರಡನೇ ದಿನ ಹೋರಾಟವು ಮುಂದುವರೆಯಿತು. ಹೋರಾಟದ ಒತ್ತಡದ ಫಲವಾಗಿ ಮಾನ್ಯ ಮುಖ್ಯಮಂತ್ರಿಗಳು, ಆಶಾ ಸಂಘದ ರಾಜ್ಯ ಅಧ್ಯಕ್ಷರು, ರಾಜ್ಯ ಕಾಯದರ್ಶಿಗಳು ಹಾಗೂ ರಾಜ್ಯ ಮುಖಂಡರ ನಿಯೋಗವನ್ನು ಕರೆದು ಚರ್ಚಿಸಿದರು. ಮುಖ್ಯಮಂತ್ರಿಗಳು ಬಜೆಟ್ ಅಧಿವೇಶನದ ನಂತರ ತಮ್ಮ ಅಧ್ಯಕ್ಷತೆಯಲ್ಲಿ, ಆರೋಗ್ಯ ಸಚಿವರು, ಸಂಬಂಧಪಟ್ಟ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ಸಂಘದ ಪದಾಧಿಕಾರಿಗಳ ಜೊತೆಗೆ ಸಭೆ ಕರೆದು ಚರ್ಚಿಸುವುದಾಗಿ ಭರವಸೆ ನೀಡಿದ ನಂತರ ಪ್ರತಿಭಟನೆಯನ್ನು ತಾತ್ಕಾಲಿಕವಾಗಿ ಅಂತ್ಯಗೊಳಿಸಲಾಯಿತು. ಸರ್ಕಾರ ತೆಗೆದುಕೊಳ್ಳುವ ತೀರ್ಮಾನಗಳನ್ನು ಆಧರಿಸಿ ಮುಂದಿನ ನಡೆಯನ್ನು ಸಂಘವು ನಿರ್ಧರಿಸಲಿದೆ.

ಈ ಪ್ರತಿಭಟನೆಯ ನೇತೃತ್ವವನ್ನು ಸಂಘದ ರಾಜ್ಯ ಅಧ್ಯಕ್ಷರಾದ ಕಾ. ಕೆ ಸೋಮಶೇಖರ್ ಯಾದಗಿರಿ, ರಾಜ್ಯ ಕಾರ್ಯದರ್ಶಿ ಕಾ. ಡಿ.ನಾಗಲಕ್ಷ್ಮಿ, ಇತರ ಪದಾಧಿಕಾರಿಗಳಾದ ಕಾ. ಉಮಾದೇವಿ, ಕಾ. ಟಿ.ಸಿ.ರಮಾ, ಕಾ. ಶಾಂತಾ ಮತ್ತಿತರರು ವಹಿಸಿದ್ದರು. ■

## ಬಿಲ್ಕಿಸ್ ಬಾನು ಪ್ರಕರಣ...

ಪುಟ 3ರಿಂದ

ಮಹಾರಾಷ್ಟ್ರಕ್ಕೆ ವರ್ಗಾಯಿಸಿತ್ತು. ಈ ಎಲ್ಲಾ ಪ್ರಯತ್ನಗಳ ಪ್ರತಿಫಲವಾಗಿ ಕೊನೆಗೂ ಅಪರಾಧ ಸಾಬೀತಾಗಿ 2008 ರಲ್ಲಿ 11 ಜನ ರಕ್ತಪಿಪಾಸು ಅಪರಾಧಿಗಳಿಗೆ ಜೀವಾವಧಿ ಶಿಕ್ಷೆಯಾಯಿತು. ಇದರ ಬಗ್ಗೆ ಮೋದಿಯವರು ಒಂದು ಬಿರುಸಿನ ಭಾಷಣದಲ್ಲಿ "ಪ್ರಕರಣವನ್ನು ಗುಜರಾತಿನ ಹೊರಗೆ ವರ್ಗಾಯಿಸಿರುವುದು ರಾಜ್ಯಕ್ಕೆ ಮತ್ತು ಅದರ ನ್ಯಾಯಾಂಗಕ್ಕೆ ಅವಮಾನವಾದಂತಾಗುತ್ತದೆ" ಎಂದು ಹೇಳಿದ್ದನ್ನು 2010 ರಲ್ಲಿ 'ಟೈಮ್ಸ್ ಆಫ್ ಇಂಡಿಯಾ' ವರದಿ ಮಾಡಿತ್ತು.

### ಅಪರಾಧಿಗಳನ್ನು ರಕ್ಷಿಸಲು ಕಾನೂನಿನ ದುರ್ಬಳಕೆ

ಅಪರಾಧಿಗಳಲ್ಲಿ ಒಬ್ಬನಾದ ರಾಧೇಶ್ಯಾಮ್ ಭಗವಾನದಾಸ್ ಶಾ ತಾನು ಅಪರಾಧ ಮಾಡಿದ ಸಂದರ್ಭದಲ್ಲಿ ಜಾರಿಯಲ್ಲಿದ್ದ "1992ರ ಕ್ಷಮಾಪಣಾ ನೀತಿ"ಯಡಿ ತನ್ನನ್ನು ಬಿಡುಗಡೆ ಮಾಡುವಂತೆ ಗುಜರಾತ್ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ಕೋರಿ ಸುಪ್ರೀಂ ಕೋರ್ಟಿಗೆ ಕುತ್ಸಿತ ಮನವಿಯನ್ನು ಸಲ್ಲಿಸಿದ್ದ. ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ ಮತ್ತು ವಿಕ್ರಂನಾಥ್ ಅವರ ದ್ವಿಸದಸ್ಯ ಪೀಠವು 1992ರಲ್ಲಿ ಅಸ್ತಿತ್ವದಲ್ಲಿದ್ದ ನೀತಿಯನ್ವಯ ಆತನನ್ನು ಬಿಡುಗಡೆ ಮಾಡಿ ಎಂದು 2022ರ ಮೇ 3ರಂದು ನಿರ್ದೇಶನ ನೀಡಿತು. ಈ ಅವಧಿಪೂರ್ವ ಬಿಡುಗಡೆಯನ್ನು ಪ್ರಶ್ನಿಸಿ ಬಿಲ್ಕಿಸ್ ಬಾನು, "ಎಲ್ಲಾ ಅಪರಾಧಿಗಳ ಅವಧಿಪೂರ್ವ ಬಿಡುಗಡೆಯು ಸಮಾಜದ ಆತ್ಮಸಾಕ್ಷಿಯನ್ನು ಕಲಕಿದೆ. ಈ ದೇಶ ಕಂಡ ಅತ್ಯಂತ ಘೋರ ಅಪರಾಧಗಳಲ್ಲಿ ಇದು ಒಂದಾಗಿರುವುದರಿಂದ, ಎಲ್ಲರಿಗೂ ಕ್ಷಮೆಯನ್ನು ವಿಸ್ತರಿಸುವ ಮುನ್ನ ಪ್ರತಿಯೊಬ್ಬ ಅಪರಾಧಿಯ ಪ್ರಕರಣವನ್ನು ಪ್ರತ್ಯೇಕವಾಗಿ ಪರಿಶೀಲಿಸಬೇಕು. ಜೊತೆಗೆ ಬಿಡುಗಡೆಯ ಬಗ್ಗೆ ಮಾತನಾಡಿದ ಬಿಲ್ಕಿಸ್, "ಈ ಬಿಡುಗಡೆಯಿಂದ ಬಹಳ ಹಿಂದೆ ನಡೆದಿದ್ದ ಘೋರ ಘಟನೆಯ ನೆನಪು ಮತ್ತೆ ಮರುಕಳಿಸುವಂತಾಗಿದೆ" ಎಂದು ಸುಪ್ರೀಂ ಕೋರ್ಟಿಗೆ ಮರುಪರಿಶೀಲನಾ ಅರ್ಜಿಯನ್ನು ಸಲ್ಲಿಸಿದರು. ಆದರೆ ಸುಪ್ರೀಂಕೋರ್ಟ್ ಆ ಅರ್ಜಿಯನ್ನು ವಜಾಗೊಳಿಸಿತು. ಕೇಂದ್ರ ಗೃಹ ಸಚಿವಾಲಯವು ಕೂಡ ಅಪರಾಧಿಗಳ ಬಿಡುಗಡೆಗೆ 2022 ಜುಲೈ 11ರಂದು ಒಪ್ಪಿಗೆ ಸೂಚಿಸಿತು.

### ಅಧಿಕಾರದ ದುರುಪಯೋಗ

ಅಪರಾಧಿಗಳ ಅವಧಿಪೂರ್ವ ಬಿಡುಗಡೆಗೆ ವ್ಯಾಪಕ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಸುಪ್ರೀಂಕೋರ್ಟ್ ಈ ಪ್ರಕರಣವನ್ನು ಮರುಪರಿಶೀಲನೆಗೆ ತೆಗೆದುಕೊಂಡಿತು. ಪ್ರಕರಣವು ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಮತ್ತು ಉಜ್ಜಲ್ ಭುಯಾನ್ ಅವರ ಪೀಠದ ಮುಂದೆ ಮಂಡನೆ ಆಯಿತು. ಅಸ್ತಿತ್ವದಲ್ಲಿರುವ ಕಾನೂನುಗಳು ಮತ್ತು ಕಾನೂನಿನ ಕಾರ್ಯವಿಧಾನಗಳನ್ನು ರಾಜಕೀಯ ಇಚ್ಛಾಶಕ್ತಿಯೊಂದಿಗೆ ರಾಜಿ ಮಾಡಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಇದು ಕಾನೂನಿನ ನಿಯಮದ ಮೂಲಭೂತ ತತ್ವಗಳಿಗೆ ಧಕ್ಕೆಯನ್ನು ತರುತ್ತದೆ ಮತ್ತು ಅಪಾಯಕಾರಿ ಪೂರ್ವ ನಿದರ್ಶನವನ್ನು ತಯಾರು ಮಾಡುತ್ತದೆ ಎಂದು ಆ ಪೀಠವು ಸ್ಪಷ್ಟವಾಗಿ ಹೇಳಿತು. ಅಪರಾಧಿಗಳ ಬಿಡುಗಡೆಗೆ ಗುಜರಾತ್ ಸರ್ಕಾರವು ತನ್ನ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿದೆ ಎಂದೂ, ಮಹಿಳೆಯರ ಮೇಲಿನ ಅಪರಾಧಗಳಿಗೆ ನಿರ್ದಿಷ್ಟ ಒತ್ತು ನೀಡುವ ಮೂಲಕ ಅದರಲ್ಲೂ ವಿಶೇಷವಾಗಿ ಅತ್ಯಂತ ಘೋರ ಅಪರಾಧಗಳಿಗೆ ಸಿಕ್ಕಿ ನಲುಗುವ ಬಲಿಪಶುಗಳಿಗೆ ನ್ಯಾಯ ದೊರಕಿಸಿಕೊಡುವ ಅಗತ್ಯತೆಯನ್ನು ಪೀಠವು ಒತ್ತಿ ಹೇಳಿತು. ಗುಜರಾತ್ ಸರ್ಕಾರದ ನಡೆಯನ್ನು 'ವಂಚನೆಯ ಕೃತ್ಯ' ಎಂದು ಕರೆಯುವಷ್ಟರ ಮಟ್ಟಿಗೆ ಪೀಠವು ಹೋಗಬೇಕಾಯಿತು. ಶರಣಾಗತಿಗೆ ಕಾಲಾವಧಿಯನ್ನು ವಿಸ್ತರಿಸಬೇಕು ಎಂಬ ಅಪರಾಧಿಗಳ ಮನವಿಯನ್ನು ಪೀಠವು ಸಾರಾಸಗಟಾಗಿ ತಿರಸ್ಕರಿಸಿತು. ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಗೃಹ ಸಚಿವ ಅಮಿತ್ ಶಾ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು, ಬಿಜೆಪಿ ಮಹಿಳಾ ಘಟಕ, ಹಿರಿಯ ಮಹಿಳಾ ಸಚಿವರೆಲ್ಲರೂ ಮಹಿಳೆಯ ಘನತೆಯನ್ನೇ ಸಮಾಧಿ ಮಾಡಿದ ಇಂತಹ ಘೋರ ಅಪರಾಧದ ಬಗ್ಗೆ ದಿವ್ಯಮೌನ ತಾಳಿದ್ದಾರೆ. ಗುಜರಾತ್ ಮುಖ್ಯಮಂತ್ರಿ ಕೂಡ ತುಟಿ ಬಿಚ್ಚಲಿಲ್ಲ.

### ಮಹಿಳೆಯರ ಮೇಲೆ ಹೆಚ್ಚುತ್ತಿರುವ ಅಪರಾಧಗಳು

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯುರೋ(NCRB)ದ ವರದಿಯ ಪ್ರಕಾರ 2021ರಲ್ಲಿ ಶೇ.64.5ರಷ್ಟಿದ್ದ ಮಹಿಳೆಯರ ಮೇಲಿನ ಅಪರಾಧಗಳ ಪ್ರಮಾಣವು 2022ರಲ್ಲಿ ಶೇ. 66ಕ್ಕೆ ಹೆಚ್ಚಿದೆ. ಎನ್‌ಸಿಆರ್‌ಬಿಯ ಪ್ರಕಾರ ಉತ್ತರಪ್ರದೇಶದಲ್ಲಿ 65,743 ಪ್ರಕರಣಗಳು, ಅಂದರೆ 28 ರಾಜ್ಯಗಳಲ್ಲೇ ಅತ್ಯಧಿಕ ಪ್ರಕರಣಗಳು ವರದಿಯಾಗಿವೆ. ಕೇಂದ್ರ ಸರ್ಕಾರದ ದತ್ತಾಂಶದ ಪ್ರಕಾರ ಗುಜರಾತ್‌ನಲ್ಲೂ ಪ್ರಕರಣಗಳು ಹೆಚ್ಚುತ್ತಿವೆ. ಜೊತೆಗೆ ಕತುವಾ, ಉನ್ನಾವೋ, ಹತ್ರಾಸ್, ಬೇತುಲ್ ಮತ್ತು ಇತರ ಸ್ಥಳಗಳಲ್ಲಿ ಬಿಜೆಪಿ ನಾಯಕರು ಮತ್ತು ಶಾಸಕರು ಅತ್ಯಾಚಾರಗಳಲ್ಲಿ ಭಾಗಿಯಾಗಿದ್ದನ್ನು ಇನ್ನೂ ಯಾರೂ ಮರೆತಿಲ್ಲ.

### ಆಳುವವರಿಗೆ ತಲೆಬಾಗುವ ನ್ಯಾಯಾಂಗದ ರಚನೆಗೆ ಪ್ರಯತ್ನ

ಬಹಳ ಕಾಲದಿಂದಲೂ ಆಳುವ ನಿರಂಕುಶ ಬೂರ್ಜ್ವಾ ನಾಯಕರು ನ್ಯಾಯಾಂಗದ ಸಾಪೇಕ್ಷ ಸ್ವಾಯತ್ತತೆಯನ್ನು ಬುಡಮೇಲು ಮಾಡಿ ತಮಗೆ ತಲೆಬಾಗುವ ನ್ಯಾಯಾಂಗವನ್ನು ತರಲು ಯತ್ನಿಸುತ್ತಿದ್ದಾರೆ. 1970ರ ದಶಕದಲ್ಲಿ ಇಂದಿರಾ ಗಾಂಧಿಯವರು ಈ ಪ್ರಯತ್ನ ಮಾಡಿದರು. ಈಗ ಆಡಳಿತಾರೂಢ ಬಿಜೆಪಿ ನ್ಯಾಯಾಂಗವನ್ನು ತನ್ನ ಕಪಿಮುಷ್ಟಿಯಲ್ಲಿಟ್ಟುಕೊಂಡು ತೀರ್ಪುಗಳನ್ನು ತನ್ನ ಪರವಾಗಿರುವಂತೆ ನೋಡಿಕೊಳ್ಳಲು ಯತ್ನಿಸುತ್ತಿದೆ.

### ಬಿಲ್ಕಿಸ್ ಪ್ರಕರಣ ದೇಶದ ಸಾಮೂಹಿಕ ಆತ್ಮಪ್ರಜ್ಞೆಯನ್ನು ಕಲಕಲಿ!

ನ್ಯಾಯಾಂಗವು ತಾನು ಬಯಸಿದಲ್ಲಿ ರಾಜಕೀಯ ಪ್ರಭಾವ ಹಾಗೂ ಕಾರ್ಯಾಂಗದ ಹಿಡಿತವನ್ನು ಮೀರಿ ಜಯಿಸಬಹುದು ಮತ್ತು ವಿಶೇಷವಾಗಿ ಸಮಾಜದ ಅತ್ಯಂತ ದುರ್ಬಲರಿಗೆ ನ್ಯಾಯ ನೀಡಬಹುದು ಎಂಬುದಕ್ಕೆ ಈ ಪ್ರಕರಣವು ಸಾಕ್ಷಿಯಾಗಿದೆ. ಈ ಪ್ರಕರಣದ ಪ್ರತಿಧ್ವನಿಗಳು ಕೇವಲ ನ್ಯಾಯಾಲಯದ ಕೊಠಡಿಗಳಲ್ಲಿ ಮಾತ್ರವಲ್ಲದೆ ದೇಶದ ಸಾಮೂಹಿಕ ಆತ್ಮಪ್ರಜ್ಞೆಯಲ್ಲೂ ಪ್ರತಿಧ್ವನಿಸಬೇಕು. ಪ್ರಖ್ಯಾತ ನ್ಯಾಯಶಾಸ್ತ್ರಜ್ಞರು ಸೇರಿದಂತೆ ಪ್ರಜ್ಞಾವಂತ ಪ್ರಜಾತಂತ್ರ ಮನಸುಳ್ಳ ಜನರು ನ್ಯಾಯದ ಅಪಹಾಸ್ಯ, ನ್ಯಾಯಾಂಗ ಪ್ರಕ್ರಿಯೆಯನ್ನು ದುರ್ಬಲಗೊಳಿಸುವ ಎಲ್ಲಾ ಹುನ್ನಾರಗಳ ವಿರುದ್ಧ ಧ್ವನಿ ಎತ್ತಬೇಕು ಮತ್ತು ನ್ಯಾಯಾಂಗದ ಸ್ವಾಯತ್ತತೆಯನ್ನು ಹಾಳು ಮಾಡುವ ಯಾವುದೇ ಪ್ರಯತ್ನಗಳನ್ನು ವಿಫಲಗೊಳಿಸಬೇಕು. ■

### ಬಣ್ಣಾರಿ ಅಮ್ಮನ್ ಕಾರ್ಖಾನೆಯ ಭೂಸಂತ್ರಸ್ತರಿಗೆ ಉದ್ಯೋಗದ ಹಕ್ಕು ನಿರಾಕರಣೆ

# ಯಶಸ್ಸು ಸಾಧಿಸಿದ ಹೋರಾಟ

ಕೈಗಾರಿಕಾಭಿವೃದ್ಧಿಗಾಗಿ ರೈತರ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಉದ್ಯೋಗ ನೀಡಬೇಕಿದ್ದ ಕೈಗಾರಿಕೆಗಳು ರೈತರಿಗೆ ಉದ್ಯೋಗ ನೀಡದೆ ಅವರ ಜೀವನದ ಜೊತೆ ಚೆಲ್ಲಾಟವಾಡುತ್ತಿವೆ. ಜೀವನಾಧಾರವಾದ ಜಮೀನನ್ನು ಕಸಿದುಕೊಂಡ ಮೇಲೆ, ಅದರಿಂದ ಲಾಭಗಳಿಸುವ ಕಾರ್ಖಾನೆಯು ಭೂಮಿ ಕಳೆದುಕೊಂಡ ರೈತರಿಗೆ ಉದ್ಯೋಗ ಕೊಡಬೇಕಾದ್ದು ಕನಿಷ್ಠ ಮಾನವೀಯತೆ ಮತ್ತು ಜನತಾಂತ್ರಿಕ ಧರ್ಮ. ಅಲ್ಲದೆ ಕಾನೂನಿನ ಪ್ರಕಾರವೂ ಉದ್ಯೋಗ ನೀಡಬೇಕು. ಆದರೆ ಬಂಡವಾಳಿಗರು ಮನುಷ್ಯತ್ವ, ಕಾನೂನು ಎಲ್ಲವನ್ನೂ ಗಾಳಿಗೆ ತೂರಿ ಉದ್ಯೋಗವನ್ನು ನಿರಾಕರಿಸುತ್ತಲೇ ಬಂದಿದ್ದಾರೆ.

ನಂಜನಗೂಡಿನ ಬಳಿ ಕೈಗಾರಿಕಾಭಿವೃದ್ಧಿಗೆ ಎಂದು ಭೂಮಿ ಕಸಿದುಕೊಂಡು ದಶಕಗಳಾದರೂ ಭೂಮಿ ಕಳೆದುಕೊಂಡ ರೈತರಿಗೆ ಉದ್ಯೋಗ ಕೊಟ್ಟಿಲ್ಲ. ಕೈಗಾರಿಕಾಭಿವೃದ್ಧಿಯಿಂದ ಬಂಡವಾಳಿಗರು ಅಭಿವೃದ್ಧಿಯಾದರೂ, ಜಮೀನು ಕೊಟ್ಟ ರೈತರು ಕುಟುಂಬದೊಂದಿಗೆ ಬೀದಿ ಪಾಲಾಗಿದ್ದಾರೆ. ಇತ್ತೀಚಿಗೆ ಭೂಸಂತ್ರಸ್ತ ಯುವಕನೊಬ್ಬ ಉದ್ಯೋಗಕ್ಕಾಗಿ ಅಲೆದಾಡಿ, ಸಂಸಾರ ಸಾಗಿಸಲು ಸಾಧ್ಯವಾಗದೆ ನೇಣಿಗೆ ಶರಣು ಹೋದ.

ಮೊದಲು ಎಐಕೆಕೆಎಂಎಸ್ ನೇತೃತ್ವದಲ್ಲಿ ಭೂಸಂತ್ರಸ್ತರಿಗೆ ಉದ್ಯೋಗ ಕೊಡಬೇಕೆಂದು ಹೋರಾಟ ಆರಂಭವಾಯಿತು. ಆರಂಭದಲ್ಲಿ ಯಾವ ಕೈಗಾರಿಕೆಯವರೂ ಉದ್ಯೋಗ ಕೊಡಲು ತಯಾರಿರಲಿಲ್ಲ. ಆದರೆ ಹೋರಾಟಕ್ಕೆ ಮಣಿದ ಒಂದೆರೆಡು ಕಾರ್ಖಾನೆಗಳು ಕೆಲವರಿಗೆ ಉದ್ಯೋಗ ನೀಡಿ, ಮುಂದೆ ಬೇರೆಯವರಿಗೆ ನೀಡುತ್ತೇವೆಂದು ಭರವಸೆ ನೀಡಿದರು. ಅದರಂತೆ ಕೆಲವರಿಗೆ ಉದ್ಯೋಗ ಪತ್ರ ಕೂಡ ದೊರಕಿತು.

ಈ ಗೆಲುವಿನಿಂದ ಉತ್ತೇಜಿತರಾದ ರೈತರು ಹೋರಾಟವನ್ನು ಮುಂದುವರೆಸಿದರು. ಆದರೆ ಬಣ್ಣಾರಿ ಅಮ್ಮನ್ ಕಾರ್ಖಾನೆ ಮಾತ್ರ ಯಾವುದಕ್ಕೂ ಬಗ್ಗಲಿಲ್ಲ. ಕೆಐಎಡಿಬಿ (ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ) ಅಧಿಕಾರಿಗಳು, ತಹಸೀಲ್ದಾರರು, ಜಿಲ್ಲಾಧಿಕಾರಿಗಳು ಆದೇಶ ಮಾಡಿದರೂ ಸಹ ಬಣ್ಣಾರಿ ಅಮ್ಮನ್ ಕಾರ್ಖಾನೆಯ ಆಡಳಿತ ಮಂಡಳಿಯು ಬೆಲೆ ಕೊಡಲಿಲ್ಲ.

ಹೀಗಾಗಿ ರೈತರು, ಗ್ರಾಮಸ್ಥರು ಕಾರ್ಖಾನೆಯ ಗೇಟಿನ ಮುಂದೆಯೇ ಅಹೋರಾತ್ರಿ ಅನಿರ್ದಾಷ್ಟಾವಧಿ ಧರಣಿ ನಡೆಸಿದರು. ಕರ್ನಾಟಕ ರಾಜ್ಯ ರೈತ ಸಂಘವೂ ಜೊತೆ ಸೇರಿತು. ಎಐಯುಟಿಯುಸಿ ಕಾರ್ಮಿಕ ಸಂಘಟನೆಯೂ ಜೊತೆಯಾಯಿತು. ಪ್ರಗತಿಪರರೂ ಧ್ವನಿ ಸೇರಿಸಿದರು. ಆಗ ಮಾಲೀಕರು ಕಾರ್ಖಾನೆ ಬಂದ್ ಮಾಡಿ ಬೆದರಿಸಲು ಯತ್ನಿಸಿದರು. ಕಾರ್ಖಾನೆಯ ಕಾರ್ಮಿಕರನ್ನು, ಕಬ್ಬು ಸರಬರಾಜು ಮಾಡುವ ರೈತರನ್ನು ಹೋರಾಟಗಾರರ ವಿರುದ್ಧ ಎತ್ತಿಕಟ್ಟಲು ಪ್ರಯತ್ನ ನಡೆಸಿದರು. ಆದರೆ ಕಾರ್ಮಿಕರು ಮತ್ತು ರೈತರು ತಮಗಾಗುವ ಕಷ್ಟವನ್ನು ಲೆಕ್ಕಿಸದೆ ಭೂಮಿ ಕಳೆದುಕೊಂಡ ರೈತರಿಗೆ ಬೆಂಬಲವಾಗಿ ನಿಂತರು. ಕಡೆಗೂ ಜೀವ ವಿರೋಧಿ ಆಡಳಿತ ಮಂಡಳಿಯು ಹೋರಾಟಕ್ಕೆ ಮಣಿದು, ತಲೆಬಾಗಿ ಉದ್ಯೋಗ ಕೊಡಲು ಒಪ್ಪಿಕೊಂಡಿತು. ಇದೊಂದು ಐತಿಹಾಸಿಕ ಗೆಲವು. ಎಲ್ಲಾ ಸಂತ್ರಸ್ತರಿಗೂ ಉದ್ಯೋಗ ಕೊಡುವವರೆಗೂ ಬಿಡುವುದಿಲ್ಲವೆಂದು ಕಾರ್ಖಾನೆಯ ಪಕ್ಕದಲ್ಲೇ ಧರಣಿಯನ್ನು ಮುಂದುವರೆಸಲಾಗುತ್ತಿದೆ. ■

**"ಎಲ್ಲಾ ಮಹಿಳೆಯರು, ಅವರ ಸ್ಥಾನಮಾನ ಏನೇ ಇರಲಿ, ಒಂದು ಸ್ವತಂತ್ರ ಜೀವನಕ್ಕಾಗಿ ಹಾಗೂ ಸಮಾಜಕ್ಕೆ ಸಮೃದ್ಧಿಯ ಕೊಡುಗೆ ನೀಡುವ ಉದ್ದೇಶದಿಂದ ರಾಜಕೀಯ ಸಮಾನತೆಗೆ ಆಗ್ರಹಿಸಬೇಕಾಗುತ್ತದೆ."**

**– ಅಂತರರಾಷ್ಟ್ರೀಯ ಮಹಿಳಾ ದಿನದ ರೂವಾರಿ**

**ಕ್ಲಾರಾ ಜೆಟ್ಕಿನ್**



## ರಾಜ್ಯಮಟ್ಟದ ಪ್ರತಿಭಟನೆ...

ಪುಟ 1ರಿಂದ

ಶೋಷಣೆಗೆ ಗುರಿ ಮಾಡಲಾಗುತ್ತಿದೆ. ಆದ್ದರಿಂದ ದೇಶದಲ್ಲಿ ಶ್ರೀಮಂತರು ಶ್ರೀಮಂತರಾಗುತ್ತಿದ್ದಾರೆ. ಬಡವರು ಇನ್ನಷ್ಟು ಬಡತನಕ್ಕೆ, ನಿರ್ಗತಿಕತನಕ್ಕೆ ತಳ್ಳಲ್ಪಡುತ್ತಿದ್ದಾರೆ. ಇದು ದೇಶದ ಆರ್ಥಿಕ ಪರಿಸ್ಥಿತಿ. ಒಂದು ಕಾಲದಲ್ಲಿ ಪ್ರಗತಿಪರ, ಜನಪರವಾಗಿದ್ದ ಪ್ರಜಾತಂತ್ರವು ಇಂದು ಅತ್ಯಂತ ಶೋಷಕವಾಗಿದೆ. ಈ ಶೋಷಕ ವ್ಯವಸ್ಥೆಯನ್ನು ಕಾಪಾಡಲು ಬಿಜೆಪಿ, ಕಾಂಗ್ರೆಸ್, ಜೆಡಿಎಸ್, ಎಸ್‌ಪಿ, ಬಿಎಸ್‌ಪಿ ಮುಂತಾದ ಎಲ್ಲಾ ಪಕ್ಷಗಳು ಬಂಡವಾಳಗಾರರ ಪಾದ ಸೇವಕರಾಗಿ ಟೊಂಕಕಟ್ಟಿ ನಿಂತಿವೆ. ಸಂಪತ್ತನ್ನು ಸೃಷ್ಟಿಸುವ ಕಾರ್ಮಿಕರು ಮತ್ತು ರೈತರಿಗೆ ಈ ವ್ಯವಸ್ಥೆಯಲ್ಲಿ ನ್ಯಾಯ ಸಿಗಲು ಸಾಧ್ಯವಿಲ್ಲವೆಂದು ಪ್ರಪಂಚದಲ್ಲಿ ಮೊಟ್ಟ ಮೊದಲ ಬಾರಿಗೆ ಮಹಾನ್ ಕಾರ್ಲ್ ಮಾರ್ಕ್ಸ್ ತೋರಿಸಿಕೊಟ್ಟರು. ಅವರು ಈ ಶೋಷಕ ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆದು ಶೋಷಣೆರಹಿತ ಸಮಾಜವಾದಿ ಸಮಾಜವನ್ನು ಸ್ಥಾಪಿಸಲು ಕರೆ ನೀಡಿದ್ದರು. ಅದರಂತೆಯೇ ಇನ್ನೋರ್ವ ಮಹಾನ್ ಮಾರ್ಕ್ಸ್‌ವಾದಿ ಚಿಂತಕರಾದ ಲೆನಿನ್, ರಷ್ಯಾದಲ್ಲಿ 1917ರಲ್ಲಿ ಕ್ರಾಂತಿಯನ್ನು ನೆರವೇರಿಸಿ, ಶೋಷಣಾರಹಿತ ಸಮಾಜವಾದಿ ಸಮಾಜವನ್ನು ಸ್ಥಾಪಿಸಿದರು. ನಂತರ ಹಲವು ದೇಶಗಳಲ್ಲಿ ಜನತಾಂತ್ರಿಕ ಚಳುವಳಿಗಳು ಬೆಳೆಯಲು ಆರಂಭವಾದವು. ಜರ್ಮನಿಯಲ್ಲೂ ಅಂತಹ ಕ್ರಾಂತಿಕಾರಿ ಹೋರಾಟ ಬೆಳೆಯಿತು. ಇದರಿಂದ ಗಾಬರಿಯಾದ ಬಂಡವಾಳಶಾಹಿಗಳು ಪ್ರತಿತಂತ್ರ ಹೂಡಿ ಜನಪರ ವೇಷ ಧರಿಸಿದ್ದ ಬಂಡವಾಳಗಾರರ ಪರನಾದ ಹಿಟ್ಲರ್‌ನನ್ನು ಅಧಿಕಾರದಲ್ಲಿ ಕೂಡಿಸಿದರು. ಫ್ಯಾಸೀವಾದವನ್ನು ಹಿಡಿದುಕೊಂಡು ಬಂದ ಹಿಟ್ಲರ್, ಜನಾಂಗೀಯ ಶ್ರೇಷ್ಠತೆಯ ಹೆಸರಿನಲ್ಲಿ ಯಹೂದಿಗಳ ಮಾರಣಹೋಮ ನಡೆಸಿದ. 60ಲಕ್ಷ ಯಹೂದಿಗಳ ನರಮೇಧವಾಯಿತು. ಇಂತಹದೇ ದ್ವೇಷವನ್ನು ನಮ್ಮ ದೇಶದಲ್ಲಿ ಇಂದು ಮಂದಿರ–ಮಸೀದಿ ಹೆಸರಿನಲ್ಲಿ ಬೆಳೆಸಲಾಗುತ್ತಿದೆ. ಇದರ ವಿರುದ್ಧ ಜನರು ಜಾಗೃತರಾಗಬೇಕು ಎಂದರು.

ಸಭೆಯ ಅಧ್ಯಕ್ಷತೆಯನ್ನು ಪಕ್ಷದ ಕೇಂದ್ರ ಸಮಿತಿಯ ಸದಸ್ಯರು ಮತ್ತು ರಾಜ್ಯ ಕಾರ್ಯದರ್ಶಿಗಳಾದ ಕಾಮ್ರೇಡ್ ಕೆ. ಉಮಾ ವಹಿಸಿ ಮಾತನಾಡಿದರು. ಇಂದು ರೈತರ ಆತ್ಮಹತ್ಯೆ, ಮಹಿಳೆಯರ ಮೇಲಿನ ದೌರ್ಜನ್ಯ ಹೆಚ್ಚಾಗುತ್ತಲೇ ಇವೆ. ಆದರೆ ರಾಜ್ಯ ಸರ್ಕಾರವು ಐದು ಗ್ಯಾರಂಟಿಗಳನ್ನು ಜಾರಿ ಮಾಡಿದ್ದೇವೆ ಎಂಬ ಗುಂಗಿನಲ್ಲೇ ಇದೆ. ಮೋದಿ ಸರ್ಕಾರ 2047ಕ್ಕೆ ವಿಕಸಿತ ಭಾರತವನ್ನು ಜನರ ಮುಂದೆ ತಂದಿಡುವ ಬಜೆಟ್ ಮಂಡನೆ ಮಾಡಿದ್ದೇವೆ ಎಂದು ಕೊಚ್ಚಿಕೊಳ್ಳುತ್ತಾ ರಾಮನ ಜಪದ ಮೂಲಕ ಮತಯಾಚನೆ ಆರಂಭಿಸಿದೆ. ದೇವರು–ಧರ್ಮದ ಹೆಸರಿನಲ್ಲಿ ಭಾವನಾತ್ಮಕ ವಿಷಯ ಮುಂದುಮಾಡಿ ಜನರ ನೈಜ ಸಮಸ್ಯೆಗಳನ್ನು ಮರೆಮಾಚುತ್ತಿದೆ. ಕೆಲಸ ಸಿಗದ ಯುವಜನರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ, ಹಸಿವೆಯಿಂದ ಜನ ಸಾಯುತ್ತಿದ್ದಾರೆ. ಇನ್ನೊಂದೆಡೆ, ಅಂಬಾನಿ ತನ್ನ ಮಗನ ಮದುವೆಗೆ ಸಾವಿರಾರು ಕೋಟಿ ರೂಪಾಯಿ ಖರ್ಚು ಮಾಡುತ್ತಾರೆ ಎಂದರು. ಯುವಕರಿಗೆ ಕೆಲಸದ ಗ್ಯಾರಂಟಿ, ಹೆಣ್ಣುಮಕ್ಕಳಿಗೆ ಭದ್ರತೆಯ ಗ್ಯಾರಂಟಿ, ರೈತರಿಗೆ ವೈಜ್ಞಾನಿಕ ಬೆಲೆಯ ಗ್ಯಾರಂಟಿ ನೀಡಿ ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಅವರು ಆಗ್ರಹಿಸಿದರು.

ಪಕ್ಷದ ರಾಜ್ಯ ಸೆಕ್ರೆಟೇರಿಯಟ್ ಸದಸ್ಯರಾದ ಕಾಮ್ರೇಡ್ ಎಂ.ಶಶಿಧರ್ ಮಾತನಾಡಿ, ರಾಜ್ಯದಲ್ಲಿ ಸಣ್ಣ, ಅತಿಸಣ್ಣ ರೈತರು ಕಳೆದ 40 ವರ್ಷಗಳಿಂದ 2–3 ಎಕರೆ ಜಮೀನಿನಲ್ಲಿ ಉಳುಮೆ ಮಾಡಿಕೊಂಡು ಬದುಕುತ್ತಿದ್ದಾರೆ. ಪೊಲೀಸರನ್ನು ಬಳಸಿಕೊಂಡು ಅವರನ್ನು ಅರಣ್ಯ ಇಲಾಖೆಯ ಅಧಿಕಾರಿಗಳು ಒಕ್ಕಲೆಬ್ಬಿಸುತ್ತಿದ್ದಾರೆ. ಆದ್ದರಿಂದ ಸರ್ಕಾರ ಮಧ್ಯೆ ಪ್ರವೇಶ ಮಾಡಿ ರೈತರನ್ನು ಒಕ್ಕಲೆಬ್ಬಿಸುವುದನ್ನು ನಿಲ್ಲಿಸಬೇಕು, ಬಗರ್‌ಹುಕುಂ ರೈತರಿಗೆ ಅವರ ಭೂಮಿಯನ್ನು ಅವರಿಗೆ ಮಂಜೂರು ಮಾಡಬೇಕು ಎಂದು ಆಗ್ರಹಿಸಿದರು. ಇನ್ನೋರ್ವ ರಾಜ್ಯ ಸೆಕ್ರೆಟೇರಿಯಟ್ ಸದಸ್ಯರಾದ ಕಾಮ್ರೇಡ್ ರಾಮಾಂಜನಪ್ಪ ಆಲ್ದಳ್ಳಿ ನರೇಗಾ ಯೋಜನೆಯಡಿಯಲ್ಲಿ ದುಡಿಮೆಯ ದಿನಗಳನ್ನು ಹೆಚ್ಚಿಸಬೇಕು ಎಂದರು. ರಾಜ್ಯ ಸೆಕ್ರೆಟೇರಿಯಟ್‌ನ ಇನ್ನೋರ್ವ ಸದಸ್ಯರಾದ ಕಾಮ್ರೇಡ್ ಡಾ.ಟಿ.ಎಸ್.ಸುನೀತ್‌ಕುಮಾರ್ ಮನವಿ ಪತ್ರವನ್ನು ಓದಿದರು. ಇನ್ನೋರ್ವ ರಾಜ್ಯ ಸೆಕ್ರೆಟೇರಿಯಟ್ ಸದಸ್ಯರಾದ ಕಾಮ್ರೇಡ್ ಕೆ.ಸೋಮಶೇಖರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಜನರ ಜ್ವಲಂತ ಸಮಸ್ಯೆಗಳ ವಿರುದ್ಧ ಇಡೀ ರಾಜ್ಯದಾದ್ಯಂತ ಜನರಿಂದ ಸಂಗ್ರಹಿಸಿದ ಸಹಿ ಸಮೇತ ಮನವಿ ಪತ್ರವನ್ನು ನಿಯೋಗದ ಮೂಲಕ ರಾಜ್ಯಪಾಲರಿಗೆ ಸಲ್ಲಿಸಲಾಯಿತು. ಇದೇ ಸಂದರ್ಭದಲ್ಲಿ ಮನವಿ ಸ್ವೀಕರಿಸಲು ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಅರಣ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ ಪ್ರತಾಪ್ ಚಂದ್ರ ರೇ ಮನವಿ ಸ್ವೀಕರಿಸಿ, 3 ಎಕರೆಯವರೆಗೆ ಉಳುಮೆ ಮಾಡುತ್ತಿರುವ ರೈತರನ್ನು ಒಕ್ಕಲೆಬ್ಬಿಸದಂತೆ ಸೂಚನೆ ನೀಡುವುದಾಗಿ ಮತ್ತು ಉಳಿದ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರುವುದಾಗಿ ಹೇಳಿದರು. ■

# "ಪೌರತ್ವ (ತಿದ್ದುಪಡಿ) ಕಾಯ್ದೆಯ ಜಾರಿ ಅಪ್ರಜಾತಾಂತ್ರಿಕ"

## – ಎಸ್‌ಯುಸಿಐ(ಸಿ)

ಎಸ್‌ಯುಸಿಐ(ಕಮ್ಯುನಿಸ್ಟ್) ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್‌ರವರು ಮಾರ್ಚ್ 13 ರಂದು ಈ ಕೆಳಗಿನ ಹೇಳಿಕೆಯನ್ನು ನೀಡಿದರು:

"ಇಂಡಿಯನ್ ನ್ಯಾಶಿನಲ್ ಕಾಂಗ್ರೆಸ್ ಕೂಡ ಸೇರಿದಂತೆ ಹಿಂದೂ ಮಹಾಸಭಾ, ಆರ್‌ಎಸ್‌ಎಸ್ ಮತ್ತು ಮುಸ್ಲಿಂ ಲೀಗ್‌ಗಳು ಮುಂದಿಟ್ಟ ಧರ್ಮದ ಆಧಾರದ ಮೇಲೆ ಭಾರತವನ್ನು ವಿಭಜಿಸುವ ಕಲ್ಪನೆಯು ಆಗಿನ ಭಾರತದ ಬ್ರಿಟಿಷ್ ಸಾಮ್ರಾಜ್ಯಶಾಹಿ ಆಡಳಿತಗಾರರ ತ್ವರಿತ ಬೆಂಬಲ ಮತ್ತು ಪ್ರೋತ್ಸಾಹವನ್ನು ಪಡೆದುಕೊಂಡು ಭದ್ರವಾಗಿ ನೆಲೆಗೊಂಡಿತು. ಇದರ ಪರಿಣಾಮವಾಗಿ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಬೃಹತ್ತಾದ ಜನವಲಸೆ ಉಂಟಾಯಿತು. ವಾಸ್ತವದಲ್ಲಿ, ಇದು ಹಿಂದೆಂದೂ ಕಂಡು ಕೇಳರಿಯದ ಆಯಾಮದಲ್ಲಿ ನಿರಾಶ್ರಿತರ ಸಮಸ್ಯೆಗೆ ಕಾರಣವಾಯಿತು. ಅಂತಹ ವಾತಾವರಣದಲ್ಲಿ, ಭಾರತದ ಜನರ ಆಶಯಕ್ಕೆ ಮಣಿದು, ಅಂದಿನ ಭಾರತದ ಪ್ರಧಾನಿ ಜವಾಹರಲಾಲ್ ನೆಹರೂ ಎಲ್ಲಾ ನಿರಾಶ್ರಿತರಿಗೂ ಭಾರತದಲ್ಲಿ ಪೌರತ್ವವನ್ನು ನೀಡಲಾಗುವುದು ಎಂದು ಘೋಷಿಸಿದರು. ಯಾವುದೇ ಪೂರ್ವನಿಬಂಧನೆ ಅಥವಾ ನಿರ್ಬಂಧಗಳಿಲ್ಲದೆ ಇದನ್ನು ಕಾರ್ಯಗತಗೊಳಿಸಬೇಕು ಮತ್ತು ಇದನ್ನು ಒಂದು 'ರಾಷ್ಟ್ರೀಯ ವಾಗ್ದಾನ' ಎಂದು ಪರಿಗಣಿಸಲಾಗಿತ್ತು. ತದನಂತರದ ದಿನಗಳಲ್ಲಿ ಭಾರತವನ್ನು ಪ್ರವೇಶಿಸಿದ ನಿರಾಶ್ರಿತರ ಹೊಸ ತಂಡಕ್ಕೆ ಪೌರತ್ವವನ್ನು ನೀಡಲು ಭಾರತದ ಸಂವಿಧಾನದಲ್ಲೇ ಅಸ್ತಿತ್ವದಲ್ಲಿದ್ದ ಪೌರತ್ವ ಕಾಯ್ದೆ 1955 ಮತ್ತು ಈ ಇತರ ಅಂತರರಾಷ್ಟ್ರೀಯ ಕಾನೂನುಗಳು, ಆಚರಣೆ ಮತ್ತು ಪೌರತ್ವವನ್ನು ನೀಡುವ ಕ್ರಮಗಳಿಗೆ ಅನುಗುಣವಾಗಿ ಪರಿಗಣಿಸಬಹುದಾಗಿತ್ತು. ಬಿಜೆಪಿ ಸರ್ಕಾರವು ಆ ದಿಕ್ಕಿನಲ್ಲಿ ಹೆಜ್ಜೆ ಹಾಕುವ ಬದಲು ಯಾವುದೇ ರಾಷ್ಟ್ರೀಯ ಒಮ್ಮತಾಭಿಪ್ರಾಯವನ್ನು ಬೆಳೆಸದೆ ಹೊಸ ಪೌರತ್ವ (ತಿದ್ದುಪಡಿ) ಮಸೂದೆ, 2019 ಅನ್ನು ಜಾರಿಗೆ ತಂದಿತು. ಸ್ಪಷ್ಟವಾಗಿ, ಇದು ಸಂಪೂರ್ಣವಾಗಿ ಅನಗತ್ಯವಾಗಿತ್ತು. ವಾಸ್ತವವಾಗಿ, ಒಂದು ದುಷ್ಟ ಉದ್ದೇಶದೊಂದಿಗೆ ಕೋಮುದ್ವೇಷದ ಮತ್ತು ಸಂಕುಚಿತ ಭಾವನೆಗಳನ್ನು ಉತ್ತೇಜಿಸಿ, ಜನರನ್ನು ವಿಭಜಿಸಿ, ಜೀವನದ ಜ್ವಲಂತ ಸಮಸ್ಯೆಗಳಿಂದ ಅವರ ಗಮನವನ್ನು ಬೇರೆಡೆಗೆ ತಿರುಗಿಸಿ, ಅವರು ಸಂಘಟಿತ ಪ್ರಜಾತಾಂತ್ರಿಕ ಹೋರಾಟಗಳನ್ನು ಬೆಳೆಸಲು ಅಸಾಧ್ಯವಾಗಿಸುವ ಯೋಜನೆಯೊಂದಿಗೆ ಆರ್‌ಎಸ್‌ಎಸ್ ಮತ್ತು ಬಿಜೆಪಿಗಳು ಈ ಕಾನೂನನ್ನು ತಂದವು. ಬಿಜೆಪಿ ಸರ್ಕಾರದ ಈ ತೀವ್ರ ಜನವಿರೋಧಿ ಮತ್ತು ಸರ್ವಾಧಿಕಾರಿ ನಡೆಯನ್ನು ನಾವು ಬಲವಾಗಿ ಖಂಡಿಸುತ್ತೇವೆ. ಬಿಜೆಪಿ ಸರಕಾರದ ಈ ಕುಯುಕ್ತಿಯ ನಡೆ, ಅದೇ ವಿನಾಶಕಾರಿ ಉದ್ದೇಶದಿಂದ ಅವರೇ ರೂಪಿಸಿರುವ ಎನ್‌ಆರ್‌ಸಿಯ ದುರ್ಯೋಜನೆಯೊಂದಿಗೆ ತಳುಕು ಹಾಕಿಕೊಂಡಿದೆ.

ಅದೇ ಸಮಯದಲ್ಲಿ, ಯಾವುದೇ ಧಾರ್ಮಿಕ, ಜನಾಂಗೀಯ ಮತ್ತು ಜನಾಂಗೀಯ ಪಕ್ಷಪಾತ ಮತ್ತು ತಾರತಮ್ಯವನ್ನು ಮೀರಿದ ದೇಶದ ಕಾನೂನು, ಅಂತರರಾಷ್ಟ್ರೀಯ ನಿಯಮಗಳು, ರೂಢಿಗಳು ಮತ್ತು ಪದ್ಧತಿಗಳ ಪ್ರಕಾರ, ಯಾವುದೇ ದೇಶದ ವ್ಯಕ್ತಿಯು ಪ್ರಪಂಚದ ಯಾವುದೇ ಇತರ ದೇಶದ ಪೌರತ್ವವನ್ನು ಬಯಸಬಹುದು ಹಾಗೂ ಅದಕ್ಕಾಗಿ ಅರ್ಜಿ ಸಲ್ಲಿಸಬಹುದು ಮತ್ತು ಆ ವ್ಯಕ್ತಿಯು ಸರಿಯಾದ ಪ್ರಕ್ರಿಯೆಯನ್ನು ಅನುಸರಿಸಿ ಪೌರತ್ವವನ್ನು ಪಡೆಯಲು ಅರ್ಹರಾಗಿರುತ್ತಾರೆ ಎಂದು ನಾವು ಒತ್ತಿಹೇಳಲು ಬಯಸುತ್ತೇವೆ. ಅಂತಹ ಅರ್ಜಿಗಳನ್ನು ವಿಲೇವಾರಿ ಮಾಡುವಾಗ ಭಾರತ ಸರ್ಕಾರವು ಇದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ನಾವು ಒತ್ತಾಯಪೂರ್ವಕವಾಗಿ ಆಗ್ರಹಿಸುತ್ತೇವೆ." ■

# ವಿಶ್ವದಾದ್ಯಂತ ಉಕ್ಕುತ್ತಿರುವ ಜನಾಂದೋಲನಗಳ ಮಹಾಪೂರ

ಕಳೆದ ಕೆಲ ವರ್ಷಗಳಿಂದ ಜಗತ್ತಿನಾದ್ಯಂತ ನೂರಾರು ಪ್ರತಿಭಟನೆಗಳು ಸ್ಫೋಟಗೊಳ್ಳುತ್ತಲೇ ಇವೆ. ತಾನು ವಿಶ್ವದಲ್ಲೇ ಅತ್ಯಂತ ದೊಡ್ಡ ಮತ್ತು ಸುಭದ್ರ ಆರ್ಥಿಕತೆಯನ್ನು ಹೊಂದಿದ್ದೇನೆ ಎಂದು ಕೊಚ್ಚಿಕೊಳ್ಳುವ ಸಾಮ್ರಾಜ್ಯಶಾಹಿ ದೇಶವಾದ ಅಮೇರಿಕದಿಂದ ಹಿಡಿದು ಯುರೋಪಿನ ದೇಶಗಳಾದ ಬ್ರಿಟನ್, ಜರ್ಮನಿ, ಫ್ರಾನ್ಸ್‌ಗಳಿಂದ ಮಧ್ಯಪ್ರಾಚ್ಯದವರೆಗೂ ಪ್ರತಿಭಟನೆಗಳ ಮಹಾಪೂರವೇ ಉಕ್ಕಿ ಹರಿಯುತ್ತಿದೆ.

### ಆರ್ಥಿಕ ಕುಸಿದಿಂದಾಗಿ ಸಂಕಷ್ಟಕ್ಕೀಡಾಗಿರುವ ಜನತೆ

ಶೋಷಕ, ಬಿಕ್ಕಟ್ಟುಪೀಡಿತ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಬವಣೆಗೊಳಗಾಗುವವರು ಜನ ಸಾಮಾನ್ಯರೇ, ಅದರಲ್ಲೂ ಕಾರ್ಮಿಕರು ಮತ್ತು ರೈತರು. ಶೋಷಿತ ಜನರ ಖರೀದಿ ಶಕ್ತಿಯು ಕುಸಿದ ಕಾರಣ, ಮಾರುಕಟ್ಟೆ ಇಲ್ಲದ ಬಂಡವಾಳಿಗರು ಆರ್ಥಿಕ ಕುಸಿತಕ್ಕೆ ಒಳಗಾಗಿದ್ದಾರೆ; ಕೋವಿಡ್ ಮಹಾಮಾರಿಯ ಹೊಡೆತ ಈ ಆರ್ಥಿಕ ಕುಸಿತವನ್ನು ಇನ್ನಷ್ಟು ಹೆಚ್ಚಿಸಿದೆ. ಇದರಿಂದ ಪಾರಾಗಲು, ಬಂಡವಾಳಿಗರು ತಮ್ಮ ಉತ್ಪಾದನೆಯನ್ನು ಕಡಿತಗೊಳಿಸಿ, ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡುತ್ತಿದ್ದಾರೆ. ಇದು ಆರ್ಥಿಕತೆಯ ಬಿಕ್ಕಟ್ಟನ್ನು ಇನ್ನಷ್ಟು ಉಲ್ಬಣಗೊಳಿಸುತ್ತಿರುವುದರ ಜೊತೆಗೆ ಕಾರ್ಮಿಕರ ಪರಿಸ್ಥಿತಿಯನ್ನು ಇನ್ನಷ್ಟು ಶೋಚನೀಯವಾಗಿಸುತ್ತಿದೆ. ಒಂದೆಡೆ, ಬೆಲೆ ಏರಿಕೆ, ಹಣದುಬ್ಬರ, ವಿದ್ಯುತ್ ದರ ಏರಿಕೆ, ಬಡತನ ಅವರನ್ನು ಕಾಡುತ್ತಿದೆ. ಇನ್ನೊಂದೆಡೆ, ನಿರುದ್ಯೋಗ, ಕುಸಿಯುತ್ತಿರುವ ವೇತನ, ಶಾಶ್ವತ ಸ್ವರೂಪದ ಕೆಲಸಗಳಿಗೆ ಕತ್ತರಿ ಬಿದ್ದು ಗುತ್ತಿಗೆಯ ಆಧಾರದಲ್ಲಿ ಬಿಡಿಗಾಸಿಗೆ ದುಡಿಯುವ ಅನಿವಾರ್ಯತೆ, ಕೆಲಸದ ಸ್ಥಳಗಳಲ್ಲಿನ ಕೆಟ್ಟ ಪರಿಸ್ಥಿತಿ– ಇವುಗಳು ಅವರ ಬದುಕನ್ನು ದುರ್ಭರವನ್ನಾಗಿಸಿವೆ. ಜೊತೆಗೆ, ಉಕ್ರೇನ್ ಮೇಲಿನ ರಷ್ಯಾದ ದಾಳಿಯ ಕಾರಣದಿಂದ, ರಷ್ಯಾದಿಂದ ಇದುವರೆಗೂ ಆಮದಾಗುತ್ತಿದ್ದ ಕಡಿಮೆ ಬೆಲೆಯ ಅನಿಲ ಈಗ ದೊರಕದೆ, ಇಂಧನದ ಕೊರತೆ ಕಾಡುತ್ತಿದೆ. ಇದರಿಂದ ಕೈಗಾರಿಕೆ ಮತ್ತು ಗೃಹಬಳಕೆ ಇಂಧನದ ಬೆಲೆ ಹೆಚ್ಚಳವಾಗಿರುವುದೂ ಸಹ ಜನರಿಗೆ ಆರ್ಥಿಕ ಹೊಡೆತ ನೀಡುತ್ತಿದೆ. ಆದರೆ, ಎಂತಹ ಸಂಕಷ್ಟಗಳಲ್ಲೂ ಅತ್ಯಧಿಕ ಲಾಭವೇ ಗುರಿಯಾದ ಶೋಷಕ ಬಂಡವಾಳಿಗರ, ಏಕಸ್ವಾಮ್ಯಾಧಿಪತಿಗಳ ಸಂಪತ್ತು ಏರುತ್ತಲೇ ಹೋಗಿ ಈ ಅಸಮಾನತೆ ಕಣ್ಣುಕುಕ್ಕುವಂತೆ ರಾಚುತ್ತಿದೆ. ಹಾಗಾಗಿ, ತಾಳ್ಮೆಯ ಮಿತಿಯನ್ನೂ ಮೀರಿದ ದುಡಿಯುವ ಜನರು ತಮ್ಮ ನ್ಯಾಯಬದ್ಧ ಹಕ್ಕುಗಳಿಗೆ ಆಗ್ರಹಿಸಿ ಬೀದಿಗಿಳಿಯುತ್ತಿದ್ದಾರೆ.

**ಅಮೇರಿಕ:** 2023ರಲ್ಲಿ ಅಮೇರಿಕದಲ್ಲಿ ನಡೆದ ಮುಷ್ಕರಗಳು, ಕೆಲಸ ಸ್ಥಗಿತಗಳು, ಪಿಕೆಟಿಂಗ್ ಮುಂತಾದ ಪ್ರತಿಭಟನೆಗಳು 2022ಕ್ಕಿಂತ ಬಹಳವೇ ಹೆಚ್ಚು. ತಮ್ಮ ವೇತನದ ಹೆಚ್ಚಳ, ಉದ್ಯೋಗದ ಭದ್ರತೆ, ಉದ್ಯೋಗದ ಸ್ಥಳಗಳಲ್ಲಿನ ಪರಿಸ್ಥಿತಿಗಳ ಉನ್ನತೀಕರಣ ಮುಂತಾದ ಹತ್ತು ಹಲವು ಬೇಡಿಕೆಗಳನ್ನು ಇಟ್ಟುಕೊಂಡು ಲಕ್ಷಾಂತರ ಕಾರ್ಮಿಕರು ಬೀದಿಗಿಳಿದಿದ್ದಾರೆ. ವಿಮಾನಯಾನ ಕಂಪನಿಗಳು, ರೈಲ್ವೆ ಇಲಾಖೆ, ಅಂಚೆ ಇಲಾಖೆ, ಕಾರು ಉದ್ಯಮಗಳಲ್ಲಿನ ಉದ್ಯೋಗಿಗಳು, ನರ್ಸ್‌ಗಳು, ಶಿಕ್ಷಕರು, ಕೊನೆಗೆ ಅಮೇರಿಕದ ಪ್ರಸಿದ್ಧ ಚಲನಚಿತ್ರೋದ್ಯಮವಾದ ಹಾಲಿವುಡ್‌ನ ಲೇಖಕರು ಮತ್ತು ಕಲಾವಿದರೂ ಸಹ ಈ ಪ್ರತಿಭಟನೆಗಳಲ್ಲಿ ಸೇರಿಕೊಂಡಿದ್ದಾರೆ. ಉದ್ಯೋಗಗಳಲ್ಲಿ ಮಾಯವಾಗುತ್ತಿರುವ ಭದ್ರತೆ, ನಜ್ಜುಗುಜ್ಜು ಮಾಡುತ್ತಿರುವ ಉದ್ಯೋಗಗಳು, ಅತಂತ್ರ ಬದುಕಿನ ಪರಿಸ್ಥಿತಿ, ಗಗನಕ್ಕೇರುತ್ತಿರುವ ಕಂಪನಿಗಳ ಲಾಭ, ಗರಿಷ್ಠ ಹಣದುಬ್ಬರ, ಹೆಚ್ಚುತ್ತಿರುವ ಅಸಮಾನತೆಯ ದ್ಯೋತಕವಾದ ದುಡಿಯುವವರ ಮತ್ತು ದುಡಿಸಿಕೊಳ್ಳುತ್ತಿರುವವರ ವೇತನಗಳಲ್ಲಿನ ಅಪಾರ ವ್ಯತ್ಯಾಸ ಇವುಗಳೇ ಜನಾಕ್ರೋಶದ ಮುಖ್ಯ ಕಾರಣಗಳು.

**ಯುರೋಪ್:**

**ಫ್ರಾನ್ಸ್:** ನಿವೃತ್ತಿ ವಯಸ್ಸಿನ ಏರಿಕೆ ಮತ್ತು ನೂತನ ಪಿಂಚಣಿ ಕಾಯ್ದೆಯನ್ನು ಪ್ರತಿಭಟಿಸಿ ಫ್ರಾನ್ಸ್‌ನ ಸಹಸ್ರ ಸಹಸ್ರ ಜನ ಬೀದಿಗಿಳಿದಿದ್ದರು.

**ಜರ್ಮನಿ:** ಇಲ್ಲಿಯ ಬರ್ಲಿನ್ ಮತ್ತು ಫ್ರಾಂಕ್‌ಫರ್ಟ್ ವಿಮಾನ ನಿಲ್ದಾಣಗಳಲ್ಲಿ ಅಲ್ಲಿಯ ಭದ್ರತಾ ಸಿಬ್ಬಂದಿ ಮತ್ತಿತರ ಕಾರ್ಮಿಕರ ಪ್ರತಿಭಟನೆಯಿಂದಾಗಿ, ಎಲ್ಲಾ ವಿಮಾನಗಳನ್ನು ರದ್ದು ಪಡಿಸಬೇಕಾಯಿತು, ಕಡಿಮೆ ವೇತನದ ಕಾರಣದಿಂದ ರೈಲ್ವೆ ಕಾರ್ಮಿಕರು ಪ್ರತಿಭಟಿಸಿದ್ದರಿಂದ ರೈಲ್ವೆ ಸೇವೆಗೆ ಅಡಚಣೆಯುಂಟಾಯಿತು.

ಅಮೇರಿಕದ ದೈತ್ಯ ಬಹುರಾಷ್ಟ್ರೀಯ ಕಂಪನಿ, ಅಮೆಝಾನ್‌ನ ಉದ್ಯೋಗಿಗಳು ತಮ್ಮ ಮೇಲಿನ ಶೋಷಣೆಯನ್ನು ಪ್ರತಿಭಟಿಸಿ ಯುರೋಪಿನಾದ್ಯಂತ ಮುಷ್ಕರ ಹೂಡಿದ್ದರು. ಅದಕ್ಕಾಗಿ ಅವರು ಆಯ್ಕೆ ಮಾಡಿಕೊಂಡಿದ್ದ ದಿನ, ನವೆಂಬರ್ 24, 2023. ಇದು ಆ ದೇಶಗಳಲ್ಲಿ ಸತ್ತವರಿಗೆ ಶ್ರದ್ಧಾಂಜಲಿ ನೀಡುವ ದಿನವಾಗಿದ್ದು, ಕಂಪನಿಗಳು ಅಂದು ಬೃಹತ್ ರಿಯಾಯಿತಿ ನೀಡುವುದರಿಂದ ಅತ್ಯಂತ ಹೆಚ್ಚಿನ ವ್ಯಾಪಾರವಾಗುವ ದಿನ. 'ಅಮೆಝಾನ್ ಹಣ ಕೊಡುವಂತೆ ಮಾಡಿ' ಎಂಬುದೇ ಪ್ರತಿಭಟನಕಾರರ ಘೋಷಣೆಯಾಗಿತ್ತು.

ಯುರೋಪಿಯನ್ ಯೂನಿಯನ್‌ನ ಬಹುತೇಕ ದೇಶಗಳಲ್ಲಿ ರೈತರು ಆರ್ಥಿಕ ಸಂಕಷ್ಟಗಳಿಂದ ಹೈರಾಣಾಗಿ, ಸರ್ಕಾರಗಳ ರೈತವಿರೋಧಿ ನೀತಿಗಳನ್ನು ಪ್ರತಿಭಟಿಸುತ್ತಿದ್ದಾರೆ.

ಆದರೆ, ಇವೆಲ್ಲಾ ಪ್ರತಿಭಟನೆಗಳು ಸರಿಯಾದ ಕ್ರಾಂತಿಕಾರಿ ನಾಯಕತ್ವದಡಿಯಲ್ಲಿ, ಸೂಕ್ತ ಕ್ರಾಂತಿಕಾರಿ ವೈಚಾರಿಕತೆಯ ಮಾರ್ಗದರ್ಶನದಲ್ಲಿ ಸಂಘಟಿತವಾಗಿ, ಸಮಸ್ಯೆಗಳ ತಾಯಿಬೇರಾದ ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆದು ಸಮಾಜವಾದಿ ಸಮಾಜವನ್ನು ಸ್ಥಾಪಿಸುವ ಗುರಿಯಿಂದ ಮುನ್ನಡೆದರೆ ಮಾತ್ರವೇ ತಮ್ಮ ಅಂತಿಮ ಗಮ್ಯವನ್ನು ತಲುಪುವುದು ಸಾಧ್ಯ.



ಅಮೇರಿಕ



ಸ್ಪೇನ್: ಕಾರ್ಮಿಕರ ಪ್ರತಿಭಟನೆ


ಜರ್ಮನಿ: ರೈತವಿರೋಧಿ ನೀತಿಗಳನ್ನು ವಿರೋಧಿಸಿ ಪ್ರತಿಭಟನೆ


ನೆದರ್‌ಲ್ಯಾಂಡ್ಸ್



ಅಮೆಝಾನ್ ವಿರುದ್ಧ ಯುರೋಪಿನ ಕಾರ್ಮಿಕರು


ಗ್ರೀಸ್: ವಿಶ್ವವಿದ್ಯಾಲಯಗಳ ಖಾಸಗೀಕರಣ ವಿರೋಧಿಸಿ ವಿದ್ಯಾರ್ಥಿಗಳ ಆಂದೋಳನ



ಪೋರ್ಚುಗಲ್: ಪೋಲೀಸರ ಪ್ರತಿಭಟನೆ

# ಜನಪರ ಶಿಕ್ಷಣ ನೀತಿ ರೂಪಿಸಿ ಎಐಡಿಎಸ್‌ಓ ಆಗ್ರಹ



ರಾಜ್ಯದಲ್ಲಿ ಎನ್‌ಇಪಿ–2020ರ ವಿರುದ್ಧದ ಐತಿಹಾಸಿಕ ಹೋರಾಟವನ್ನು ಮುನ್ನಡೆಸಿರುವ ಎಐಡಿಎಸ್‌ಓ ಜನಪರ ಶಿಕ್ಷಣ ನೀತಿಯನ್ನು ರೂಪಿಸಲು ಆಗ್ರಹಿಸಿ ರಾಜ್ಯವ್ಯಾಪಿ ಸಮೀಕ್ಷೆಯೊಂದನ್ನು ನಡೆಸಿತ್ತು. 9 ಸರ್ಕಾರಿ ವಿಶ್ವವಿದ್ಯಾಲಯಗಳು, 82 ಸರ್ಕಾರಿ ಪದವಿ ಕಾಲೇಜುಗಳು, 12 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಮತ್ತು 15 ಸರ್ಕಾರಿ ವಿದ್ಯಾರ್ಥಿ ವಸತಿ ನಿಲಯಗಳು ಸೇರಿದಂತೆ 23,120 ಜನರು ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದರು. ಸಮೀಕ್ಷೆಯ ವಿಸ್ತೃತ ವಿಶ್ಲೇಷಣೆಯ ಪುಸ್ತಕ ಬಿಡುಗಡೆಗಾಗಿ ರಾಜ್ಯಮಟ್ಟದ ಕಾರ್ಯಕ್ರಮವೊಂದನ್ನು ಬೆಂಗಳೂರಿನ ಗಾಂಧಿ ಭವನದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಆಗಮಿಸಿದ್ದ ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಎ. ಮುರಿಗೆಪ್ಪ, ಶಿಕ್ಷಣವು ಕೇವಲ ಉದ್ಯೋಗ ಗಳಿಕೆಗೆ ಮಾತ್ರವಲ್ಲ. ಬದಲಿಗೆ, ಜೀವನವನ್ನು ಸ್ವತಂತ್ರವಾಗಿ ನಿಭಾಯಿಸಲು ವ್ಯಕ್ತಿಯೊಬ್ಬನಿಗೆ ಧೈರ್ಯ ತುಂಬಲು ಶಿಕ್ಷಣವು ಅತ್ಯವಶ್ಯಕವಾಗಿದೆ ಎಂದು ಹೇಳಿದರು.

ತುಮಕೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ರಾಜಾಸಾಬ್ ಅವರು ಮಾತನಾಡಿ, ಜನಪರ ಶಿಕ್ಷಣ ನೀತಿ ರೂಪಿಸಲು ವಿದ್ಯಾರ್ಥಿಗಳ ಆಗ್ರಹದ ಈ ಸಮೀಕ್ಷೆಯು ಚಾರಿತ್ರಿಕವಾಗಿ ನಿಲ್ಲುವಂತಹ ಕೆಲಸವಾಗಿದೆ. ತಾರ್ಕಿಕವಾಗಿ, ವೈಜ್ಞಾನಿಕವಾಗಿ ಆಲೋಚನೆಮಾಡುವ ವಿದ್ಯಾರ್ಥಿ ಸಮುದಾಯದ ಅವಶ್ಯಕತೆಯು ನಮ್ಮ ಸಮಾಜಕ್ಕಿದೆ ಎಂದರು. ಅಂಕಣಕಾರ ರಘುನಾಥ್ ಚ.ಹ. ಅವರು ಮಾತಾನಾಡಿ, ಪ್ರಸ್ತುತ ಶೈಕ್ಷಣಿಕ ಕ್ಷೇತ್ರವು ಎನ್‌ಇಪಿ–2020ರಿಂದಾಗಿ ಅಪಾರ ಗೊಂದಲಮಯವಾಗಿದೆ. ಇದರ ಹೊರತಾಗಿ ರಾಜ್ಯ ಶಿಕ್ಷಣ ನೀತಿಯನ್ನು ರೂಪಿಸುವ ಸಂದರ್ಭದಲ್ಲಿ ವಿದ್ಯಾರ್ಥಿಗಳ ನಡುವೆ ನಡೆಸಿರುವ ಈ ಸಮೀಕ್ಷೆಯು ಒಂದು ಶಿಕ್ಷಣ ನೀತಿ ಹೇಗಿರಬೇಕು ಎಂಬುದಕ್ಕೆ ಕೈಗನ್ನಡಿಯಾಗಿದೆ. ನಿಜವಾಗಿಯೂ ಒಂದು ಶಿಕ್ಷಣ ನೀತಿಯನ್ನು ಜನರ ಅಭಿಪ್ರಾಯದ ಮೂಲಕವೇ ರೂಪಿಸಬೇಕು ಎಂಬುದನ್ನು ಈ ಸಮೀಕ್ಷೆಯು ಸಾಬೀತುಪಡಿಸಿದೆ ಎಂದರು. ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ■

# ‘ಎನ್‌ಇಪಿ–2020 ವಿರೋಧಿಸಿ–ಶಿಕ್ಷಣ ಉಳಿಸಿ’ ದಕ್ಷಿಣ ವಲಯಮಟ್ಟದ ವಿದ್ಯಾರ್ಥಿ ಸಮಾವೇಶದ ಕರೆ



ಎನ್‌ಇಪಿ–2020ನ್ನು ವಿರೋಧಿಸಲು ಮತ್ತು ಸಾರ್ವಜನಿಕ ಶಿಕ್ಷಣವನ್ನು ಉಳಿಸಲು, ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆಯು ಚೆನ್ನೈ ನಗರದ ಸರ್ ಪಿ ಟಿ ತ್ಯಾಗರಾಯ ಸಭಾಂಗಣದಲ್ಲಿ ದಕ್ಷಿಣ ವಲಯ ವಿದ್ಯಾರ್ಥಿಗಳ ಸಮಾವೇಶವನ್ನು ಆಯೋಜಿಸಲಾಗಿತ್ತು. ದಕ್ಷಿಣ ವಲಯ ರಾಜ್ಯಗಳಾದ ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಕರ್ನಾಟಕ ಮತ್ತು ಕೇರಳ ರಾಜ್ಯದ ವಿದ್ಯಾರ್ಥಿಗಳು, ಖ್ಯಾತ ಶಿಕ್ಷಣ ತಜ್ಞರು, ಇತಿಹಾಸಕಾರರು ಸಮಾವೇಶದಲ್ಲಿ ಭಾಗವಹಿಸಿದ್ದರು. ಖ್ಯಾತ ಇತಿಹಾಸ ತಜ್ಞ ಪ್ರೊ. ಎ. ಕರುಣಾನಂದನ್ ಮಾತನಾಡಿ, ಭಾರತವು ಎರಡು ರೀತಿಯ ಸಾಂಕ್ರಾಮಿಕಗಳಿಂದ ನರಳಿದೆ, ಒಂದನ್ನು ನಾವು ಹೋಗಲಾಡಿಸಿದೆವು, ಮತ್ತೊಂದು ಇನ್ನೂ ನಮ್ಮೊಂದಿಗೆ ಇದೆ. ಅದೇ ಎನ್‌ಇಪಿ–2020. ರಾಜ್ಯದ ವಿಶ್ವವಿದ್ಯಾನಿಲಯಗಳನ್ನು ದುರ್ಬಲಗೊಳಿಸಿ, ಎನ್‌ಇಪಿ ಮೂಲಕ ವಿದೇಶಿ ವಿಶ್ವವಿದ್ಯಾಲಯವನ್ನು ತರುತ್ತಿರುವುದು ಶಿಕ್ಷಣದ ಮೇಲಿನ ದಾಳಿಯಲ್ಲದೇ ಮತ್ತೇನೂ ಅಲ್ಲ. ಇತಿಹಾಸವನ್ನು ತಿರುಚುವ ಮತ್ತು ಯುವ ಮನಸ್ಸುಗಳನ್ನು ತಪ್ಪು ಮೌಲ್ಯಗಳಿಂದ ಪೀಡಿಸುವ ಪ್ರಯತ್ನ ನಡೆಯುತ್ತಿದೆ. ಶಿಕ್ಷಣ ತಜ್ಞರು, ಶೈಕ್ಷಣಿಕ ಮಂಡಳಿಯಿಂದ ಪಠ್ಯಕ್ರಮವನ್ನು ರೂಪಿಸುವ ದಿನಗಳು ಕಳೆದುಹೋಗಿದ್ದು, ಅಧಿಕಾರಶಾಹಿಯು ಪಠ್ಯಕ್ರಮವನ್ನು ರೂಪಿಸುತ್ತಿರುವುದು ಆಘಾತಕಾರಿ ಸಂಗತಿ ಎಂದರು.

ಎಐಡಿಎಸ್‌ಓ ಅಖಿಲ ಭಾರತ ಅಧ್ಯಕ್ಷರಾದ ವಿ.ಎನ್. ರಾಜಶೇಖರ್, ಇತ್ತೀಚಿನ ದಿನಗಳಲ್ಲಿ ಅನೇಕ ವಿದ್ಯಾರ್ಥಿಗಳು ಆರ್ಥಿಕ ಬಿಕ್ಕಟ್ಟಿನಿಂದ ಕರಾಳ ಭವಿಷ್ಯವನ್ನು ಎದುರಿಸುತ್ತಿದ್ದು, ಉದ್ಯೋಗಕ್ಕೆ ಹೋಗುತ್ತಿದ್ದಾರೆ. ಎನ್‌ಇಪಿ–2020 ನೀತಿಯು ಸರ್ಕಾರಿ ಸಂಸ್ಥೆಗಳನ್ನು ಮುಚ್ಚಲು ಬಹಿರಂಗವಾಗಿ ಕರೆ ನೀಡುತ್ತಿದೆ. ಶಾಲೆಗಳು, ಮತ್ತು ಶಿಕ್ಷಣವನ್ನು ಲಾಭದಾಯಕ ವ್ಯಾಪಾರವನ್ನಾಗಿಸುತ್ತದೆ, ಇದು ಕೇವಲ ಸರ್ಕಾರದ ನೀತಿಯಲ್ಲ, ಇದು ಬಂಡವಾಳಶಾಹಿ ಪರ ನೀತಿಯಾಗಿದ್ದು, ಎಲ್ಲಾ ರಾಜ್ಯ ಸರ್ಕಾರಗಳು ಇದನ್ನು ಜಾರಿಗೆ ತಂದಿವೆ ಎಂದು ತಿಳಿಸಿದರು.

ಆಂಧ್ರಪ್ರದೇಶದ ನಿವೃತ್ತ ಪ್ರಾಂಶುಪಾಲರು, ರಾಜ್ಯ ಮಾನವ ಹಕ್ಕುಗಳ ವೇದಿಕೆಯ ಮುಖಂಡ ಎ. ಚಂದ್ರಶೇಖರ್ ಮಾತನಾಡಿ, ಎನ್‌ಇಪಿ ಹೊಸ ಬಾಟಲಿಯಲ್ಲಿ ಹಳೆಯ ಮದ್ಯದಂತೆ ಇದೆ. 1986ರಲ್ಲಿ ರಾಜೀವ್ ಗಾಂಧಿ ಜಾರಿಗೊಳಿಸಿದ ಎನ್‌ಇಪಿಯಂತೆ ಪ್ರಸ್ತುತ ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಎನ್‌ಇಪಿ ಬಗ್ಗೆಯೂ ಹಲವು ನಿರೀಕ್ಷೆಗಳಿದ್ದವು, ಅವೆಲ್ಲವೂ ಹುಸಿಯಾಗಿವೆ ಎಂದು ಕಳವಳ ವ್ಯಕ್ತಪಡಿಸಿದರು.

ಹೈದರಾಬಾದ್‌ನ ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಪ್ರೊ. ಅಮಂಚಿ ನಾಗೇಶ್ವರರಾವ್ ಮಾತನಾಡಿ, ಪ್ರಧಾನಿ ಮೋದಿ ಸೇರಿದಂತೆ ಪ್ರಸ್ತುತ ಸರ್ಕಾರವು ವಿಜ್ಞಾನವಲ್ಲದ್ದನ್ನು ವಿಜ್ಞಾನವೆಂದು ಬಿಂಬಿಸುತ್ತಿದೆ. ಕೇಂದ್ರವು ಯುಜಿಸಿಗೆ ಶೇ. 64 ರಷ್ಟು ಅನುದಾನವನ್ನು ಕಡಿಮೆ ಮಾಡಿದೆ. ರಾಜ್ಯ ವಿಶ್ವವಿದ್ಯಾನಿಲಯಗಳಿಗೆ ಶೇ.22ರಷ್ಟು ಬಜೆಟ್ ಕಡಿತಗೊಳಿಸಿದೆ. 2015ರಲ್ಲಿ ಶಿಕ್ಷಣಕ್ಕೆ ಬಜೆಟ್ ಹಂಚಿಕೆ ಜಿಡಿಪಿಯ ಶೇ. 4.6 ಆಗಿತ್ತು. ಆದರೆ ಈಗ 2023ರಲ್ಲಿ ಅದನ್ನು ಶೇ. 2.64ಕ್ಕೆ ಇಳಿಸಲಾಗಿದೆ ಎಂದರು.

ಎಐಡಿಎಸ್‌ಓ ಅಖಿಲ ಭಾರತ ಪ್ರಧಾನ ಪ್ರಧಾನ ಕಾರ್ಯದರ್ಶಿ ಸೌರವ್ ಘೋಷ್ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. 5 ರಾಜ್ಯಗಳ ಪ್ರತಿನಿಧಿಗಳು ಮತ್ತು ಭಾರತದ ದಕ್ಷಿಣ ರಾಜ್ಯಗಳ ನೂರಾರು ವಿದ್ಯಾರ್ಥಿಗಳು ಸಮಾವೇಶದಲ್ಲಿ ಭಾಗವಹಿಸಿದ್ದ ಈ ಸಮಾವೇಶದಲಿ ‘ಎನ್‌ಇಪಿ–2020ನ್ನು ವಿರೋಧಿಸಿ, ಸಾರ್ವಜನಿಕ ಶಿಕ್ಷಣವನ್ನು ಉಳಿಸಿ’ ಎಂಬ ಸಮಾವೇಶದ ಸಂದೇಶವನ್ನು ಹರಡಲಾಯಿತು. ■

## ಕೊಬ್ಬರಿ ಖರೀದಿಗೆ ರೈತರ ನೋಂದಣಿ ಪ್ರಕ್ರಿಯೆ ಸ್ಥಗಿತ

# ಎಐಕೆಕೆಎಂಎಸ್ ತೀವ್ರ ಖಂಡನೆ

ಕೊಬ್ಬರಿ ಖರೀದಿಗೆ ಸೂಕ್ತ ವ್ಯವಸ್ಥೆಯನ್ನು ಮಾಡುವಲ್ಲಿ ವಿಫಲವಾದ ಆಡಳಿತವನ್ನು ಖಂಡಿಸಿ, ಬೆಂಬಲ ಬೆಲೆ ನೀಡಿ ಕೊಬ್ಬರಿಯನ್ನು ಖರೀದಿಸಲು ಒತ್ತಾಯಿಸಿ ಫೆ.11ರಂದು ತುಮಕೂರು ಜಿಲ್ಲಾ ಎಐಕೆಕೆಎಂಎಸ್ ಕೆಳಕಂಡ ಹೇಳಿಕೆಯನ್ನು ಬಿಡುಗಡೆ ಮಾಡಿತು:

“ನಾಫೆಡ್ (ನ್ಯಾಷನಲ್ ಅಗ್ರಿಕಲ್ಚರಲ್ ಕೋಆಪರೇಟೀವ್ ಮಾರ್ಕೆಟಿಂಗ್ ಫೆಡರೇಷನ್ ಆಫ್ ಇಂಡಿಯಾ ಲಿ.) ಮೂಲಕ ಕೊಬ್ಬರಿ ಖರೀದಿಗೆ ರಾಜ್ಯದಾಂತ ಪ್ರಕ್ರಿಯೆ ಪ್ರಾರಂಭಗೊಂಡು ಕೇವಲ ಐದು ದಿನಗಳ ಒಳಗೆ ರೈತರ ನೋಂದಣಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಿದ್ದರಿಂದ ಕಲ್ಪತರು ನಾಡು ತುಮಕೂರಿನ ಜೀವನಾಧಾರವಾದ ಕೊಬ್ಬರಿಯ ಬೆಲೆಯು ಮುಕ್ತ ಮಾರುಕಟ್ಟೆಯಲ್ಲಿ ನೆಲಕಚ್ಚಿದ್ದು, ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೂ.13500ಕ್ಕೆ ಖರೀದಿ ನಿರೀಕ್ಷೆಯಲ್ಲಿದ್ದ ರೈತರು ಈಗ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೇವಲ ಐದು ದಿನ ಸಮಯ ನೀಡಿ 62,500 ಮೆಟ್ರಿಕ್ ಟನ್ ಕೊಬ್ಬರಿ ನೋಂದಣಿ ಆಗಿದೆ ಎಂದು ಹೇಳುತ್ತಿದ್ದಾರೆ. ಕಂಪ್ಯೂಟರ್ ಸರ್ವರ್ ಸಮಸ್ಯೆಯಿಂದಾಗಿ ನೋಂದಣಿ ಕಾರ್ಯ ಸರಿಯಾಗಿ ಆಗಿಲ್ಲ. ಬಯೋಮೆಟ್ರಿಕ್ ಲೋಪಗಳಿಂದ ನೋಂದಣಿಯಿಂದ ಅಚೆ ಉಳಿದವರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಪ್ರತಿ ಕೇಂದ್ರದಿಂದ ಸಾವಿರಾರು ರೈತರು ನೋಂದಣಿ ಮಾಡಿಸದೆ ಮನೆಗೆ ತೆರಳಿದರು ಎಂದು ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆಯು (ಎಐಕೆಕೆಎಂಎಸ್) ತೀವ್ರವಾಗಿ ಖಂಡಿಸುತ್ತದೆ. ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರು ಬೆಳೆದಂತಹ ಎಲ್ಲಾ ಬೆಳೆಯನ್ನು ಸಂಪೂರ್ಣವಾಗಿ ಖರೀದಿಸಬೇಕು. ಕೇವಲ ಒಟ್ಟು ಉತ್ಪಾದನೆಯಲ್ಲಿ ಶೇ. 25ರಷ್ಟು ಬೆಳೆ ಖರೀದಿಸುವ ಸರ್ಕಾರದ ನಿರ್ಬಂಧವು ಸಾಕಷ್ಟು ಭ್ರಷ್ಟಾಚಾರಕ್ಕೆ ಎಡೆಮಾಡಿಕೊಟ್ಟಿದೆ ಹಾಗೂ ಬಹು ಸಂಖ್ಯಾ ರೈತರನ್ನು ಈ ಯೋಜನೆಯಿಂದ ದೂರವಿಡುತ್ತದೆ. ಸತತ ನಷ್ಟ ಅನುಭವಿಸುತ್ತಿರುವ ತೆಂಗು ಬೆಳೆಗಾರರರನ್ನು ಇದು ಸಂಪೂರ್ಣ ಆರ್ಥಿಕ ದಿವಾಳಿತನಕ್ಕೆ ತಳ್ಳುತ್ತದೆ. ಉಂಡೆ ಕೊಬ್ಬರಿಯ ಬೆಲೆ ಕುಸಿತದಿಂದ ತೆಂಗು ಬೆಳೆಗಾರರು ಕಳೆದ ಒಂದು ವರ್ಷದಿಂದ ಸತತವಾಗಿ ನಷ್ಟ ಅನುಭವಿಸುತ್ತಿದ್ದಾರೆ. ಜೀವನಾವಶ್ಯಕ ವಸ್ತುಗಳ ಬೆಲೆ ಗಗನಕ್ಕೇರಿದೆ. ಸ್ವಾತಂತ್ರ್ಯ ಮಹೋತ್ಸವದ ಅಮೃತ ಕಾಲದಲ್ಲಿ ಕಲ್ಪತರು ಜಿಲ್ಲೆಯ ರೈತರು ವಿಷ ಕುಡಿಯುವ ಪರಿಸ್ಥಿತಿಗೆ ಬಂದಿದ್ದಾರೆ. ಇದರಿಂದಾಗಿ ಬಡ ರೈತನ ಮೇಲೆ ಈ ವ್ಯವಸ್ಥೆಯ ಆರ್ಥಿಕ ಶೋಷಣೆ ಯಾವುದೇ ಅಡೆತಡೆಯಿಲ್ಲದೆ ನಿರಂತರವಾಗಿ ನಡೆಯುತ್ತಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರಾಜಕೀಯ ಮೇಲಾಟಕ್ಕೆ ಸೀಮಿತವಾಗದೆ ರೈತರ ಹಿತಾಸಕ್ತಿಯನ್ನು ಕಾಪಾಡಬೇಕು. ಈ ಹಿನ್ನೆಲೆಯಲ್ಲಿ ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆಯು (ಎಐಕೆಕೆಎಂಎಸ್) ಕೊಬ್ಬರಿ ಬೆಳೆಗಾರರು ಬೆಳೆದಂತಹ ಎಲ್ಲಾ ಬೆಳೆಯನ್ನು ಸಂಪೂರ್ಣವಾಗಿ ಖರೀದಿಸಬೇಕು ಮತ್ತು ವರ್ಷವಿಡೀ ಖರೀದಿ ಕೇಂದ್ರವನ್ನು ತೆರೆದಿರಬೇಕು ಎಂದು ಒತ್ತಾಯಿಸುತ್ತದೆ.” ■

# 4–ವರ್ಷದ ಪದವಿ ಕೋರ್ಸ್ ಬೇಡ – ಎಐಡಿಎಸ್‌ಓ




ರಾಜ್ಯದ ಪದವಿ ವಿದ್ಯಾರ್ಥಿಗಳ ಮೇಲೆ ಅಪ್ರಜಾತಾಂತ್ರಿಕವಾಗಿ ಹೇರಿರುವ ನಾಲ್ಕು ವರ್ಷದ ಪದವಿ ಕೋರ್ಸ್ ಅನ್ನು ಹಿಂಪಡೆಯಬೇಕೆಂದು ಒತ್ತಾಯಿಸಿ ಎಐಡಿಎಸ್‌ಓ ನೇತೃತ್ವದಲ್ಲಿ ಮಾರ್ಚ್ 7ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟಿಸಲಾಯಿತು. ರಾಜ್ಯದ ಹಲವಾರು ಸರ್ಕಾರಿ ಪದವಿ ಕಾಲೇಜನ್ನು ಪ್ರತಿನಿಧಿಸಿ ನೂರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ■

# ಒಕ್ಕೂಟದೊಳಗೊಂದು ಹಣಕಾಸಿನ ತಿಕ್ಕಾಟ



ಭಾರತ ಒಂದು ಗಣರಾಜ್ಯ. ಹಲವು ಭಾಷೆ, ಸಂಸ್ಕೃತಿಗಳುಳ್ಳ ರಾಜ್ಯಗಳನ್ನು ಹೊಂದಿರುವ, ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿದ ರಾಷ್ಟ್ರ ಭಾರತ. ಆಗಾಗ ಈ ಏಕತೆಗೆ ಭಂಗ ಬರುವಂತಹ ಘಟನೆಗಳು ನಡೆದರೂ ಭಾರತ ಒಂದು ರಾಷ್ಟ್ರವಾಗಿ ಪುಟಿದೆದ್ದು ನಿಂತದ್ದೇ ಹೆಚ್ಚು. ಆದರೆ ಇತ್ತೀಚೆಗೆ ಸುಧಾರಿತ ತೆರಿಗೆ ಹಣ ಸಂಗ್ರಹ, ಸಂಪನ್ಮೂಲ ಕ್ರೋಢೀಕರಣ ಹಾಗೂ ಅದನ್ನು ರಾಜ್ಯಗಳಿಗೆ ಹಂಚಿಕೆ ಮಾಡುವ ನೆಪದಲ್ಲಿ ಹಲವು ವಿವಾದಿತ ಅಂಶಗಳನ್ನೊಳಗೊಂಡ ಹೊಸ ಜಿಎಸ್‌ಟಿ ತೆರಿಗೆ ಪದ್ಧತಿಯನ್ನು ಅಳವಡಿಸಿಕೊಂಡು ಸಂಪನ್ಮೂಲ ಸಂಗ್ರಹಣೆಯನ್ನು ಕೇಂದ್ರೀಕೃತಗೊಳಿಸಿದ ನಂತರ ಆ ಸಂಪನ್ಮೂಲ ಹಂಚಿಕೆಗೆ ಸಂಬಂಧಿಸಿದಂತೆ ಸಾಕಷ್ಟು ಅಪಸ್ವರಗಳು ಕೇಳಿ ಬರತೊಡಗಿದ್ದಂತೂ ನಿಜ. ಈ ವಿಷಯವಾಗಿ ಹಲವಾರು ರಾಜ್ಯಗಳು ಅದರಲ್ಲೂ ಬಹುತೇಕ ದಕ್ಷಿಣದ ರಾಜ್ಯಸರ್ಕಾರಗಳು ಕೇಂದ್ರ ಸರ್ಕಾರದ ತಾರತಮ್ಯ ನೀತಿಯ ವಿರುದ್ಧ ಬಂಡೆದ್ದು ದೆಹಲಿಗೆ ಲಗ್ಗೆ ಇಟ್ಟು ಪ್ರತಿಭಟನೆ ನಡೆಸಿದ ನಂತರ ಈ ವಿಷಯ ವ್ಯಾಪಕ ಚರ್ಚೆಗೆ ಒಳಪಡುತ್ತಿದೆ.

### ಹಣಕಾಸು ಆಯೋಗ

ಹಣಕಾಸು ಆಯೋಗವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಕೆಲವು ಆದಾಯ ಸಂಪನ್ಮೂಲಗಳ ಹಂಚಿಕೆ ಉದ್ದೇಶಕ್ಕಾಗಿಯ ಸಾಂವಿಧಾನಿಕ ಸಂಸ್ಥೆಯಾಗಿದೆ. ಇದನ್ನು ಭಾರತದ ರಾಷ್ಟ್ರಪತಿಗಳು ಸಂವಿಧಾನದ 280ನೇ ವಿಧಿಯ ಪ್ರಕಾರ ನೇಮಿಸುತ್ತಾರೆ. ಕೇಂದ್ರ ಮತ್ತು ರಾಜ್ಯಗಳ ನಡುವಿನ ಹಣಕಾಸು ಸಂಬಂಧಗಳನ್ನು ವ್ಯಾಖ್ಯಾನಿಸಲು ಇದನ್ನು ರಚಿಸಲಾಗುತ್ತದೆ. ಇದು 1951ರಲ್ಲಿ ಮೊದಲ ಬಾರಿಗೆ ರೂಪುಗೊಂಡಿತು.

ಸಂವಿಧಾನದ 280ನೇ ವಿಧಿಯ ಅನುಸಾರ 1953ರಿಂದ ಪ್ರತಿ 5ವರ್ಷಗಳಿಗೊಮ್ಮೆ ರಾಷ್ಟ್ರಪತಿಗಳು ಹಣಕಾಸು ಆಯೋಗವನ್ನು ರಚಿಸಬೇಕಾಗುತ್ತದೆ. ಕೇಂದ್ರ ಮತ್ತು ರಾಜ್ಯಗಳ ನಡುವಿನ ತೆರಿಗೆಗಳ ನಿವ್ವಳ ಆದಾಯ ವಿತರಣೆ, ತೆರಿಗೆಗಳಿಗೆ ಅವರ ಕೊಡುಗೆಯನುಸಾರ ವಿಂಗಡಿಸಲಾಗುತ್ತದೆ. ರಾಜ್ಯಗಳಿಗೆ ಎಷ್ಟು ಸಹಾಯಧನ ನೀಡಬೇಕು ಮತ್ತು ಅದರ ಪ್ರಮಾಣವನ್ನು ಏನು ಎಂಬುದನ್ನು ನಿರ್ಧರಿಸಲಾಗುತ್ತದೆ. ರಾಜ್ಯದ ಪಂಚಾಯತ್ ಮತ್ತು ಪುರಸಭೆಗಳಿಗೆ ಸಂಪನ್ಮೂಲವನ್ನು ಒದಗಿಸುವುದಕ್ಕೆ ಪೂರಕವಾಗಿ ರಾಜ್ಯದ ನಿಧಿಯನ್ನು ಹೆಚ್ಚಿಸಲು ಶಿಫಾರಸುಗಳನ್ನು ಮಾಡಲಾಗುತ್ತದೆ. ಇವು ಸ್ಥೂಲವಾಗಿ ಈ ಆಯೋಗಗಳ ಮುಖ್ಯ ಕಾರ್ಯಗಳಾಗಿರುತ್ತವೆ.

ಹಣಕಾಸು ಆಯೋಗವು ಒಬ್ಬ ಅಧ್ಯಕ್ಷರು ಮತ್ತು ನಾಲ್ಕು ಸದಸ್ಯರನ್ನು ಒಳಗೊಂಡಿರುತ್ತದೆ. ಪ್ರಸ್ತುತ 16ನೇ ಹಣಕಾಸು ಆಯೋಗವು ಕಾರ್ಯನಿರ್ವಹಿಸುತ್ತಿದೆ.

### ಪರ-ವಿರೋಧ ಚರ್ಚೆ

**ಅಂಶ:1** ಹಣಕಾಸು ಆಯೋಗವು ಶಿಫಾರಸ್ಸು ಮಾಡಿದ ಅನುದಾನವನ್ನು ನೀಡುವಲ್ಲಿ, ಬರ ಪರಿಹಾರದ ಮಾನದಂಡಗಳ ಪ್ರಕಾರ ಹಣಕಾಸು ಬಿಡುಗಡೆ ಮಾಡುವಲ್ಲಿ ಕೇಂದ್ರ ಸರ್ಕಾರವು ಪಕ್ಷಪಾತ ಮಾಡುತ್ತಿದೆ ಎನ್ನುವುದು ಒಂದು ತಕರಾರು. ಅಭಿವೃದ್ಧಿ ವಂಚಿತ ಮತ್ತು ಬಡ ರಾಜ್ಯಗಳಿಗೆ ಹೆಚ್ಚಿನ ಅನುದಾನ ದೊರೆಯಬೇಕೆಂಬ ಆಶಯವೇನೋ ಸರಿಯೇ. ಆದರೆ ಇದರೊಂದಿಗೆ ಚೆನ್ನಾಗಿ ಪ್ರಗತಿ ಸಾಧಿಸಿರುವ ರಾಜ್ಯಗಳು ಅನ್ಯಾಯಕ್ಕೊಳಗಾಗಬಾರದು ಎನ್ನುವ ಅಂಶವನ್ನೂ ಗಮನದಲ್ಲಿಟ್ಟುಕೊಳ್ಳದೇ ಹೋದಲ್ಲಿ ಕರ್ನಾಟಕ, ಕೇರಳ, ತಮಿಳುನಾಡು ಮುಂತಾದ ಮುಂದಿರುವ ರಾಜ್ಯಗಳಿಗೆ ಅನ್ಯಾಯವಾಗುತ್ತದೆ ಎನ್ನುವುದು ಒಂದು ವಾದ.

**ಅಂಶ: 2** 'ಒಂದು ದೇಶ, ಒಂದು ತೆರಿಗೆ' ಹೆಸರಿನಲ್ಲಿ ಜಿ.ಎಸ್.ಟಿಯ ಅವೈಜ್ಞಾನಿಕ ಅನುಷ್ಠಾನದಿಂದ ರಾಜ್ಯದ ತೆರಿಗೆ ಸಂಗ್ರಹಣೆಯು ಕಡಿಮೆಯಾಗಿದೆ. ರಾಜ್ಯದ ತೆರಿಗೆ ಸಂಗ್ರಹಣೆಗೆ ಕೇಂದ್ರವು ನಿಗದಿಪಡಿಸಿದ್ದ ಗುರಿ (ಶೇ.14 ರಷ್ಟು ಅಂದಾಜು ಬೆಳವಣಿಗೆ) ತಲುಪಲಾಗಿಲ್ಲ. ಕೇಂದ್ರ ಸರ್ಕರವು ರಾಜ್ಯಗಳಿಗೆ ನೀಡುವ ಜಿಎಸ್‌ಟಿ ಪರಿಹಾರವನ್ನು ನಿಲ್ಲಿಸಿದೆ. ಇದರಿಂದ 2023-24ರವರೆಗೆ ರಾಜ್ಯಕ್ಕೆ ಸುಮಾರು ರೂ. 59,274 ಕೋಟಿ ನಷ್ಟವಾಗಿದೆ ಎನ್ನುವುದು ಇನ್ನೊಂದು ವಾದ.

**ಅಂಶ: 3** ಹಣಕಾಸು ಆಯೋಗವು ಕೇಂದ್ರ ಹಾಗೂ ರಾಜ್ಯಗಳ ನಡುವೆ ತೆರಿಗೆ ಹಂಚಿಕೆಗೆ ಶಿಫಾರಸ್ಸು ನೀಡುತ್ತದೆ. ಆದರೆ ಕೇಂದ್ರ ಸರ್ಕಾರವು ತರಿಗೆಯ ಜೊತೆಗೆ ಸೆಸ್ ಮತ್ತು ಸರ್‌ಚಾರ್ಜ್‌ಗಳನ್ನು ವಿಧಿಸಿ ಸಂಗ್ರಹಿಸುವ ಹಣದಲ್ಲಿ ರಾಜ್ಯಗಳಿಗೆ ಪಾಲಿರುವುದಿಲ್ಲ. ಇದರಿಂದಾಗಿ 2017-18 ರಿಂದ 2023-24 ರವರೆಗೆ ಸುಮಾರು ರೂ. 45,322 ಕೋಟಿ ರಾಜ್ಯಕ್ಕೆ ನಷ್ಟವಾಗಿದೆ ಎನ್ನುವುದು ಮತ್ತೊಂದು ಮುಖ್ಯವಾದ ವಾದ.

**ಅಂಶ: 4** ಅವೈಜ್ಞಾನಿಕವಾದ ಜಿ.ಎಸ್.ಟಿ ವ್ಯವಸ್ಥೆ, ಸೆಸ್ ಮತ್ತು ಸರ್‌ಚಾರ್ಜ್‌ಗಳ ಮೂಲಕ ರಾಜಸ್ವ ಸಂಗ್ರಹದಿಂದಾಗಿ ರಾಜ್ಯದ ಪಾಲಿನಲ್ಲಿ ಆದ ನಷ್ಟದ ಬಗ್ಗೆ, 15ನೇ ಹಣಕಾಸು ಆಯೋಗದ ಶಿಫಾರಸ್ಸುಗಳಂತೆ ವಿಶೇಷ ಹಾಗೂ ರಾಜ್ಯ ಕೇಂದ್ರಿತ ಅನುದಾನವನ್ನು ನೀಡದಿರುವುದು, ಹಾಗೂ 15 ನೇ ಹಣಕಾಸು ಆಯೋಗವು ಹಿಂದಿಗಿಂತ ಶೇ 23ರಷ್ಟು ಕಡಿಮೆ ಪಾಲನ್ನು ನೀಡಿರುವುದು-ಇವೆಲ್ಲವುಗಳಿಂದಾಗಿ ಕರ್ನಾಟಕಕ್ಕೆ ಸುಮಾರು ರೂ. 1,78,180 ಕೋಟಿ ನಷ್ಟ ಉಂಟಾಗಿದೆ ಎನ್ನುವುದು ಮಗದೊಂದು ವಾದ.

ಈ ಎಲ್ಲಾ ಅಂಶಗಳ ಕುರಿತು ರಾಜ್ಯ ಸರ್ಕಾರವು ಇತ್ತೀಚಿನ ಶಾಸನಸಭೆಯ ಅಧಿವೇಶನದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ನಿರ್ಣಯ ಮಂಡಿಸಿದುದು ಗಮನಾರ್ಹ. ಆ ಸಮಯದಲ್ಲಿ ವಿರೋಧ ಪಕ್ಷಗಳು ಸದನವನ್ನು ಬಹಿಷ್ಕರಿಸಿದ್ದವು.

ಇನ್ನೊಂದೆಡೆ, ಈ ಎಲ್ಲಾ ಅಂಶಗಳ ಕುರಿತು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ವ್ಯತಿರಿಕ್ತ ಹೇಳಿಕೆ ನೀಡುತ್ತಿದ್ದಾರೆ. 15ನೇ ಹಣಕಾಸು ಆಯೋಗವು ಕರ್ನಾಟಕ ರಾಜ್ಯಕ್ಕೆ ರೂ. 5900 ಕೋಟಿ ವಿಶೇಷ ಅನುದಾನ ನೀಡಲು ಮಧ್ಯಂತರ ವರದಿಯಲ್ಲಿ ಶಿಫಾರಸ್ಸು ಮಾಡಿತ್ತು. ಆದರೆ ಅಂತಿಮ ವರದಿಯಲ್ಲಿ ಇದರ ಪ್ರಸ್ತಾಪ ಇಲ್ಲ. ಹಾಗಾಗಿ ಆಯೋಗದ ಶಿಫಾರಸ್ಸಿನಂತೆ ರಾಜ್ಯಕ್ಕೆ ತೆರಿಗೆ ಪಾಲು ನೀಡಲಾಗಿದೆ. ಕೇಂದ್ರ ಸರ್ಕಾರದ ಪಾತ್ರವೇನೂ ಇದರಲ್ಲಿ ಇಲ್ಲ ಎಂದು ನುಣುಚಿಕೊಳ್ಳುವ ಮೂಲಕ ಹಣಕಾಸು ಹಂಚಿಕೆಯಲ್ಲಿ ರಾಜ್ಯಕ್ಕಾದ ಅನ್ಯಾಯದ ಬಗ್ಗೆ ಬೇಜವಾಬ್ದಾರಿಯ ಮಾತನಾಡಿದ್ದಾರೆ.

### ದಕ್ಷಿಣ ಧ್ರುವದಿಂ.. ಉತ್ತರ ಧ್ರುವಕೂ...

ಕಳೆದ ವರ್ಷದ ವಿಧಾನಸಭಾ ಚುನಾವಣಾ ಪ್ರಚಾರದ ಸಂದರ್ಭದಲ್ಲಿ, ಬಿಜೆಪಿ ನಾಯಕರೊಬ್ಬರು 'ಬಿಜೆಪಿಯನ್ನು ಗೆಲ್ಲಿಸದಿದ್ದರೆ, ಕೇಂದ್ರದ ಅನುದಾನ ಸಿಗಲಾರದು' ಎಂದು ಜನರಿಗೆ ಎಚ್ಚರಿಕೆ ಕೊಟ್ಟಿದ್ದರು. ಅಲ್ಲದೆ, ಬಿಜೆಪಿಯಾಗಲಿ ಕಾಂಗ್ರೆಸ್ ಆಗಲಿ ಮಾತುಮಾತಿಗೆ ಡಬಲ್ ಇಂಜಿನ್ ಸರ್ಕಾರ (ಕೇಂದ್ರ ಮತ್ತು ರಾಜ್ಯಗಳಲ್ಲಿ ಒಂದೇ ಪಕ್ಷದ ಸರ್ಕಾರ) ಇದ್ದರೆ ಲಾಭ ಜಾಸ್ತಿ ಎನ್ನುವ ವಾದ ಹರಿಬಿಡುತ್ತವೆ. ಇದೊಂದು ಪ್ರಜಾಪ್ರಭುತ್ವ ವಿರೋಧಿ ವಾದ ಹಾಗೂ ಅನೈತಿಕ ಘೋಷಣೆ. ಇದು ಭಾರತ ದೇಶದ ಒಕ್ಕೂಟ ವ್ಯವಸ್ಥೆಗೆ ಮಾಡಿದ ಅವಮಾನ. ಕೇಂದ್ರ ಹಾಗೂ ರಾಜ್ಯಗಳೆರಡಲ್ಲೂ ನಮ್ಮನ್ನು ಗೆಲ್ಲಿಸದಿದ್ದರೆ ನಿಮಗೆ ಸಿಗಬೇಕಾದ ಅನುದಾನ ಕೊಡುವುದಿಲ್ಲ ಎನ್ನುವ ಬ್ಲ್ಯಾಕ್‌ಮೇಲ್ ರಾಜಕಾರಣ. ರಾಜ್ಯದ ಚುನಾಯಿತ ಸರ್ಕಾರವೊಂದು ಕೇಂದ್ರದ ಬಳಿ ಈ ರೀತಿ ಕೈ ಒಡ್ಡಿ ಬೇಡಬೇಕಾಗಿ ಬರುವುದೇ ಪ್ರಜಾಪ್ರಭುತ್ವದ ಅಣಕ.


ಕೇಂದ್ರ ಸರ್ಕಾರವು ಯೋಜನಾ ಆಯೋಗದ ಬದಲಿಗೆ ನೀತಿ ಆಯೋಗವನ್ನು ( NITI- National Institution for Transforming India) 2015ರ ಜನವರಿ 2ರಂದು ಸ್ಥಾಪಿಸಿತು. ಪ್ರಧಾನಿ ಅಧ್ಯಕ್ಷತೆಯಲ್ಲಿ ಸ್ಥಾಪಿತವಾದ ಈ ಆಯೋಗದ ಘೋಷಣೆಯೇನೋ ಚೆನ್ನಾಗಿದೆ. ಒಕ್ಕೂಟ ವ್ಯವಸ್ಥೆ ಬಲಪಡಿಸುವ ಜೊತೆಗೆ ವಿವಿಧ ರಾಜ್ಯಗಳ ಸಬಲೀಕರಣದ ಪ್ರಸ್ತಾಪ ಚೆನ್ನಾಗಿದೆ. ಆದರೆ ನೀತಿ ಆಯೋಗಕ್ಕೆ ಸ್ವತಂತ್ರವಾಗಿ ಅನುದಾನ ಹಂಚಿಕೆ ಮಾಡುವ ಅಧಿಕಾರವಿಲ್ಲ. ಆ ಅಧಿಕಾರ ಕೇಂದ್ರದ ವಿತ್ತ ಸಚಿವರಿಗಿದೆ. ವಾಸ್ತವದಲ್ಲಿ ಕೇಂದ್ರ-ರಾಜ್ಯಗಳ ಸಹಭಾಗಿತ್ವದ ಯೋಜನೆಯ ನೆಪದೊಂದಿಗೆ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದ ಕಾರ್ಯದಲ್ಲಿ ಮೂಗು ತೂರಿಸುತ್ತಿದೆ. ಸ್ಥಳೀಯ ಅವಶ್ಯಕತೆಯ ಹೆಸರಿನಲ್ಲಿ ಕೇಂದ್ರ ಸರ್ಕಾರವು ತಮ್ಮ ಪಕ್ಷ ಅಥವಾ ತಮ್ಮ ಮಿತ್ರ ಪಕ್ಷ ಅಧಿಕಾರ ಇರುವೆಡೆಯಲ್ಲಿ ಅಧಿಕ ಅನುದಾನ ಸುರಿದು, ವಿರೋಧ ಪಕ್ಷ ಅಧಿಕಾರವಿರುವ ರಾಜ್ಯಗಳಲ್ಲಿ ಅನುದಾನ ನೀಡುವಲ್ಲಿ ವಿಳಂಬ, ಅನುದಾನ ಕಡಿತ ಹಾಗೂ ಹಲವಾರು ನಿಬಂಧನೆಗಳ ಹೇರಿಕೆಯ ಮೂಲಕ ಮಲತಾಯಿ ಧೋರಣೆ ತೋರುತ್ತಿರುವುದು ಸ್ಪಷ್ಟವಾಗಿ ಕಾಣಿಸುತ್ತಿದೆ. ಇದು ಈಗ ಮುಂದುವರೆದ ದಕ್ಷಿಣ ರಾಜ್ಯಗಳ ಆದಾಯವನ್ನು ಹಿಂದುಳಿದ ಎನ್ನುವ ಹೆಸರಿನಲ್ಲಿ ಉತ್ತರದ ರಾಜ್ಯಗಳ ಮಡಿಲು ತುಂಬಿಸಲಾಗುತ್ತಿದೆ ಎನ್ನುವ ಅಭಿಪ್ರಾಯ ಗಾಢವಾಗಿ ಎಲ್ಲರನ್ನು ಕಾಡುತ್ತಿದೆ. ( ಚಿತ್ರ 1)

ಅಂತಿಮವಾಗಿ ಇದು ಏನನ್ನು ತೋರಿಸಿ ಕೊಡುತ್ತದೆ ಎಂದರೆ, ಆಳ್ವಿಕ ಬಂಡವಾಳಶಾಹಿ ಪಕ್ಷಗಳು ಪ್ರಜಾಪ್ರಭುತ್ವದ ಬೋರ್ಡ್ ಹಾಕಿಕೊಂಡು, ಒಕ್ಕೂಟ ವ್ಯವಸ್ಥೆಯ ಸಬಲೀಕರಣದ ಮಂತ್ರ ಹೇಳುತ್ತಾ, ತಮ್ಮ ತಾಳಕ್ಕೆ ತಕ್ಕಂತೆ ಕುಣಿಯುವವರಿಗೆ ಮಣೆ ಹಾಕುವುದು ಗೋಚರವಾಗುತ್ತದೆ. ಇದಕ್ಕೆ ಕಾಂಗ್ರೆಸ್ಸೂ ಹೊರತಲ್ಲ. ಸ್ವಾತಂತ್ರ್ಯಾನಂತರದ ಭಾರತದ ಇತಿಹಾಸ ಪುಟಗಳನ್ನೊಮ್ಮೆ ಅವಲೋಕಿಸಿದಲ್ಲಿ, ಆ ಪಕ್ಷವೂ ಮಾಡಿದ ಇಂತಹ ಕುಟಿಲ ತಂತ್ರಗಳು ಪುಟಗಳೆಡೆಯಿಂದ ಇಣುಕುತ್ತಾ 'ನಾನೇನೂ ಕಮ್ಮಿ ಇಲ್ಲ' ಎನ್ನುವಂತೆ ಗಹಗಹಿಸಿ ನಗುತ್ತಿವೆ.

### ಅಭಿವೃದ್ಧಿ ಆಗುತ್ತಿದೆಯೇ?

ಅಭಿವೃದ್ಧಿ ಅಂದರೇನು? ಅಭಿವೃದ್ಧಿಯ ಮಾನದಂಡಗಳಲ್ಲೇ ದೊಡ್ಡ ಹುಳುಕು ಇರುವುದು ಸುಸ್ಪಷ್ಟ. ಗ್ಯಾರಂಟಿಗಳಿಗೆ ಹಣ ಮೀಸಲಿಡುವುದರ ಮೂಲಕ ದುಡ್ಡನ್ನು ಪೋಲು ಮಾಡುತ್ತಿದ್ದಾರೆ ಎಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ರಾಜ್ಯ ಸರ್ಕಾರದ ಮೇಲೆ ಆರೋಪಿಸಿದ್ದಾರೆ. ಜೊತೆಗೆ ಅವರ ವ್ಯಾಖ್ಯಾನದಲ್ಲಿ ಜಾಗತಿಕ ಹೂಡಿಕೆ ಸಮಾವೇಶಗಳು ನಡೆದು ದೊಡ್ಡ ದೊಡ್ಡ ಬಂಡವಾಳಶಾಹಿಗಳು ಹೂಡಿಕೆ ಮಾಡಿದರೇನೇ ಸಾರ್ಥಕ ಎನ್ನುವ ಭಾವನೆ ಇದೆ. ಆದರೆ ಇವರಿಬ್ಬರೂ ಅಂದರೆ ಕಾಂಗ್ರೆಸ್ ಆಗಲಿ, ಬಿಜೆಪಿ ಆಗಲಿ, ಜನರ ಮೂಲಭೂತ ಅವಶ್ಯಕತೆಗಳಾದ ಉದ್ಯೋಗ, ಶಿಕ್ಷಣ, ವಸತಿ, ಆರೋಗ್ಯ, ಬೆಲೆ ನಿಯಂತ್ರಣ, ವೈಜ್ಞಾನಿಕ ಕೃಷಿ ನೀತಿ ಮುಂತಾದ ವಿಷಯಗಳನ್ನು ಪೂರೈಸುವುದರ ಕುರಿತು ನಿರ್ಲಿಪ್ತ ಮೌನವಹಿಸುತ್ತವೆ. ಸರ್ವ ಸಮಸ್ಯೆಗಳಿಗೂ ಖಾಸಗೀಕರಣವೇ ಪರಿಹಾರ ಎನ್ನುವುದು ಇವರ ಮೂಲ ಮಂತ್ರ. ಷಟ್ಪಥ, ಚತುಷ್ಪಥ ರಸ್ತೆ ನಿರ್ಮಿಸಿ ಟೋಲ್ ಮೂಲಕ ಹಣ ಕೊಳ್ಳೆ ಹೊಡೆಯುವುದು ಇವರ ಪ್ರಕಾರ ಅಭಿವೃದ್ಧಿ, ಕಟ್ಟಡ ಕಟ್ಟಿ ಪಾಳು ಬಿಡುವುದು ಇವರ ಪ್ರಕಾರ ಅಭಿವೃದ್ಧಿ, ಖಾಸಗಿ ಮೆಡಿಕಲ್ ಕಾಲೇಜುಗಳು, ಇಂಜಿನಿಯರಿಂಗ್ ಕಾಲೇಜುಗಳ ಮೂಲಕ ಬಡಜನರ ಜೇಬಿಗೆ ಕನ್ನ ಹಾಕುವುದು ಇವರ ಪ್ರಕಾರ ಅಭಿವೃದ್ಧಿ, ಅಲ್ಲೊಂದು-ಇಲ್ಲೊಂದು ಗ್ಯಾರಂಟಿಗಳು, ಉಚಿತ ಸೇವೆಗಳನ್ನು ಕೊಡುವುದರ ಮೂಲಕ ಅಮಾಯಕ ಬಡಜನರ ಮೂಗಿಗೆ ತುಪ್ಪ ಸವರಿ ಉಪವಾಸ ಕೆಡವುದೇ ಇವರ ಪ್ರಕಾರ ಅಭಿವೃದ್ಧಿ. ಇದನ್ನು ಬದಲಿಸದಿದ್ದರೆ ದೇಶಕ್ಕೆ ಉಳಿಗಾಲವಿಲ್ಲ.

ಪುಟ 11 ಕ್ಕೆ



( ಚಿತ್ರ 1)

### ತುಮಕೂರು: ಒಕ್ಕಲೆಬ್ಬಿಸುವ ಕುಟಿಲ ನೀತಿಯ ವಿರುದ್ಧ

# ಬಗರ್ ಹುಕುಂ ಸಾಗುವಳಿದಾರರ ಪ್ರತಿಭಟನೆ

ರಾಜ್ಯದೆಲ್ಲೆಡೆ ಅರಣ್ಯ ಇಲಾಖೆಯ ಅಧಿಕಾರಿಗಳು ಅರಣ್ಯವಾಸಿಗಳನ್ನು, ಅದರಲ್ಲೂ ಮುಖ್ಯವಾಗಿ ಅರಣ್ಯದಂಚಿನ ಬಗರ್ ಹುಕುಂ ಸಾಗುವಳಿದಾರರ ಮೇಲೆ ವಿಪರೀತ ಆಕ್ರಮಣಗಳನ್ನು ನಡೆಸುತ್ತಿದ್ದಾರೆ. ಅರಣ್ಯ ಕಾಯ್ದೆಯ ಹೆಸರಿನಲ್ಲಿ ಮತ್ತು ಓಬೀರಾಯನ ಕಾಲದ, ಅಂದರೆ ಮೈಸೂರು ಮಹಾರಾಜರ ಕಾಲದ ದಾಖಲೆಗಳನ್ನು ಹಿಡಿದುಕೊಂಡು, ಸಾಗುವಳಿ ಮಾಡುತ್ತಿರುವ ರೈತರನ್ನು ನಿರ್ದಯವಾಗಿ ಜಮೀನಿನಿಂದ ಹೊರದೂಡುತ್ತಿದ್ದಾರೆ. ಹಲವಾರು ದಶಕಗಳಿಂದ ಅಂದರೆ ಸುಮಾರು ನಾಲ್ಕು ತಲೆಮಾರುಗಳಿಂದ ಸಾಗುವಳಿ ಮಾಡಿಕೊಂಡು ಬಂದಿರುವವರನ್ನು, ಸರ್ಕಾರದಿಂದಲೇ ಮಂಜೂರಾತಿ ಪಡೆದಿರುವವರು ಮತ್ತು ಖರೀದಿ ಮಾಡಿ ಬೇಸಾಯ ಮಾಡುತ್ತಿರುವವರನ್ನೂ ಬಿಡದೆ ಎಲ್ಲಾ ರೈತರನ್ನು ಒಕ್ಕಲೆಬ್ಬಿಸುತ್ತಿದ್ದಾರೆ. ಹಲವು ಕಡೆಗಳಲ್ಲಿ ಅವರ ಮೇಲೆ ದೈಹಿಕ ಹಲ್ಲೆಗಳೂ ನಡೆದಿವೆ. ಅಂತೆಯೇ ಇದರ ವಿರುದ್ಧ ರಾಜ್ಯದಾದ್ಯಂತ ಹೋರಾಟಗಳು ನಡೆಯುತ್ತಿವೆ!

ತಿಪಟೂರಿನ ಹೊನ್ನವಳ್ಳಿ ಹೋಬಳಿಯ ಹಾಲ್ಕುರಿಕೆ ಗ್ರಾಮದ ಅಮೃತಮಹಲ್ ಕಾವಲ್ ಎಂದೇ ಹೆಸರಿರುವ ಸರ್ವೇ ನಂ.1 ರಲ್ಲಿ ಎಲ್ಲಾ ಅಧಿಕೃತ ದಾಖಲೆಗಳನ್ನು ಹೊಂದಿರುವ ರೈತರೂ ಸೇರಿದಂತೆ ಸಾಗುವಳಿದಾರರಿಗೆ ನೋಟೀಸು ಕೊಡುತ್ತಾ ಜಮೀನು ತನ್ನದೆಂದು ಅರಣ್ಯ ಇಲಾಖೆ ಹೇಳುತ್ತಿದೆ. ಇದು ಇಲಾಖೆಯು ರೈತರ ಮೇಲೆ ನಡೆಸಿರುವ ಅತಿಕ್ರಮಣ! ಇದರ ವಿರುದ್ಧ ಎಐಕೆಕೆಎಂಎಸ್ ನಿರಂತರವಾಗಿ ಹೋರಾಟಗಳನ್ನು ನಡೆಸಿಕೊಂಡು ಬಂದಿದೆ.

ತಿಪಟೂರು ತಾಲೂಕು ತಹಸೀಲ್ದಾರ್ ಮತ್ತು ಉಪವಿಭಾಗಾಧಿಕಾರಿಗಳಿಗೆ ಪದೇ ಪದೇ ಸಮಸ್ಯೆಯನ್ನು ತಿಳಿಸಿದ್ದರೂ ಕೂಡ ಅರಣ್ಯ ಇಲಾಖೆಯ ಕಾಟ ತಪ್ಪಿರಲಿಲ್ಲ. ಪ್ರತಿಭಟನೆಯ ಸಂದರ್ಭದಲ್ಲಿ ಕೊಟ್ಟ ಮಾತನ್ನು ಅವರು ಉಳಿಸಿಕೊಳ್ಳುತ್ತಿರಲಿಲ್ಲ. ಅಲ್ಲದೆ ಕಂದಾಯ ಇಲಾಖೆಯ ಜೊತೆ ಜಂಟಿ ಸರ್ವೇ ಕೂಡ ಮಾಡಿಕೊಳ್ಳಲಿಲ್ಲ. ಆದ್ದರಿಂದ ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆ (ಎಐಕೆಕೆಎಂಎಸ್) ನೇತೃತ್ವದಲ್ಲಿ ಫೆಬ್ರವರಿ 8 ರಂದು, ಬಗರ್ ಹುಕುಂ ಸಾಗುವಳಿದಾರರು ತುಮಕೂರಿನ ಟೌನ್‌ಹಾಲ್‌ನಿಂದ ಮೆರವಣಿಗೆಯಲ್ಲಿ ಸಾಗಿ, ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಪ್ರತಿಭಟನೆ ನಡೆಸಿದರು. ಸ್ಥಳಕ್ಕೆ ಆಗಮಿಸಿದ ಅಪರ ಜಿಲ್ಲಾಧಿಕಾರಿಗಳು ಮನವಿ ಪತ್ರವನ್ನು ಸ್ವೀಕರಿಸಿ ಕೂಡಲೇ ಅರಣ್ಯ ಮತ್ತು ಕಂದಾಯ ಇಲಾಖೆಗಳ ಜಂಟಿ ಸರ್ವೇಯನ್ನು ಮಾಡಿಸಿ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂದು ಭರವಸೆ ನೀಡಿದರು. ಹೀಗಾಗಿ ಸಾಗುವಳಿದಾರರು ಅರಣ್ಯ ಇಲಾಖೆಯ ಕಿರುಕುಳ ಕೊನೆಗಾಣುತ್ತದೆಯೆಂಬ ಆಶಯದಿಂದ ಎದುರು ನೋಡುತ್ತಿದ್ದಾರೆ! ■

# ಒಕ್ಕೂಟದೊಳಗೊಂದು ಹಣಕಾಸಿನ ತಿಕ್ಕಾಟ

ಪುಟ 10ರಿಂದ

### ಫೆಡರಲಿಸಂ: ಸೋವಿಯತ್ ರಷ್ಯಾ ಮಾದರಿ

ಲೆನಿನ್ ನೇತೃತ್ವದಲ್ಲಿ ರಷ್ಯಾದಲ್ಲಿ ಕ್ರಾಂತಿ ನೆರವೇರಿ ಕಾರ್ಮಿಕ ರಾಜ್ಯ ಆರಂಭವಾದ ನಂತರ ರಷ್ಯಾದ ಸುತ್ತಮುತ್ತಲಿನ ಹಲವಾರು ಪ್ರಾಂತ್ಯಗಳಲ್ಲಿ ಬೊಲ್ಶಿವಿಕ್ ನೇತೃತ್ವದ ರಷ್ಯಾದ ಮೇಲೆ ಗಾಢವಾದ ನಂಬಿಕೆ ಮೂಡಿತು. 1922 ರಲ್ಲಿ ರಷ್ಯಾ, ಬೆಲರೂಸ್, ಉಕ್ರೇನ್ , ಜಾರ್ಜಿಯಾ, ಅಜರ್ಬೈಜಾನ್ ಹಾಗೂ ಅರ್ಮೇನಿಯಾ ಪ್ರಾಂತಗಳನ್ನೊಳಗೊಂಡ ಸೋವಿಯತ್ ಸೋಷಲಿಸ್ಟ್ ಒಕ್ಕೂಟ ರಚನೆಯಾಯಿತು. ಆ ನಂತರ ಬೆಳೆದು 15 ಪ್ರಾಂತ್ಯಗಳನ್ನೊಳಗೊಂಡಿತು. 11 ವಿಭಾಗಗಳಲ್ಲಿ ಸುಮಾರು 130 ಜನಾಂಗೀಯ ಗುಂಪುಗಳನ್ನೊಳಗೊಂಡಿತ್ತು. ಆರಂಭದಲ್ಲಿ ಲೆನಿನ್ ನೇತೃತ್ವದಲ್ಲಿ ನಂತರ ಸ್ಟಾಲಿನ್ ಅವರ ನೇತೃತ್ವದಲ್ಲಿ ಒಂದು ಪ್ರಬಲ ಹಾಗೂ ಸುಭದ್ರ ಒಕ್ಕೂಟ ರಾಷ್ಟ್ರವಾಗಿ ಹೊರಹೊಮ್ಮಿತು. ಒಕ್ಕೂಟದಲ್ಲಿ ಭಾಗಿಯಾದ ಪ್ರಾಂತ್ಯಗಳ ಮೇಲೆ ಯಾವುದೇ ಒತ್ತಡವಿರಲಿಲ್ಲ. ಅವರಿಗೆ ಅವರ ಪ್ರಾಂತ್ಯದ ನಿಖರವಾದ ಗಡಿ, ಮಾತೃ ಭಾಷೆ, ಸ್ಥಳೀಯ ಭಾಷೆಯ ಶಾಲೆಗಳು, ಸ್ಥಳೀಯ ಸಂಸ್ಕೃತಿಯನ್ನು ಬಿಂಬಿಸುವ ಸಾಂಸ್ಕೃತಿಕ ಸಂಘಟನೆಗಳಿಗೆ ಉತ್ತೇಜನ ನೀಡುತ್ತಾ ಸಮಾಜವಾದಿ ಮೌಲ್ಯವನ್ನು ಪಡಿಮೂಡಿಸುವ ಜೊತೆಗೆ ಈ ಮೌಲ್ಯಗಳ ಆಚರಣೆಗೆ ಪ್ರೋತ್ಸಾಹ ನೀಡುವುದರ ಮೂಲಕ ಜನರ ವೈಚಾರಿಕ ಮತ್ತು ಸಾಂಸ್ಕೃತಿಕ ಮಟ್ಟವನ್ನು ಮೇಲೆತ್ತುವ ಕಾರ್ಯವನ್ನು ಕೈಗೆತ್ತಿಕೊಳ್ಳಲಾಯಿತು. ಮೂಲಭೂತ ಸೌಕರ್ಯಗಳ ಅಭಿವೃದ್ಧಿಯನ್ನು ಯಾವುದೇ ತಾರತಮ್ಯವಿಲ್ಲದೇ ಎಲ್ಲಾ ಪ್ರ್ಯಾಂತದಲ್ಲಿ ಸಮಾನವಾಗಿ ಕೈಗೆತ್ತಿಕೊಳ್ಳಲಾಯಿತು. ಕೃಷಿ ಹಾಗೂ ಕೈಗಾರಿಕೆಗಳಿಗೆ ಮಹತ್ವ ನೀಡಲಾಯಿತು. ಅಲ್ಲಿನ ಹೊಸ ಆರ್ಥಿಕ ನೀತಿಗಳು, ಪಂಚವಾರ್ಷಿಕ ಯೋಜನೆಗಳು, ಸಹಕಾರಿ ಕೃಷಿ ನೀತಿಗಳು, ನೈಜ ಅಭಿವೃದ್ಧಿಯ ಜೊತೆಗೆ ಕಲ್ಯಾಣ ಯೋಜನೆಗಳು ಇಂದಿಗೂ ಜಗತ್ತಿಗೆ ಮಾದರಿಯಾಗಿವೆ. ಒಟ್ಟಾರೆಯಾಗಿ ಲೆನಿನ್ ಹಾಗೂ ಸ್ಟಾಲಿನ್ ನೇತೃತ್ವದಲ್ಲಿ ಇಡೀ ಸೋವಿಯತ್ ಒಕ್ಕೂಟ ಅಕ್ಷರಶ: ಒಂದು ದೇಶವಾಗಿ ಬೆಳೆದು ನಿಂತಿತು. ನೈಜ ಅರ್ಥದಲ್ಲಿ ಜಾಗತಿಕ ಶಕ್ತಿ ಆಯಿತು. ಒಂದು ಒಕ್ಕೂಟ ವ್ಯವಸ್ಥೆ ಒಗ್ಗೂಡಲು ಅಂತಹ ಒಂದು ಇಚ್ಛಾ ಶಕ್ತಿ ಬೇಕಿದೆ.

### ಒಕ್ಕೂಟ ವ್ಯವಸ್ಥೆ ನೈಜವಾಗಿ ಒಗ್ಗೂಡಬೇಕಿದೆ

ಮತ ಮತ್ತು ಮತೀಯ ರಾಜಕಾರಣವೇ ಪ್ರಬಲವಾಗಿರುವ ಈ ಸಂದರ್ಭದಲ್ಲಿ ಭಾರತದ ರಾಜಕೀಯದಲ್ಲಿ ಪ್ರಾದೇಶಿಕ ಪಕ್ಷಗಳೂ ನಿರ್ಣಾಯಕ ಪಾತ್ರವಹಿಸುತ್ತಿವೆ. ಇದಕ್ಕೆ ಪ್ರಮುಖವಾದ ಕಾರಣ ರಾಜ್ಯದಿಂದ ರಾಜ್ಯಕ್ಕೆ ಇರುವ ಅಸಮಾನತೆಗಳು. ಇವು ಆಯಾ ಭಾಗದ ಅಸಮಾಧಾನಕ್ಕೆ ಕಾರಣವಾಗುತ್ತಿವೆ. ಇದರಿಂದ ಉಂಟಾದ ಅಭದ್ರತೆ ಆಯಾ ರಾಜ್ಯಗಳ ಪ್ರಾದೇಶಿಕ ಪಕ್ಷಗಳ ಬೆಳವಣಿಗೆಗೆ ಕಾರಣವಾಗಿವೆ. ಆಯಾ ಭಾಗದ ಪ್ರಾದೇಶಿಕ ಸಂಪತ್ತಿನ ಮೇಲೆ ಕಣ್ಣಿಟ್ಟ ಪ್ರಾದೇಶಿಕ ಬಂಡವಾಳಿಗರು, ಆ ಪ್ರಾದೇಶಿಕ ಪಕ್ಷಗಳ ಮೇಲೆ ಕೃಪಾಕಟಾಕ್ಷ ಬೀರುತ್ತಿದ್ದಾರೆ. ಇನ್ನು ರಾಷ್ಟ್ರೀಯ ಪಕ್ಷಗಳು ಎಂದು ಬಿರುದು ಹೊತ್ತ ಕಾಂಗ್ರೆಸ್, ಬಿಜೆಪಿ ಮುಂತಾದ ಬೂರ್ಜ್ವಾ ಪಕ್ಷಗಳು, ಸಿಪಿಎಂ, ಸಿಪಿಐ ಮುಂತಾದ ಪೆಟಿ ಬೂರ್ಜ್ವಾ ಪಕ್ಷಗಳು ಈ ಅಸಮಾನತೆ, ಅಸಮಾಧಾನಗಳನ್ನು ಮತಬ್ಯಾಂಕ್‌ಗಳನ್ನಾಗಿಸುವುತ್ತ ತಮ್ಮ ಗಮನವನ್ನು ಕೇಂದ್ರೀಕರಿಸಿವೆ. ಹಾಗಾಗಿ ಭಾರತ ಒಂದು ನೈಜ ಒಕ್ಕೂಟ ರಾಷ್ಟ್ರವಾಗುವಲ್ಲಿ, ಇನ್ನೂ ಸಾಕಷ್ಟು ದೂರದ ಹಾದಿ ಕ್ರಮಿಸಬೇಕಿದೆ. ಅಲ್ಲಿಯವರೆಗೂ ಜನರ ಐಕ್ಯತೆ ಛಿದ್ರವಾಗದಂತೆ ಕಾಪಾಡಿಕೊಂಡು ಭಾರತೀಯರನ್ನು ಒಗ್ಗೂಡಿಸುವಲ್ಲಿ ಪ್ರಜ್ಞಾವಂತರ ಪಾತ್ರ ಹಿರಿದಾಗಿದೆ. 'ವಸುದೈವ ಕುಟುಂಬಕಂ' ಎಂದು ಪಠಿಸುತ್ತಲೇ ಜನರನ್ನು ಭಾಷೆಯ ಹೆಸರಿನಲ್ಲಿ, ಪ್ರಾಂತದ ಹೆಸರಿನಲ್ಲಿ, ಧರ್ಮ, ಜಾತಿ, ಜನಾಂಗದ ಹೆಸರಿನಲ್ಲಿ ವಿಭಜಿಸುವ ಎಲ್ಲಾ ಶಕ್ತಿಗಳನ್ನು ಸೋಲಿಸಬೇಕಿದೆ. ■

# ಲೆನಿನ್‌ರಿಗೆ ಕ್ರಾಂತಿಕಾರಿ ಗೌರವ...

ಪುಟ 1ರಿಂದ

ಬರೆದರು, ಲಕ್ಷಾಂತರ ಪೋಸ್ಟರ್‌ಗಳನ್ನು ಅಂಟಿಸುತ್ತಾ ಹಾಗೂ ಕೋಟ್ಯಾಂತರ ಕರಪತ್ರಗಳನ್ನು ಹಂಚುವುದರ ಮೂಲಕ ಕಾರ್ಯಕ್ರಮದ ಸಂದೇಶವನ್ನು ಹರಡಿದರು. ದೇಶದ ಎಲ್ಲಾ ರಾಜ್ಯಗಳಲ್ಲಿಯೂ ನಡೆದ ಕಾರ್ಯಕ್ರಮಗಳ ಸಮಾರೋಪವನ್ನು ಕಲ್ಕತ್ತಾದಲ್ಲಿ ಜನವರಿ 21 ರಂದು ಸಂಘಟಿಸಲಾಗಿತ್ತು. ಎಲ್ಲೆಡೆ, ಎಡವಾದಿ ಚಿಂತನೆಗೆ ಆಕರ್ಷಣೆಯುಳ್ಳ ಜನರೆಲ್ಲರನ್ನೂ ಒಳಗೊಂಡಿದ್ದ 'ಮಹಾನ್ ಲೆನಿನ್ ಮರಣ ಶತಾಬ್ದಿ ಸಮಿತಿ'ಗಳನ್ನು ರಚಿಸಲಾಯಿತು. ಬೇರೆ ಎಡ ಪಕ್ಷಗಳ ಕಾರ್ಯಕರ್ತರು ಹಾಗೂ ಬೆಂಬಲಿಗರೂ ಸಹ ಈ ಸಮಿತಿಗಳ ಭಾಗವಾದರು. ಲೆನಿನ್‌ರ ಜೀವನ ಹಾಗೂ ಚಿಂತನೆಗಳು ಹಾಗೂ ಇಂದಿನ ದಿನಗಳಲ್ಲಿ ನಾವು ವಹಿಸಬೇಕಾದ ಜವಾಬ್ದಾರಿಯನ್ನು ನೆನಪಿಸುವ ಆ ಚಿಂತನೆಗಳ ಪ್ರಸ್ತುತತೆ ಕುರಿತಾಗಿ ಸಾವಿರಾರು ಚರ್ಚೆಗಳನ್ನು ಸಂಘಟಿಸಲಾಯಿತು. ಲೆನಿನ್ ಜೀವನ ಹಾಗೂ ಚಿಂತನೆಗಳನ್ನು ಜನಸಾಮಾನ್ಯರಿಗೆ ತಲುಪಿಸುವುದು ಈ ಚರ್ಚೆಗಳ ಉದ್ದೇಶವಾಗಿತ್ತು. ಅಲ್ಲದೇ ವೈಚಾರಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಹಾಗೂ ನೈತಿಕವಾಗಿ ಬೆಳವಣಿಗೆ ಹೊಂದಲು ಸಂಘರ್ಷಮಯವಾದ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳುವಲ್ಲಿ ಹಾಗೂ ಉನ್ನತ ಕ್ರಾಂತಿಕಾರಿ ಚಾರಿತ್ರ್ಯ ಬೆಳೆಸಿಕೊಳ್ಳುವಲ್ಲಿ ಎಸ್‌ಯುಸಿಐ (ಕಮ್ಯೂನಿಸ್ಟ್)ನ ನಾಯಕರು ಹಾಗೂ ಕಾರ್ಯಕರ್ತರಿಗೆ ಇದೊಂದು ಸದಾವಕಾಶವಾಗಿ ಒದಗಿಬಂತು.

ಕೊರೆಯುವ ಚಳಿಯ ನಡುವೆಯೇ ಕಾರ್ಖಾನೆ ಕಾರ್ಮಿಕರು, ಬಡ ರೈತರು, ಶಿಕ್ಷಕರು, ವಿದ್ಯಾರ್ಥಿಗಳು, ಯುವಕರು, ಮಹಿಳೆಯರು, ಶಿಕ್ಷಣ ತಜ್ಞರು, ವೈದ್ಯರು, ವಕೀಲರು, ಇಂಜಿನಿಯರುಗಳು, ಸಾಹಿತಿಗಳು, ಪತ್ರಕರ್ತರು, ಸಣ್ಣ ವ್ಯಾಪಾರಸ್ಥರು, ವ್ಯಾನ್, ರಿಕ್ಷಾ ಚಾಲಕರು, ಕೆಲವು ಅಧಿಕಾರಿಗಳು, ಹೀಗೆ ಸಮಾಜದ ಎಲ್ಲಾ ಸ್ತರಗಳ ಜನತೆ ರಾಜ್ಯದ ಮೂಲೆಮೂಲೆಗಳಿಂದ ಸಾಗರದಂತೆ ಹರಿದು ಬಂದರು. ಕೆಂಬಾವುಟಗಳಿಂದ ಮಹಾನ್ ಲೆನಿನ್‌ರ ಭಾವಚಿತ್ರದೊಂದಿಗೆ ಅಲಂಕೃತಗೊಂಡ ಮೈದಾನ ಕ್ರಾಂತಿಕಾರಿ ಉತ್ಸಾಹದೊಂದಿಗೆ ಎಲ್ಲರನ್ನೂ ಬರಮಾಡಿಕೊಂಡಿತ್ತು. ಆಳುವ ಸರ್ಕಾರ ಜನರಲ್ಲಿ ಕೋಮುವಾದ–ಧಾರ್ಮಿಕ ಮತಾಂಧತೆಯ ಮತ್ತು ಏರಿಸುತ್ತಿರುವಾಗ, ಇನ್ನುಳಿದ ಪಕ್ಷಗಳು ಮತ–ಅಧಿಕಾರದ ಲಾಲಸೆಯಲ್ಲಿ ಚುನಾವಣಾ ಲೆಕ್ಕಾಚಾರಗಳಲ್ಲಿ ನಿರತವಾಗಿರುವಾಗ, ಉನ್ನತ ಮೌಲ್ಯಗಳನ್ನು ಆಧಾರವಾಗಿಟ್ಟುಕೊಂಡು ನೈಜ ಎಡವಾದಿ ಹೋರಾಟಗಳನ್ನು ಬೆಳೆಸುತ್ತಿರುವ ಪರ್ಯಾಯ ಶಕ್ತಿಯು ಅಂದು ಜನತೆಗೆ ಗೋಚರವಾಗಿತ್ತು.

ಈ ಸಂದರ್ಭದಲ್ಲಿ ನಾದಿಯಾ ಜಿಲ್ಲೆಯ ಕೃಷ್ಣನಗರದ ರೈತ ಹೋರಾಟಗಳ ಸಂಘಟನಾಕಾರರಾಗಿದ್ದ ಪರೇಶ್ ಹಾಲ್ದಾರ್ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಸೋವಿಯತ್ ಮಾದರಿಯಲ್ಲೇ ರೈತರ ಸಮಿತಿಗಳನ್ನು ರಚಿಸುತ್ತಾ ಇಂದು ರೈತ ಹೋರಾಟಗಳಿಗೆ ತಾವು ಬಲ ತುಂಬುತ್ತಿದ್ದೇವೆಂಬುದನ್ನು ವಿವರಿಸಿದರು. ಹಾಗೂ ಸೋವಿಯತ್ ರಷ್ಯಾ ರೈತರ ಬದುಕಿನ ಸಮಸ್ಯೆಗಳನ್ನು ಹೇಗೆ ಪರಿಹರಿಸಿತು ಎಂಬುದು ನಮಗೆ ತಿಳಿಯುತ್ತಿದೆ ಎಂದರು. ಅವರ ಸ್ನೇಹಿತ ಬಿಶ್ವನಾಥ್ ಮಂಡಲ್ ಸಹ ಕಾರ್ಯಕ್ರಮಕ್ಕೆ ಆಗಮಿಸಿದ್ದರು. ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಆಂಗ್ಲ ಭಾಷೆಯನ್ನು ರದ್ದುಗೊಳಿಸಿದ್ದರ ವಿರುದ್ಧ ಎಸ್‌ಯುಸಿಐ (ಕಮ್ಯೂನಿಸ್ಟ್) ಬೆಳೆಸಿದ್ದ ಪ್ರಬಲ ಹೋರಾಟಗಳನ್ನು ಇವರು ಈ ಹಿಂದೆ ಗಮನಿಸಿದ್ದಾರೆ. ಇಂತಹ ಬೃಹತ್ ಕಾರ್ಯಕ್ರಮವನ್ನು ಸಂಘಟಿಸಿರುವುದನ್ನು ಕಂಡು ಅವರು ಸಂತೋಷ ವ್ಯಕ್ತಪಡಿಸಿದರು. ಪುರುಲಿಯಾ ಜಿಲ್ಲೆಯ ಮಹಿಳೆ ಅಶ್ಥಮಿ ಪ್ರಮಾಣಿಕ್ ಶೋಷಣೆ ಇಲ್ಲದ, ಶಾಂತಿಯುತವಾಗಿದ್ದ ಸೋವಿಯತ್ ಮಹಿಳೆಯರ ಬದುಕಿನ ಬಗ್ಗೆ ತಿಳಿದುಕೊಂಡರು. ಮಹಿಳಾ ಕಾರ್ಮಿಕರಿಗೆ ವೇತನಸಹಿತ ಮಾತೃತ್ವ ರಜೆ ದೊರಕುವಂತಹ ಕನಸಿನ ಜಗತ್ತು ಅದು; ಅಂತಹ ಸಮಾಜದ ಸೃಷ್ಟಿ ಇಲ್ಲಿ ಹೇಗೆ ಸಾಧ್ಯ ಎಂಬ ಪ್ರಶ್ನೆ ಕೇಳಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಉತ್ತರ ಬಂಗಾಳದ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳು ರಷ್ಯಾದಲ್ಲಿದ್ದ ಪರಿಷ್ಕರಣಾವಾದಿ ಹಾಗೂ ಹುಸಿ ಮಾರ್ಕ್ಸ್‌ವಾದಿಗಳ ವಿರುದ್ಧ ಹೋರಾಡಿ ಲೆನಿನ್‌ರು ಸಮಾಜವಾದಿ ವ್ಯವಸ್ಥೆಯನ್ನು ಹೇಗೆ ಸ್ಥಾಪಿಸಿದರೆಂಬುದನ್ನು ತಿಳಿದುಕೊಂಡರು. ರಷ್ಯಾದಲ್ಲಿ ಎಲ್ಲರಿಗೂ ಉಚಿತವಾಗಿ ಆರೋಗ್ಯ ದೊರಕುತ್ತಿದ್ದುದರ ಬಗ್ಗೆ ತಿಳಿದುಕೊಂಡರು. ಸಾಯುತ್ತಿದ್ದ ಸೈನಿಕರೊಬ್ಬರನ್ನು ದೈಹಿಕವಾಗಿ, ಮಾನಸಿಕವಾಗಿ ಗುಣಮುಖರನ್ನಾಗಿಸಿ ಫ್ಯಾಸಿವಾದಿಗಳ ವಿರುದ್ಧ ಹೋರಾಡುವಂತೆ ತಯಾರುಮಾಡಿದ್ದನ್ನು ನೆನಪಿಸಿಕೊಂಡರು. ಅಂತಹ ಆರೋಗ್ಯ ವ್ಯವಸ್ಥೆ ಈ ದೇಶದಲ್ಲಿಯೂ ಸ್ಥಾಪಿಸಲು ಏನು ಮಾಡಬೇಕೆಂಬುದರ ಬಗ್ಗೆ ತಿಳಿಯಲು ಆಸಕ್ತಿ ತೋರಿಸಿದರು. ನೆರೆ ರಾಷ್ಟ್ರ ನೇಪಾಳದ ವೈದ್ಯರೊಬ್ಬರು ಕಾರ್ಯಕ್ರಮದ ಬಗ್ಗೆ ಮನದುಂಬಿ ಸಂತೋಷ ವ್ಯಕ್ತಪಡಿಸಿದರು. ಉತ್ತರ ಮೇದಿನಿಪುರದ ರೈತ ರಾಹುಲ್ ಡೆ, ಚಂದನ್‌ದಾಸ್, ರಷ್ಯಾದಲ್ಲಿ ರೈತರು ಹಾಗೂ ಕಾರ್ಮಿಕರ ನಡುವೆ ಸಂಘರ್ಷಮಯ ಐಕ್ಯತೆಯನ್ನು ಸಾಧಿಸಿ ಕಾರ್ಮಿಕ ರಾಜ್ಯ ಸ್ಥಾಪಿಸಿದ್ದು ಹೇಗೆ ಎಂಬುದನ್ನು ತಿಳಿಯಲು ದೂರದೂರಿನಿಂದ ಬಂದಿದ್ದರು. ಒಟ್ಟಾರೆಯಾಗಿ ಇಂತಹ ಅನೇಕ ಅಭಿಪ್ರಾಯಗಳು, ಅನುಭವಗಳು, ಅನುಭೂತಿಗಳು ಈ ಸಂದರ್ಭದಲ್ಲಿ ವ್ಯಕ್ತವಾದವು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಬೇಕಿದ್ದ ಪಕ್ಷದ ಪಾಲಿಟ್‌ಬ್ಯೂರೊ ಸದಸ್ಯರಾದ ಕಾಮ್ರೇಡ್ ಅಸಿತ್ ಭಟ್ಟಾಚಾರ್ಯ ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಕಾರಣ ಅವರ ಜವಾಬ್ದಾರಿಯನ್ನು ಪಕ್ಷದ ಮತ್ತೋರ್ವ ಪಾಲಿಟ್‌ಬ್ಯೂರೊ ಸದಸ್ಯರಾದ ಕಾಮ್ರೇಡ್ ಸೌಮೆನ್ ಬೋಸ್ ವಹಿಸಿಕೊಂಡರು. ಮೊದಲನೆಯದಾಗಿ ಪಕ್ಷದ ಕೇಂದ್ರ ಸಮಿತಿ ಸದಸ್ಯರಾದ ಕಾಮ್ರೇಡ್ ಜೇಸನ್ ಜೋಸೆಫ್ ಮಾತನಾಡುತ್ತಾ, ಸೋವಿಯತ್ ರಷ್ಯಾದ ಅನುಪಸ್ಥಿತಿಯಲ್ಲಿ ಜಗತ್ತಿನ ಬಂಡವಾಳಶಾಹಿ–ಸಾಮ್ರಾಜ್ಯಶಾಹಿ ಶಕ್ತಿಗಳು ಹೇಗೆ ಅಟ್ಟಹಾಸ ಮೆರೆಯುತ್ತಿವೆ ಎಂಬುದನ್ನು ವಿವರಿಸಿದರು. ಸೋವಿಯತ್ ಬಣವು ಅಸ್ತಿತ್ವದಲ್ಲಿ ಇದ್ದಿದ್ದರೆ ಪ್ಯಾಲೆಸ್ಟೀನ್‌ನ ಮೇಲೆ ಇಸ್ರೇಲ್ ಯುದ್ಧವಾಗಲಿ ಅಥವಾ ರಷ್ಯಾ–ಉಕ್ರೇನ್ ಯುದ್ಧವಾಗಲಿ ಜರುಗುವುದು ಅಸಾಧ್ಯವಾಗುತ್ತಿತ್ತು ಎಂದರು. ಬಂಡವಾಳಶಾಹಿಪರ ಧೋರಣೆಯನ್ನು ಬಿಜೆಪಿ ಹೇಗೆ ತಾಳುತ್ತಿದೆಯೋ ಇದಕ್ಕೆ ಕೇರಳದ ಸಿಪಿಐ(ಎಂ) ಏನೂ ಭಿನ್ನವಾಗಿಲ್ಲ ಎಂದರು. ನಂತರ ಪಕ್ಷದ ಪಾಲಿಟ್‌ಬ್ಯೂರೊ ಸದಸ್ಯರು ಹಾಗೂ ಪಶ್ಚಿಮ ಬಂಗಾಳದ ರಾಜ್ಯ ಕಾರ್ಯದರ್ಶಿಗಳಾದ ಕಾಮ್ರೇಡ್ ಚಂಡಿದಾಸ್ ಭಟ್ಟಾಚಾರ್ಯ ಮಾತನಾಡುತ್ತಾ, ಲೆನಿನ್‌ರ ಹೆಸರೇ ಎಲ್ಲರಲ್ಲಿಯೂ ಸ್ಫೂರ್ತಿ ತುಂಬುತ್ತದೆ ಹಾಗೂ ಬಿಜೆಪಿಯ ರಾಮ ಮಂದಿರದ ರಾಜಕಾರಣವಾಗಲಿ, ಟಿಎಮ್‌ಸಿಯ ದೇವಸ್ಥಾನ–ಮಸೀದಿ–ಗುರುದ್ವಾರ–ಚರ್ಚ್ ರ್‍ಯಾಲಿಯಾಗಲಿ ಅಥವಾ ಕಾಂಗ್ರೆಸ್ಸಿನ ನ್ಯಾಯಯಾತ್ರಾ ಕಾರ್ಯಕ್ರಮವಾಗಲಿ ಎಲ್ಲವೂ ಚುನಾವಣಾ ರಾಜಕಾರಣವೇ ಎಂದು ವಿವರಿಸಿದರು.

ಅಂತಿಮವಾಗಿ, ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್ ಮುಖ್ಯ ಭಾಷಣವನ್ನು ಮಾಡಿದರು. ಬಡವ–ಶ್ರೀಮಂತನೆಂಬ ಭೇದ ಸರ್ವಕಾಲಕ್ಕೂ ಇರಲಿಲ್ಲ. ಹಾಗೆಯೇ ಸರ್ವಕಾಲಕ್ಕೂ ಮುಂದುವರೆಯುವುದೂ ಇಲ್ಲ. ಜಗತ್ತಿನ ಮೊದಲ ಶೋಷಣೆ ರಹಿತ ಸಮಾಜವಾದಿ ರಾಷ್ಟ್ರ ಕಟ್ಟುವ ಮೂಲಕ ಮಾರ್ಕ್ಸ್‌ವಾದಿ ವೈಚಾರಿಕತೆಯನ್ನು ಮಹಾನ್ ಲೆನಿನ್‌ರು ವಾಸ್ತವನ್ನಾಗಿಸಿದರು ಎಂದರು. ಹುಸಿ ಮಾರ್ಕ್ಸ್‌ವಾದಿಗಳ ಮುಖವಾಡ ಕಳಚಿದ್ದಷ್ಟೇ ಅಲ್ಲದೆ, ನೈಜ ಕಮ್ಯೂನಿಸ್ಟ್ ಪಕ್ಷ ಕಟ್ಟುವ ಪ್ರಕ್ರಿಯೆಯನ್ನು ಅವರು ತೋರಿಸಿಕೊಟ್ಟರು. ಮತ ಆಧಾರಿತ ಬೂರ್ಜ್ವಾ, ಪೆಟಿ–ಬೂರ್ಜ್ವಾ ಪಕ್ಷಗಳೆಲ್ಲಾ ಅಧೀನವಾಗಿರುವ ಶೋಷಕ ಬಂಡವಾಳಶಾಹಿ ವ್ಯವಸ್ಥೆಯಿಂದಲೇ ಹೇಗೆ ದೇಶದಲ್ಲಿನ ಎಲ್ಲಾ ಅಸಮಾನತೆಗಳು, ವೈಪರೀತ್ಯಗಳು, ರೋಗಗಳು, ಅಸ್ವಸ್ಥತೆಗಳು ಮತ್ತು ಅನ್ಯಾಯಗಳು ಹುಟ್ಟಿಕೊಂಡಿವೆ ಎಂಬುದನ್ನು ವಿವರಿಸಿದರು. ಬಲಪಂಥೀಯ ರಾಜಕೀಯವನ್ನು ಬಹಿರಂಗಗೊಳಿಸುತ್ತಾ ಎಡಪರ್ಯಾಯ ಹೋರಾಟಗಳನ್ನು ಮುನ್ನಡೆಸುವುದು ಈ ಘಳಿಗೆಯ ಅವಶ್ಯಕತೆಯಾಗಿದೆ ಎಂದು ಕರೆ ಕೊಟ್ಟರು. ಕಾಮ್ರೇಡ್ ಸೌಮೆನ್ ಬೋಸ್‌ರವರ ಅಂತಿಮ ಮಾತುಗಳ ನಂತರ, ಸಭೆಯು ಅಂತರರಾಷ್ಟ್ರೀಯ ಗೀತೆಯೊಂದಿಗೆ ಮುಕ್ತಾಯಗೊಂಡಿತು. ■

Registered Newspaper
Karmika Drushtikona RNI. KARKAN/45551/88 Reg. No. CPMG/KA/BGW-62/2021-2023. Posted at Bangalore PSO, Mysore Road, Bangalore-26 (20th & 25th of every month)

# ಸಾಮಾನ್ಯ ದರ್ಜೆ ಮತ್ತು 2ನೇ ದರ್ಜೆಯ ಸ್ಲೀಪರ್ ಕೋಚ್‌ಗಳನ್ನು ಹೆಚ್ಚಿಸಿ! ಎಐಡಿವೈಓ ದೇಶವ್ಯಾಪಿ ಪ್ರತಿಭಟನೆ ಆಗ್ರಹ!!

ರೈಲುಗಳಲ್ಲಿ ಅವಶ್ಯಕತೆಗನುಗುಣವಾಗಿ ಜನರಲ್ ಮತ್ತು ಸ್ಲೀಪರ್ ಬೋಗಿಗಳ ಸಂಖ್ಯೆ ಹೆಚ್ಚಿಸಬೇಕು, ರೈಲ್ವೆ ಇಲಾಖೆಯಲ್ಲಿ ಖಾಲಿ ಇರುವ ಸುಮಾರು 3 ಲಕ್ಷಕ್ಕೂ ಅಧಿಕ ಹುದ್ದೆಗಳನ್ನು ತಕ್ಷಣವೇ ಭರ್ತಿ ಮಾಡಬೇಕು, ವಲಸೆ ಕಾರ್ಮಿಕರಿಗಾಗಿ ಪ್ರಮುಖ ನಗರಗಳ ನಡುವೆ ಸಾಮಾನ್ಯ ಕಾದಿರಿಸದ (UR) ಕೋಚ್‌ಗಳನ್ನು ಹೊಂದಿರುವ ರೈಲುಗಳನ್ನು ಹೆಚ್ಚಿಸಬೇಕು ಎಂದು ಆಗ್ರಹಿಸಿ ಮಾರ್ಚ್ 9ರಂದು ಎಐಡಿವೈಓ ದೇಶದಾದ್ಯಂತ ಪ್ರತಿಭಟನೆಗಳನ್ನು ನಡೆಸಿತು. ಈ ಮೊದಲು ಜಾರಿಯಲ್ಲಿದ್ದಂತೆ ಹಿರಿಯ ನಾಗರಿಕರಿಗೆ ಟಿಕೆಟ್ ದರದಲ್ಲಿ ಶೇ. 50ರಷ್ಟು ರಿಯಾಯಿತಿಯನ್ನು ಒದಗಿಸಬೇಕು. ಅತಿಯಾದ ರದ್ದತಿ ಶುಲ್ಕಗಳು ಹಾಗೂ ಅಸಮಂಜಸವಾದ ನಿಯಮಾವಳಿಗಳನ್ನು ತೆಗೆದುಹಾಕಬೇಕು ಎಂಬುದು ಆಗ್ರಹ ಪತ್ರದಲ್ಲಿದ್ದ ಇನ್ನಿತರ ಒತ್ತಾಯಗಳಾಗಿದ್ದವು. ನಮ್ಮ ಪಕ್ಷದ ಯುವಜನ ಮುಂದಳ ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಶನ್ (ಎಐಡಿವೈಒ) ಅಖಿಲ ಭಾರತ ಸಮಿತಿಯು ದೇಶಾದ್ಯಂತ ಪ್ರತಿಭಟನೆ ನೀಡಿದ್ದ ಈ ಕರೆಗೆ ಓಗೊಟ್ಟು ಪ್ರತಿಭಟನಾ ದಿನವನ್ನು ಆಚರಿಸಲಾಯಿತು. ಇದರ ಅಂಗವಾಗಿ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆಸಿ, ರೈಲ್ವೆ ಸ್ಟೇಷನ್ ಮ್ಯಾನೇಜರ್‌ಗಳ ಮೂಲಕ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಮತ್ತು ಕೇಂದ್ರೀಯ ರೈಲ್ವೇ ಬೋರ್ಡ್‌ಗೆ ಮನವಿ ಸಲ್ಲಿಸಲಾಯಿತು. ರಾಯಚೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಎಐಡಿವೈಓ ರಾಜ್ಯ ಅಧ್ಯಕ್ಷರಾದ ಶರಣಪ್ಪ ಉದ್ಬಾಳ್ ಮತ್ತು ಬೆಂಗಳೂರಿನಲ್ಲಿ ಆಗ್ರಹಪತ್ರ ಸಲ್ಲಿಕೆ ಕಾರ್ಯಕ್ರಮದಲ್ಲಿ ಎಐಡಿವೈಓ ರಾಜ್ಯ ಕಾರ್ಯದರ್ಶಿ ಸಿದ್ದಲಿಂಗ ಬಾಗೇವಾಡಿ ನೇತೃತ್ವ ವಹಿಸಿದ್ದರು. ಅದರಂತೆಯೇ ಕಲಬುರಗಿ, ಶಹಬಾದ್, ಧಾರವಾಡ, ಮೈಸೂರು, ವಿಜಯನಗರ, ವಾಡಿ, ವಿಜಯಪುರ, ಕೊಪ್ಪಳ, ಬಳ್ಳಾರಿ ನಗರಗಳಲ್ಲಿಯೂ ಪ್ರತಿಭಟನೆ ನಡೆಸಿ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಲಾಯಿತು.










## ಲೋಕಸಭಾ ಚುನಾವಣೆ–2024

# ಕರ್ನಾಟಕದ 19 ಕ್ಷೇತ್ರಗಳಲ್ಲಿ ಎಸ್‌ಯುಸಿ(ಸಿ) ಸ್ಪರ್ಧೆ

| ಕ್ರಮ ಸಂಖ್ಯೆ | ಕ್ಷೇತ್ರ ಸಂಖ್ಯೆ | ಕ್ಷೇತ್ರದ ಹೆಸರು | ಅಭ್ಯರ್ಥಿಯ ಹೆಸರು |
|---|---|---|---|
| 1 | 2 | ಬೆಳಗಾವಿ | ಕಾಮ್ರೇಡ್ ಲಕ್ಷ್ಮಣ್ ಜಡಗಣ್ಣವರ್ |
| 2 | 3 | ಬಾಗಲಕೋಟೆ | ಕಾಮ್ರೇಡ್ ಮಲ್ಲಿಕಾರ್ಜುನ ಎಚ್.ಟಿ. |
| 3 | 4–ಪ.ಜಾ | ವಿಜಯಪುರ | ಕಾಮ್ರೇಡ್ ನಾಗಜ್ಯೋತಿ |
| 4 | 5–ಪ.ಜಾ | ಕಲಬುರ್ಗಿ | ಕಾಮ್ರೇಡ್ ಎಸ್.ಎಂ.ಶರ್ಮ |
| 5 | 6–ಪ.ಪಂ | ರಾಯಚೂರು | ಕಾಮ್ರೇಡ್ ರಾಮಲಿಂಗಪ್ಪ |
| 6 | 8 | ಕೊಪ್ಪಳ | ಕಾಮ್ರೇಡ್ ಶರಣು ಗಡ್ಡಿ |
| 7 | 9–ಪ.ಪಂ | ಬಳ್ಳಾರಿ | ಕಾಮ್ರೇಡ್ ದೇವದಾಸ್ಎ. |
| 8 | 10 | ಹಾವೇರಿ | ಕಾಮ್ರೇಡ್ ಗಂಗಾಧರ್ ಬಡಿಗೇರ್ |
| 9 | 11 | ಧಾರವಾಡ | ಕಾಮ್ರೇಡ್ ಶರಣಬಸವ ಗೋನವಾರ |
| 10 | 12 | ಉತ್ತರ ಕನ್ನಡ | ಕಾಮ್ರೇಡ್ ಗಣಪತಿ ವಿ. ಹೆಗಡೆ |
| 11 | 13 | ದಾವಣಗೆರೆ | ಕಾಮ್ರೇಡ್ ತಿಪ್ಪೇಸ್ವಾಮಿ |
| 12 | 18–ಪ.ಜಾ | ಚಿತ್ರದುರ್ಗ | ಕಾಮ್ರೇಡ್ ಕಲಾವತಿ ಎನ್. |
| 13 | 19 | ತುಮಕೂರು | ಕಾಮ್ರೇಡ್ ಎಸ್.ಎನ್.ಸ್ವಾಮಿ |
| 14 | 21 | ಮೈಸೂರು | ಕಾಮ್ರೇಡ್ ಸುನಿಲ್ ಟಿ.ಆರ್. |
| 15 | 22–ಪ.ಜಾ | ಚಾಮರಾಜನಗರ | ಕಾಮ್ರೇಡ್ ಸುಮ ಎಸ್. |
| 16 | 23 | ಬೆಂಗಳೂರು ಗ್ರಾಮಾಂತರ | ಕಾಮ್ರೇಡ್ ನಿರ್ಮಲ ಎಚ್.ಎಲ್. |
| 17 | 24 | ಬೆಂಗಳೂರು ಉತ್ತರ | ಕಾಮ್ರೇಡ್ ಹೇಮಾವತಿ ಕೆ. |
| 18 | 25 | ಬೆಂಗಳೂರು ಕೇಂದ್ರ | ಕಾಮ್ರೇಡ್ ಎಚ್.ಪಿ. ಶಿವಪ್ರಕಾಶ್ |
| 19 | 27 | ಚಿಕ್ಕಬಳ್ಳಾಪುರ | ಕಾಮ್ರೇಡ್ ಷಣ್ಮುಗಂ |

# ‘ಕಿಸಾನ್ ಸತ್ಯಾಗ್ರಹ’ ಪ್ರದರ್ಶನಕ್ಕೆ ತಡೆ– ಎಐಕೆಕೆಎಂಎಸ್ ಖಂಡನೆ

ಬೆಂಗಳೂರಿನ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ 15ನೇ ಆವೃತ್ತಿಯಲ್ಲಿ ಎರಡು ವರ್ಷಗಳ ಹಿಂದೆ ದೆಹಲಿಯ ಗಡಿಯಲ್ಲಿ ನಡೆದ ರೈತರ ಹೋರಾಟದ ಸಾಕ್ಷ್ಯಚಿತ್ರ ‘ಕಿಸಾನ್ ಸತ್ಯಾಗ್ರಹ’ದ ಪ್ರದರ್ಶನಕ್ಕೆ ಅವಕಾಶ ನೀಡದ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಕ್ರಮವನ್ನು ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆ **(AIKKMS)** ಕರ್ನಾಟಕ ರಾಜ್ಯ ಸಮಿತಿಯು ತೀವ್ರವಾಗಿ ಖಂಡಿಸಿ ಮಾರ್ಚ್ 4ರಂದು ಪತ್ರಿಕಾ ಹೇಳಿಕೆಯನ್ನು ಬಿಡುಗಡೆ ಮಾಡಿತು.

ಇದು ಪ್ರಪಂಚದಾದ್ಯಂತ ಪ್ರಶಂಸಿಸಲ್ಪಟ್ಟ ಅದ್ಭುತವಾದ ರೈತ ಚಳುವಳಿಯನ್ನು ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಮತ್ತು ವಿಶೇಷವಾಗಿ ರೈತ ಸಮುದಾಯಗಳ ಹಿತಾಸಕ್ತಿಗಾಗಿ ತಮ್ಮ ಪ್ರಾಣವನ್ನು ಅರ್ಪಿಸಿದ ಹುತಾತ್ಮರನ್ನು ಅವಮಾನಿಸುವ ಕ್ರಮವಾಗಿದೆ. ಈ ಡಾಕ್ಯುಮೆಂಟರಿಯನ್ನು ಕನ್ನಡದ ಖ್ಯಾತ ನಿರ್ದೇಶಕ ಶ್ರೀ ಕೇಸರಿ ಹರವೂ ನಿರ್ದೇಶಿಸಿದ್ದಾರೆ. ಸಾಕ್ಷ್ಯಚಿತ್ರದಲ್ಲಿ ಚಿತ್ರಿಸಲಾದ ವಿಷಯವು ಸೂಕ್ಷ್ಮ ವಿಷಯವಾಗಿದೆ ಮತ್ತು ಆದ್ದರಿಂದ ಅದನ್ನು ಚಲನಚಿತ್ರೋತ್ಸವದಲ್ಲಿ ಪ್ರದರ್ಶಿಸುವುದನ್ನು ತಡೆಹಿಡಿಯಬೇಕು ಎಂಬ ಕಾರಣವನ್ನು ಕೇಂದ್ರದ ಅಧಿಕಾರಿಗಳು ನೀಡಿದ್ದಾರೆ. ಆದರೆ ಸಾಕ್ಷ್ಯಚಿತ್ರದಲ್ಲಿ ಹೇಗೆ ಮತ್ತು ಯಾವ ವಿಷಯವು ಸೂಕ್ಷ್ಮವಾಗಿದೆ ಎಂಬುದರ ಕುರಿತು ಅವರು ಮೌನವಾಗಿದ್ದಾರೆ. ಅಧಿಕಾರಸ್ಥರ ಈ ಮಾರ್ಗವು ಸಿನಿ ಕಲಾವಿದರು, ರಂಗಭೂಮಿ ಕಲಾವಿದರು ಮತ್ತು ಇತರರ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಉಲ್ಲಂಘಿಸುತ್ತದೆ. ಈ ವಿಷಯದ ಕುರಿತು ಭಾರತದ ಪ್ರಧಾನಿಗಳ ತತ್‌ಕ್ಷಣದ ಮಧ್ಯಪ್ರವೇಶವನ್ನು ಬಯಸುತ್ತಾ, ‘ಕಿಸಾನ್ ಸತ್ಯಾಗ್ರಹ’ ಸಾಕ್ಷ್ಯಚಿತ್ರ ಪ್ರದರ್ಶನದ ಮೇಲಿನ ನಿಷೇಧವನ್ನು ಹಿಂತೆಗೆದುಕೊಂಡು ಅದನ್ನು ಪ್ರದರ್ಶಿಸಲು ಅವಕಾಶ ಮಾಡಿಕೊಡುಬೇಕು ಎಂದು ಎಐಕೆಕೆಎಂಎಸ್ ಕರ್ನಾಟಕ ರಾಜ್ಯ ಸಮಿತಿಯು ಆಗ್ರಹಿಸುತ್ತದೆ.

Statement about ownership and other particulars about newspaper **KARMIKA DRUSHTIKONA** to be printed in the first issue after last day of February
**FORM IV (See Rule 8)**

Place of Publication : No. 31, 3rd Cross, Malleswaram, Bengaluru-03
Periodicity of its Publication : Monthly
Printer's Name : K.Radhakrishna
Nationality : Indian
Address : No. 31, 3rd Cross, Malleswaram, Bengaluru-03
Publisher's Name : K.Radhakrishna
Nationality : Indian
Address : No. 31, 3rd Cross, Malleswaram, Bengaluru-03
Editor's Name : K.Radhakrishna
Nationality : Indian
Address : No. 31, 3rd Cross, Malleswaram, Bengaluru-03
Name and address of the individuals Who own the newspapers and Printers or Shareholders holding More than one percent of the total capital: **Karanataka State Committee, SOCIALIST UNITY CENTRE OF INDIA (COMMUNIST)**

I, K.Radhakrishna hereby declare that the particulars given above are true to the best of my knowledge and belief.

Date: 01-03-2024 Sd/-
K.Radhakrishna
Signature of Publisher

Published by: K.Radhakrishna on behalf of **SOCIALIST UNITY CENTRE OF INDIA-COMMUNIST,** Karnataka State Committee, No.31, 3rd Cross, Malleswaram, Bangalore-03 Ph: 080-23561443. E-mail: karmikadrushtikona@gmail.com and Printed by him at Balaji Publications, No.16/2, Bychatura Road, Magadi Town, Magadi-562120 **Website: www.sucicommunist.org EDITOR: K.RADHAKRISHNA**